ಬೋಧನೆ ಪ್ರಚೋದನೆ

ಲಂಕೇಶ್

ಜನವರಿ 15, 2014 ಪುಟ 20 ರೂ. 15/-



ಅಮ್ ಆದ್ಮಿ ಮೆಚ್ಚುಗೆ & ಪ್ರಶ್ನೆಗಳು



ಹಸಿದ ಹುಲಿ! ಕುಪಿತ ಭೂಮಾತೆ?!

ನಾಯಕ್ ಕೊಲೆ




ಸುಪಾರಿ ಕೊಟ್ಟಿದ್ದು ACF ಹಿತ್ತಲಮಕ್ಕಿ ಕುಟುಂಬ!

ವಣಗೆರೆ: ಮೋದಿ ಮೋಡಿ v/s ಮಲ್ಲಿಕಾರ್ಜುನ್



ೋಕಾಯುಕ್ತದಲ್ಲೇ ಷ್ಟ ಇನ್ಸ್‌ಪೆಕ್ಟರ್ ಸವನಗೌಡ




ಕುಲಪತಿಯಾಗಿ ಕಲಿವಾಳ ವಕ್ಕರಿಸಿದ್ದೇಗೆ?



ಮಂಡ್ಯ ಸಿಕ್ಕಿಬಿದ್ದ ಮಿಮ್ಸ್ ವೈದ್ಯ ನಂದೀಶ್

ಅಂಚಿನಿಂದ....



ಡಾ.ವಾಸು ಎಚ್.ವಿ.

ಆಮ್ ಆದ್ಮಿ: ಮೆಚ್ಚುಗೆ, ನೆಚ್ಚುಗೆ ಮತ್ತು ಪ್ರಶ್ನೆಗಳ

ಭಾರತದಲ್ಲಿ ಈ ರೀತಿ ಎಂದೂ, ಯಾವ ಪಕ್ಷವೂ ಗೆದ್ದೇ ಇರಲಿಲ್ಲ ಎಂದು ಬಣ್ಣಿಸಲಾಗುತ್ತಿರುವುದರಲ್ಲಿ ವಾಸ್ತವವಿಲ್ಲ. ಈ ಗೆಲು ಸಂಗತಿ ಹಾಗಿರಲಿ, ವಿಕೇಂದ್ರೀಕರಣ, ಜನಸಾಮಾನ್ಯರ ಪರವಾದ ಕಲ್ಯಾಣ ಕಾರ್ಯಕ್ರಮಗಳು, ಗ್ರಾಮೀಣಾಭಿವೃದ್ಧಿಯ ವಿಚಾರ 80ರ ದಶಕದಲ್ಲಿ ರಾಮಕೃಷ್ಣ ಹೆಗಡೆಯವರ ಕುರಿತೂ ಮಾಧ್ಯಮಗಳಲ್ಲಿ ಪ್ರಶಂಸೆಯ ಮಳೆ ಹರಿದಿತ್ತು. ಮೊದಲ ಚುನಾವಣೆಯ ಇದಕ್ಕಿಂತ ಭಾರೀ ಗೆಲುವನ್ನು ಆಂಧ್ರದಲ್ಲಿ ಎನ್.ಟಿ.ರಾಮರಾವ್ ಗಳಿಸಿದ್ದರು. ಚಳವಳಿಯ ರೂಪದಲ್ಲಿದ್ದು ನಂತರ ಚುನಾವಣೆಯ ಗೆದ್ದು ಸ್ವತಂತ್ರವಾಗಿ ಅಧಿಕಾರ ಹಿಡಿದಿದ್ದರಲ್ಲಿ ಅಸ್ಸಾಂ ಗಣ ಪರಿಷತ್‌ನ ಉದಾಹರಣೆಯೂ ಈ ದೇಶದಲ್ಲಿದೆ.

ಈ ಮಾತುಗಳನ್ನು ಬರೆಯುತ್ತಿರುವಾಗ ಆಮ್ ಆದ್ಮಿ ಪಕ್ಷದ ಮುಖಂಡ ಮತ್ತು ದೆಹಲಿಯ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ದೆಹಲಿ ವಿಧಾನಸಭೆಯಲ್ಲಿ ವಿಶ್ವಾಸಮತ ಯಾಚನೆ ಮಾಡುತ್ತಿದ್ದಾರೆ. ಇಂದೇ ಅದರ ಕೊನೆ ದಿನವಾಗುವ ಸಾಧ್ಯತೆ ಇಲ್ಲವಾದರೂ, ಐದು ವರ್ಷಗಳ ಅವಧಿಯನ್ನು ಪೂರ್ಣಗೊಳಿಸುವ ವಿಶ್ವಾಸವಂತೂ ಇಲ್ಲ. ಹೊರಗಿನಿಂದ ಬೆಂಬಲ ನೀಡುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಅದು ಇಷ್ಟವಿರುವುದಿಲ್ಲ ಎಂಬುದಕ್ಕಿಂತ, ಸ್ವತಃ ಆಮ್ ಆದ್ಮಿ ಪಕ್ಷಕ್ಕೇ ಐದು ವರ್ಷಗಳ ಕಾಲ ಆಡಳಿತ ಪಕ್ಷವಾಗುವುದು ಬೇಕಿಲ್ಲ. ಅದು ಎಷ್ಟು ವರ್ಷ ಆಡಳಿತ ನಡೆಸುತ್ತದೆ ಮತ್ತು ಆಡಳಿತ ನಡೆಸುತ್ತಾ ತಾನು ಇದುವರೆಗೂ ನೀಡಿರುವ ಭರವಸೆಗಳನ್ನೆಲ್ಲಾ ಈಡೇರಿಸಲು ಶಕ್ತವಾಗುವುದಾ ಎಂಬ ಪ್ರಶ್ನೆ ಅಷ್ಟು ಮುಖ್ಯವಲ್ಲ. ಆದರೆ ಆಮ್ ಆದ್ಮಿ ಪಕ್ಷವು, ಭಾರತದ ಸಂಸದೀಯ ರಾಜಕಾರಣದಲ್ಲಿ ಒಂದು ಹೊಸ ವಿದ್ಯಮಾನವಾಗಿದೆ ಮತ್ತು ಅದು ಹಾಲಿ ಚಲಾವಣೆಯಲ್ಲಿರುವ ಎಲ್ಲಾ ಪಕ್ಷಗಳಿಗಿಂತ ಭಿನ್ನವಾದ ರೀತಿಯ ರಾಜಕಾರಣವನ್ನು ಮಾಡಲು ಹೊರಟಿದೆ ಎಂಬುದಂತೂ ವಾಸ್ತವ.

ಮೇಲ್ನೋಟಕ್ಕೆ ಅಸ್ತಿತ್ವಕ್ಕೆ ಬಂದ ಕೇವಲ ಒಂದು ವರ್ಷದಲ್ಲಿ, ನಗರ-ರಾಜ್ಯವೊಂದರ ಅಧಿಕಾರ ಹಿಡಿಯಲು ಶಕ್ತವಾಯಿತು (ಸ್ಥಾಪನೆ: 26 ನವೆಂಬರ್ 2012) ಎಂದು ಕಂಡುಬಂದರೂ, ಆಮ್ ಆದ್ಮಿ ಪಕ್ಷದ ಕಲ್ಪನೆ ಹಾಗೂ ಅದರ ಹಿಂದಿನ ಕೆಲಸ ಕೇವಲ ಒಂದು ವರ್ಷದ್ದಲ್ಲ. ಅದಕ್ಕೆ ಹಿಂದಿನ ಒಂದು ವರ್ಷ ಅದು ದೆಹಲಿ ಕೇಂದ್ರಿತವಾಗಿ ಅಣ್ಣಾ ಹಜಾರೆ ಅವರನ್ನು ಮುಖವಾಗಿಟ್ಟುಕೊಂಡು 'ಭ್ರಷ್ಟಾಚಾರದ ವಿರುದ್ಧದ ಆಂದೋಲನ'ವನ್ನು ನಡೆಸಿತ್ತು. ಅದಕ್ಕೂ ಹಿಂದೆ ಅರವಿಂದ್ ಕೇಜ್ರಿವಾಲ್, ಮನೀಷ್ ಸಿಸೋಡಿಯಾ ಮತ್ತು ಇನ್ನೂ ಕೆಲವರು ಹಲವು ವರ್ಷಗಳ ಕಾಲ 'ಪ್ರಜಾತಂತ್ರ'ದ ಯಂತ್ರಾಂಗಗಳ ಜೊತೆ ತಮ್ಮದೇ ರೀತಿಯಲ್ಲಿ ಗುದ್ದಾಟ ನಡೆಸಿದ್ದರು. ಈಗ ಕಣ್ಣೆದುರಿಗೆ ಕಾಣುತ್ತಿರುವ ಅದರ ಹೊಸ ಯುವ ನೇತಾರರು ಮಾತ್ರವಲ್ಲದೇ, ಭ್ರಷ್ಟಾಚಾರ ವಿರೋಧಿ ಹೋರಾಟದಲ್ಲಿ ಈ ಗುಂಪಿನೊಂದಿಗೆ ಸೇರಿಕೊಂಡ ಯೋಗೇಂದ್ರ ಯಾದವ್‌ರ ರೀತಿಯ ರಾಜಕೀಯ ವಿಶ್ಲೇಷಕ-ಕಾರ್ಯಕರ್ತರು ಮತ್ತು ಮಾಧ್ಯಮಗಳೆದುರು ವಕ್ತಾರರಾಗಿ ಕಾಣದ ಸಮಾಜಶಾಸ್ತ್ರಜ್ಞ ಆನಂದ್‌ಕುಮಾರ್‌ರಂತಹ ಚಿಂತಕರು ಹೀಗೆ ಇನ್ನೂ ಹಲವರೆಲ್ಲಾ ಆಮ್ ಆದ್ಮಿ ಪಕ್ಷದ ಜೊತೆ ಇದ್ದಾರೆ.


ಭಾರತದ ಸಂಸದೀಯ ಪ್ರಜಾತಂತ್ರದೊಂದಿಗೆ ಇಂತಹವರು ಕಳೆದ 10-15 ವರ್ಷಗಳಿಂದ ನಡೆಸಿದ ಎನ್‌ಕೌಂಟರ್‌ಗಳಿಂದ ಹುಟ್ಟುಹಾಕಿರುವ ಆಲೋಚನೆಯ ಫಲ ಆಮ್ ಆದ್ಮಿಯಾಗಿದೆ. ಇಷ್ಟನ್ನೆಲ್ಲಾ ಏಕೆ ಹೇಳಬೇಕಾಗಿದೆಯೆಂದರೆ, ನಾವು ಆಮ್ ಆದ್ಮಿ ಪಕ್ಷವನ್ನು ಒಪ್ಪಬಹುದು, ಬಿಡಬಹುದು; ಆದರೆ ಅದು ತನ್ನದೇ ಆದ ನಿರ್ದಿಷ್ಟ ಕಾರ್ಯಯೋಜನೆಯನ್ನು ಮತ್ತು ತತ್ವ ಪ್ರಣಾಳಿಕೆಯನ್ನು ಹೊಂದಿರುವುದಂತೂ ನಿಜ. ದಿಢೀರ್ ಚುನಾವಣಾ ಯಶಸ್ಸು ಅದಕ್ಕೆ ಸಿಕ್ಕಿರಬಹುದಾದರೂ, ಭಾರತದ ಇಂದಿನ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸನ್ನಿವೇಶದಲ್ಲಿ ಉದ್ಭವವಾಗಿರುವ ಒಂದು ವಿದ್ಯಮಾನವಾಗಿ ಸೂಕ್ತವಾದ ವಿಶ್ಲೇಷಣೆಗೆ ಅರ್ಹವಾದ ಸೈದ್ಧಾಂತಿಕ ಚೌಕಟ್ಟು, ಸಾಮಾಜಿಕ ನೆಲೆಯ ದೃಷ್ಟಿ ಮತ್ತು ಕ್ರಿಯಾಯೋಜನೆ ಅದಕ್ಕಿದೆ. ಕಳೆದ ಅಕ್ಟೋಬರ್ 2ರಂದು ತಾವೊಂದು ಪಕ್ಷವನ್ನು ಕಟ್ಟಲಿದ್ದೇವೆಂದು ಘೋಷಿಸಿ, ನವೆಂಬರ್ 26ರಂದು ಪಕ್ಷವನ್ನು ಆರಂಭಿಸಿದಾಗ ಹೊರತಂದ ಪ್ರಣಾಳಿಕೆ ಮತ್ತು ಮುನ್ನೋಟದ ಹೇಳಿಕೆ(ವಿಷನ್ ಸ್ಟೇಟ್‌ಮೆಂಟ್)ಗಳು ಬಹಳ ಸ್ಪಷ್ಟವಾಗಿ ಅವೆಲ್ಲವನ್ನೂ ಮುಂದಿಟ್ಟಿವೆ. ಈ ಸಾರಿಯ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಅನುಸರಿಸಿದ ಕಾರ್ಯಕ್ರಮಗಳು ಮತ್ತು ಚುನಾವಣಾ ಫಲಿತಾಂಶದ ನಂತರ ಅನುಸರಿಸಿದ 'ಜನಮತಗಣನೆ'ಯ ವಿಧಾನ, ಇನ್ನು ಮುಂದೆ ದೆಹಲಿಯಲ್ಲಿ ರೂಪುಗೊಳ್ಳಲಿರುವ 2,700 ಮೊಹಲ್ಲಾ ಸಭಾಗಳು ಎಲ್ಲವೂ ಅವರೆಡು ಬರಹಗಳಲ್ಲೇ ಸ್ಪಷ್ಟವಾಗಿದೆ.

ಅದರರ್ಥ ಆಮ್ ಆದ್ಮಿ ಪಕ್ಷದ ಸಿದ್ಧಾಂತ, ರಾಜಕೀಯ ಮತ್ತು ಸಂಘಟನಾ ನೀತಿಗಳು ಈಗಾಗಲೇ ಘನೀಭವಿಸಿಬಿಟ್ಟಿವೆಯೆಂದೂ, ತಕ್ಷಣದ ಅದರ ಯಶಸ್ಸು ಅಥವಾ ಮುಂಬರುವ ದಿನಗಳಲ್ಲಿ ಕಾಣಬಹುದಾದ ವೈಫಲ್ಯವು ಈ ವಿದ್ಯಮಾನದ ಭವಿಷ್ಯವನ್ನು ತೀರ್ಮಾನಿಸಲಿದೆಯೆಂದೂ ತಕ್ಷಣದ ತೀರ್ಮಾನಗಳಿಗೆ ಬರುವುದು ಆತುರವಾಗುತ್ತದೆ. ಆದರೆ ಆಮ್ ಆದ್ಮಿಗಳ ಕಳೆದ ಕೆಲವು ವರ್ಷಗಳ ಕಾರ್ಯಾಚರಣೆ ಮತ್ತು ಅದರ ಫಲಿತವಾಗಿ ಇದುವರೆಗೆ ರೂಪುಗೊಂಡಿರುವ ತಾತ್ವಿಕ ಚೌಕಟ್ಟು ಹಾಗೂ ಸಾಮಾಜಿಕ ನೆಲೆಗಳು ಸ್ಥೂಲ ರೂಪದಲ್ಲಿ ಆಮ್ ಆದ್ಮಿ ಪಕ್ಷದ ಸ್ವರೂಪದ ಕುರಿತು ಹಲವು ಸಂಗತಿಗಳನ್ನು ನಮಗೆ ಸ್ಪಷ್ಟಪಡಿಸುತ್ತದೆ.

ಅಶ್ಲೀಲವೆನ್ನುವ ಮಟ್ಟಿಗೆ ವಿಜೃಂಭಿಸುತ್ತಿರುವ ಕಾರ್ಪೊರೇಟ್ ಭ್ರಷ್ಟಾಚಾರದ ಕಾಲದ ಕೊಳೆತ ರಾಜಕೀಯ ವ್ಯವಸ್ಥೆಯಲ್ಲಿ ಆಮ್ ಆದ್ಮಿ ಪಕ್ಷವನ್ನು ಮೆಚ್ಚಿಕೊಳ್ಳಲು ಹಲವು ಕಾರಣಗಳಿವೆ. ಆದರೆ ವಿವಿಧ ರೀತಿಯ ಸಾಮಾಜಿಕ ಮತ್ತು ರಾಜಕೀಯ ವಾಸ್ತವಗಳನ್ನು ಹೊಂದಿರುವ ಭಾರತದ ಪ್ರಜಾತಂತ್ರದ ಸುದೀರ್ಘ ಪ್ರಯಾಣದಲ್ಲಿ ನಡೆದಿರುವ ವಿವಿಧ ಪ್ರಯೋಗಗಳು ಮತ್ತು ಇವತ್ತಿನ ನವಉದಾರವಾದಿ ಆರ್ಥಿಕತೆಯ ಕಾಲಘಟ್ಟದಲ್ಲಿ ಆಮ್ ಆದ್ಮಿಯನ್ನು ನೆಚ್ಚಿಕೊಳ್ಳಲಾಗದ್ದಕ್ಕೂ ಕಾರಣಗಳಿವೆ. ಹಾಗೆ ನೋಡಿದರೆ, ಕಾರ್ಪೊರೇಟ್ ಬಂಡವಾಳಶಾಹಿ ಘಟ್ಟದ ಒಂದು ಉತ್ಪನ್ನವಾಗಿಯೇ ಆಮ್ ಆದ್ಮಿ ಪಕ್ಷವು ಉದ್ಭವಿಸಿದೆ. ಇದೇ ಕಾಲಘಟ್ಟದಲ್ಲಿ ಅದರ ಇನ್ನೊಂದು ಉತ್ಪನ್ನವಾಗಿ ಉದಯಿಸಿರುವ ಮೋದಿ ವಿದ್ಯಮಾನವನ್ನು ಸ್ವಲ್ಪ ಕಾಲ ಮರೆಮಾಚುವಷ್ಟು ಪ್ರಬಲವಾಗಿ ಆಮ್ ಆದ್ಮಿ ಪಕ್ಷ ಮತ್ತು ಅರವಿಂದ್ ಕೇಜ್ರಿವಾಲ್ ಮುನ್ನೆಲೆಗೆ ಬಂದಿದ್ದಾರೆ.

ಹಣಬಲ, ತೋಳ್ಬಲ, ಮತೋನ್ಮಾದಗಳಿಲ್ಲದೇ ಚುನಾವಣೆಯಲ್ಲಿ ಗೆಲುವು ಸಾಧಿಸಿರುವುದು ಹೆಚ್ಚಿನವರ ಮೆಚ್ಚುಗೆಗೆ ಪಾತ್ರವಾಗಿದೆ. ನಮ್ಮ ಸಂಸದೀಯ ಪ್ರಜಾತಂತ್ರವು ತಲುಪಿರುವ ನಿರ್ಲಜ್ಜ ಸ್ಥಿತಿಯು ಇಂತಹ ಯಶಸ್ಸಿನ ಗರಿಮೆಯನ್ನು ಬಹುಮಟ್ಟಿಗೆ ಹೆಚ್ಚಿಸಿದೆ. ಅದರ ಜೊತೆಗೆ ಚುನಾವಣೆಯಲ್ಲಿ ದೆಹಲಿಯ ಮತದಾರರು ಎದುರಿಸುತ್ತಿರುವ 'ಸಾಮಾನ್ಯ' ಸಮಸ್ಯೆಗಳನ್ನೇ ಮುಂದಿಟ್ಟು, ವಿನೂತನ ಮಾದರಿಯಲ್ಲಿ ಅವರನ್ನು ತಲುಪಲು ಹಾಕಿಕೊಂಡ ಕಾರ್ಯಕ್ರಮಗಳೂ ಮೆಚ್ಚುಗೆಗೆ ಅರ್ಹವಾದವಾಗಿವೆ. ಪ್ರಜಾತಂತ್ರದಲ್ಲಿ ಚುನಾವಣೆಗಳೊಂದಿಗೆ ಜನರ ಪಾತ್ರ ಆರಂಭವಾಗುತ್ತದೆ ಮತ್ತು ಅದರೊಂದಿಗೇ ಕೊನೆಗೊಳ್ಳುತ್ತದೆ ಎಂಬ ಪರಿಸ್ಥಿತಿ ಇರುವಾಗ, ಚುನಾವಣೆಯ ನಂತರದಲ್ಲಿ ಸರ್ಕಾರ ರಚನೆ ಮಾಡಲು ಅನುಸರಿಸಿದ 'ಜನಮತಗಣನೆ'ಯ ವಿಧಾನ ಮಹತ್ವಪೂರ್ಣವಾದುದು. ಡಬ್ಲ್ಯುಟಿಓ ಒಪ್ಪಂದಕ್ಕೆ ಸಹಿ ಹಾಕುವ ತೀರ್ಮಾನ ತೆಗೆದುಕೊಳ್ಳಬೇಕಾದಾಗ, ಕನಿಷ್ಠ ಸಂಸತ್ತಿನಲ್ಲೂ ಸರಿಯಾಗಿ ಚರ್ಚಿಸದೇ ಹೋದದ್ದನ್ನು ನೆನೆದರೆ, ಇದಕ್ಕಿರುವ ಮಹತ್ವವು ಕಣ್ಣ ಮುಂದೆ ಬರುತ್ತದೆ. ಲಂಚಗುಳಿತನದ ವಿರುದ್ಧ ಈ ಪಕ್ಷವು ಆಡುತ್ತಿರುವ ಮಾತುಗಳು ಅದರ ಹಿನ್ನೆಲೆಗೆ ಸಹಜವೇ ಆಗಿದೆ. ವಿವಿಧ ಬ್ರಾಂಡ್‌ಗಳ ಎಡಪಂಥೀಯರು, ಪ್ರಗತಿಪರ ಚಳವಳಿಗಳು ಚುನಾವಣಾ ರಾಜಕೀಯದಲ್ಲಿ ಹೀನಾಯವಾಗಿ ಸೋಲುತ್ತಿರುವಾಗ ಆಮ್ ಆದ್ಮಿ ಪಕ್ಷವು ಗೆದ್ದಿದೆ.

ಭಾರತದಲ್ಲಿ ಈ ರೀತಿ ಎಂದೂ, ಯಾವ ಪಕ್ಷವೂ ಗೆದ್ದೇ ಇರಲಿಲ್ಲ ಎಂದು ಬಣ್ಣಿಸಲಾಗುತ್ತಿರುವುದರಲ್ಲಿ ವಾಸ್ತವವಿಲ್ಲ. ಈ ಗೆಲುವಿನ ಸಂಗತಿ ಹಾಗಿರಲಿ, ವಿಕೇಂದ್ರೀಕರಣ, ಜನಸಾಮಾನ್ಯರ ಪರವಾದ ಕಲ್ಯಾಣ ಕಾರ್ಯಕ್ರಮಗಳು, ಗ್ರಾಮೀಣಾಭಿವೃದ್ಧಿಯ ವಿಚಾರದಲ್ಲಿ 80ರ ದಶಕದಲ್ಲಿ ರಾಮಕೃಷ್ಣ ಹೆಗಡೆಯವರ ಕುರಿತೂ ಮಾಧ್ಯಮಗಳಲ್ಲಿ ಪ್ರಶಂಸೆಯ ಮಳೆ ಹರಿದಿತ್ತು. ಮೊದಲ ಚುನಾವಣೆಯಲ್ಲೇ ಇದಕ್ಕಿಂತ ಭಾರೀ ಗೆಲುವನ್ನು ಆಂಧ್ರದಲ್ಲಿ ಎನ್.ಟಿ.ರಾಮರಾವ್ ಗಳಿಸಿದ್ದರು. ಚಳವಳಿಯ ರೂಪದಲ್ಲಿದ್ದು ನಂತರ ಚುನಾವಣೆಯಲ್ಲಿ ಗೆದ್ದು ಸ್ವತಂತ್ರವಾಗಿ ಅಧಿಕಾರ ಹಿಡಿದಿದ್ದರಲ್ಲಿ ಅಸ್ಸಾಂ ಗಣ ಪರಿಷತ್‌ನ ಉದಾಹರಣೆಯೂ ಈ ದೇಶದಲ್ಲಿದೆ. ಇನ್ನು ಸಮಾಜದ ವಿವಿಧ ವರ್ಗಗಳ ಆಶೋತ್ತರಗಳನ್ನು ಮುಂದಿಟ್ಟು, ಒಂದು ಸಮಗ್ರ ಕಾರ್ಯಕ್ರಮವನ್ನು ರೂಪಿಸಿ, ಜನಸಾಮಾನ್ಯರ ಪರವಾದ ಚಳವಳಿಯನ್ನು ನಡೆಸಿ ಮೂರು ರಾಜ್ಯಗಳಲ್ಲಿ ಅಧಿಕಾರ ನಡೆಸಿದ ಎಡಪಕ್ಷಗಳನ್ನು ಕಾರ್ಪೋರೇಟ್ ಮಾಧ್ಯಮಗಳು ಮರೆತುಬಿಡುವುದು ಸಹಜವಾಗಿದೆ. ಆದರೆ ಆಮ್ ಆದ್ಮಿಯ ಸಂಭ್ರಮದಲ್ಲಿರುವ ಪ್ರಜ್ಞಾವಂತರೂ ಅದನ್ನು ಗಮನಕ್ಕೆ ತೆಗೆದುಕೊಳ್ಳದಿರುವುದು ಆಶ್ಚರ್ಯಕರವಾಗಿದೆ.



ಎಡಪಕ್ಷಗಳು, ಎನ್‌ಟಿಆರ್ ಮತ್ತು ಎಜಿಪಿಗಳು ನಂತರ ತಲುಪಿದ ದುರವಸ್ಥೆಯನ್ನು ಆಮ್ ಆದ್ಮಿಯೂ ತಲುಪಲಿದೆ ಎಂಬುದು ಈ ಮಾತಿನ ಅರ್ಥವಲ್ಲ. ಆದರೆ ಅವೆಲ್ಲದರ ಯಶಸ್ಸು ಮತ್ತು ವೈಫಲ್ಯಗಳಿಂದ ಕಲಿತ ಪಾಠಗಳನ್ನು ಮರೆತರೆ ಒಂದು ಅಪಾಯ ಕಾದಿದೆ. ಭಾರತದ ಪ್ರಜಾಪ್ರಭುತ್ವದ ಕುರಿತು ಸಿನಿಕತೆ ಮತ್ತು ಹತಾಶ ಮನೋಭಾವವು ಮಧ್ಯಮವರ್ಗದಲ್ಲಿ ವ್ಯಾಪಕವಾಗಿ ಮಡುಗಟ್ಟಿದ್ದ ಸಂದರ್ಭದಲ್ಲಿ ಆಮ್ ಆದ್ಮಿ ಪಕ್ಷ ಯಶಸ್ವಿಯಾಗಿದೆ. ಹೀಗಿರುವಾಗ, ಅದನ್ನು ಮೆಚ್ಚಿಕೊಳ್ಳುತ್ತಿರುವುದು ಸರಿ; ಆದರೆ ಅದನ್ನು ನೆಚ್ಚಿಕೊಂಡು ನಂತರದಲ್ಲಿ ಈ ವಿದ್ಯಮಾನವು ಉಂಟುಮಾಡುವ ನಿರಾಸೆಯು ಹಿಂದಿಗಿಂತ ಹೆಚ್ಚಿನ ಸಿನಿಕತೆ ಮತ್ತು ಹತಾಶೆಯನ್ನು ಮೂಡಿಸುವ ಸಾಧ್ಯತೆಯಿದೆ. ಕರ್ನಾಟಕದಲ್ಲಿ ಮೊದಲ ಕಾಂಗ್ರೆಸ್ಸೇತರ ಸರ್ಕಾರವನ್ನು ರಚಿಸಿದ ರಾಮಕೃಷ್ಣ ಹೆಗಡೆ ಮೂಡಿಸಿದ ಭ್ರಮನಿರಸನವನ್ನು, ಹೊಸದಾಗಿ ಪ್ರವರ್ಧಮಾನಕ್ಕೆ ಬಂದಿದ್ದ ರೈತಸಂಘ ಮತ್ತು ದಲಿತ ಚಳವಳಿಗಳ ಚುನಾವಣಾ ಪ್ರವೇಶವೂ ಅಳಿಸಲಾಗಲಿಲ್ಲ. ಬದಲಿಗೆ ಕರ್ನಾಟಕದ ಇತಿಹಾಸದಲ್ಲೇ ಅತ್ಯಂತ ಹೆಚ್ಚಿನ ಬಹುಮತದೊಂದಿಗೆ ಹಳೇತಲೆ ವೀರೇಂದ್ರ ಪಾಟೀಲರ ನೇತೃತ್ವದಲ್ಲಿ ಮತ್ತೆ ಕಾಂಗ್ರೆಸ್ ಪಕ್ಷವನ್ನೇ ಅಧಿಕಾರಕ್ಕೆ ತಂದಿತು.

ಆಮ್ ಆದ್ಮಿ ಪಕ್ಷದಲ್ಲಿ ಮುಖ್ಯಸ್ಥಾನದಲ್ಲಿರುವವರ 'ಪ್ರಾಮಾಣಿಕತೆ'ಯ ಕುರಿತು ಇರುವ ಅನುಮಾನದಿಂದಲ್ಲ.... ಬದಲಿಗೆ ಆಮ್ ಆದ್ಮಿ ಪಕ್ಷದ ತಾತ್ವಿಕತೆಯೊಳಗೇ ಇರುವ ಸಮಸ್ಯೆಗಳು ಈ ಎಚ್ಚರವನ್ನು ನಮ್ಮೊಳಗೆ ಉಂಟುಮಾಡಬೇಕಿದೆ. 'ಭ್ರಷ್ಟಾಚಾರದ ವಿರುದ್ಧ ಭಾರತ' (ಐಎಸಿ) ರೂಪದಲ್ಲಿ ಅಸ್ತಿತ್ವದಲ್ಲಿದ್ದ ಕೇಜ್ರಿವಾಲ್ ಗುಂಪು, ಆಮ್ ಆದ್ಮಿ ಪಕ್ಷವಾಗಿ ಪರಿವರ್ತನೆ ಹೊಂದುವಾಗ ಕೆಲವು ಬದಲಾವಣೆಗಳನ್ನು ಮಾಡಿಕೊಂಡಿತು. ಭ್ರಷ್ಟಾಚಾರದ ವಿರೋಧವನ್ನು ಏಕಮಾತ್ರ ಅಜೆಂಡಾವಾಗಿ ಹೊಂದಿದ್ದ ಅದು ನಂತರ 'ಜನಸಾಮಾನ್ಯರ' ಸಮಸ್ಯೆಗಳಾದ ನೀರು, ವಿದ್ಯುತ್‌ಅನ್ನು ಮುಖ್ಯ ಘೋಷಣೆಗಳ ಸೇರಿಸಿಕೊಂಡಿತು. ಪ್ರಧಾನವಾಗಿ ಮೇಲ್ಜಾತಿ ಮ ಮೇಲ್ಮಧ್ಯಮ ವರ್ಗವನ್ನು ತನ್ನ ಸಾಮಾಜಿಕ ನೆಲೆಯ ಮಾಡಿಕೊಂಡಿದ್ದ ಐಎಸಿ, ಎಎಪಿ ಆಗುವಾಗ ಬಹುಸಂ ಮತದಾರರನ್ನು ತಲುಪಲು ಇಂತಹ ಬದಲಾವಣೆ ಅಗತ್ಯವಾಗಿತ್ತು. ಆದರೆ ಈಗಲೂ ಎಎಪಿ ಕಾರ್ಯಕರ್ತಗಣ ಐಎಸಿಯ ಸಾಮಾಜಿಕ ನೆಲೆಯಿಂದ ಬಂದಿದೆ ಮತ್ತು ಮುಂದಿನ ದಿನಗಳಲ್ಲಿ 'ಚುನಾ ರಾಜಕೀಯ' ಕೇಳುವ ಇತರ 'ಜನಪ್ರಿಯ ಕಾರ್ಯಕ್ರಮ ವಿಚಾರದಲ್ಲಿ ಅದು ಯಾವ ನಿಲುವನ್ನು ತೆಗೆದುಕೊಳ್ ಎಂಬುದು ಮುಖ್ಯವಾಗುತ್ತದೆ.

ಇದರ ಜೊತೆಗೆ ಬಿಜೆಪಿಗೆ ಓಟು ಹಾಕಲು ಸಾಧ್ಯವಿ ಕಾಂಗ್ರೆಸ್ ಬಗ್ಗೆಯೂ ಸಕಾರಣವಾದ ಸಿಟ್ಟನ್ನು ಇಟ್ಟುಕೊಂ ದೆಹಲಿಯ ಗಣನೀಯ ಸಂಖ್ಯೆಯ ಮುಸ್ಲಿಮರ ಮತಗಳಿಕೆ ಎಎಪಿ ಕೆಲವು 'ರಾಜಿ'ಗಳಿಗೆ ಸಿದ್ಧವಾಯಿತು. ಫತ್ವಾಗಳ ಹೊರಡಿಸಿದ 'ಖ್ಯಾತಿ' ಹೊಂದಿದ್ದ ಮೌಲ್ವಿಯೊಬ್ಬ ಕೇಜ್ರಿವಾಲ್ ಹೋಗಿ ಬೆಂಬಲ ಪಡೆದುಬಂದರು. ಕೇ ಇಷ್ಟೇ ಆಗಿದ್ದರೆ, ಎಎಪಿಯ ಕುರಿತು ನಮಗೆ ಅಂ ದೊಡ್ಡ ತಕರಾರೇನೂ ಇರಲು ಸಾಧ್ಯವಿಲ್ಲ.

ನಿಜವಾದ ತಕರಾರು ಇರುವುದು, ಎಎಪಿ ಈ ದೇಶ ಆಮ್ ಆದ್ಮಿಯನ್ನಾಗಿ ಯಾರನ್ನು ಆರಿಸಿಕೊಂಡ ಎನ್ನುವುದರಲ್ಲಿ. ಅವರ ಅಧಿಕೃತ ಘೋಷಣೆಯೇ 'ಆ ಆದ್ಮಿ ಎಂದರೆ ಬಡವರು ಎಂದರ್ಥವಲ್ಲ'. ಆಮ್ ಎಂದರೆ ಉದ್ದಿಮೆದಾರರೂ ಸೇರಿದಂತೆ ಎ ಭಾರತೀಯರು. ಅದರಲ್ಲಿ ಬಡವರು, ಕೆಳ ಮಧ್ಯಮ ಮಧ್ಯಮವರ್ಗ, ದಲಿತರು, ಹಿಂದುಳಿದವರು, ಆದಿವಾಸಿ ಇತ್ಯಾದಿ ವಿಭಜನೆಗಳು ಇಲ್ಲ ಮತ್ತು ಆಮ್ ಆದ್ಮಿ ಇವತ್ತಿನ ಕಾರ್ಪೋರೇಟ್ ಬಂಡವಾಳಶಾಹಿ ಅಭಿವೃದ್ಧಿ ವಿರೋಧಿಯಲ್ಲ, ಅದನ್ನು ಅವರು ನೇರವಾಗಿ ಮ ಪರೋಕ್ಷವಾಗಿ ಹಲವು ಸಾರಿ ಸ್ಪಷ್ಟಪಡಿಸಿದ್ದಾರೆ. ಬದ ಅವರ ಪ್ರಣಾಳಿಕೆಯೂ ಘೋಷಿಸುವಂತೆ 'ಕ್ರೊ ಕ್ಯಾಪಿಟಲಿಸಂ' (ವಿಪರೀತವಾಗಿ ಬೆಳೆದ ಬಂಡವಾಳಶಾಹಿ ಪಡೆದುಕೊಳ್ಳುವ ಭ್ರಷ್ಟಾಚಾರವನ್ನು ಹೆಚ್ಚು ಮಾಡುವ ವಿ ರೂಪ)ಗೆ ಮಾತ್ರ ಅವರ ವಿರೋಧ. ಇನ್ನೂ ಒಂ ರೀತಿ ಹೇಳಬೇಕೆಂದರೆ ಅಕ್ರಮ ಗಣಿಗಾರಿಕೆಗೆ ಅ ವಿರೋಧ. ಸಕ್ರಮವಾಗಿಯೇ ದೇಶದ ಸಂಪತ್ತನ್ನು (ಲ ಕೊಡದೇ, ಸರ್ಕಾರದ ಅಧಿಕೃತ ನೀತಿಯ ಭಾಗವಾಗಿ ಲೂಟಿ ಹೊಡೆಯುವುದಾದರೆ ಅದಕ್ಕೆ ತಕರಾರಿಲ್ಲ.

ಕಾರ್ಮಿಕರಿಗೆ ಕನಿಷ್ಠದಲ್ಲಿ ಕನಿಷ್ಠ ವೇತನ ಕೊ ಗುತ್ತಿಗೆ ಆಧಾರದಲ್ಲಿ ದುಡಿಸುವುದಾದರೆ ಅದರ ಆಮ್ ಆದ್ಮಿಯ ನಿಲುವೇನು, ಮೀಸಲಾತಿಯ ಏನು ನಿಲುವು ಎಂಬಂತಹ ಪ್ರಶ್ನೆಗಳಿಗೆ ಇದುವರೆ ಅವರು ಉತ್ತರ ಕೊಟ್ಟಿಲ್ಲ, ಬದಲಿಗೆ ಜಾತಿ ಇ 'ವೋಟ್ ಬ್ಯಾಂಕ್' ರಾಜಕಾರಣಕ್ಕೆ ತಮ್ಮ ವಿರೋ ಎಂದು ಹೇಳುವುದು ಕೆಲವು ಅನುಮಾನಗಳ ಹುಟ್ಟಿಸುತ್ತದೆ. ಮೇಲೆ ಹೇಳಿದಂತೆ ಇದುವರೆಗೆ ಆ ಕಾರ್ಯಕರ್ತಗಣದ ಸಾಮಾಜಿಕ ನೆಲೆ ಮೇಲ್ಜಾತಿ ಮ ಮೇಲ್ಮಧ್ಯಮ ವರ್ಗವಾಗಿರುವುದರಿಂದಲೂ ಈ ಮುಖ್ಯವಾಗುತ್ತದೆ.

ಭ್ರಷ್ಟಾಚಾರಕ್ಕೆ ಮತ್ತು ಈ ದೇಶದ ಹೆಚ್ಚಿನ ಸಮಸ್ ಮೂಲ ರಾಜಕಾರಣಿಗಳಲ್ಲಿದೆ ಹಾಗೂ ಚುನಾವ ವ್ಯವಸ್ಥೆಯಲ್ಲಿನ ಭ್ರಷ್ಟಾಚಾರದಲ್ಲಿದೆ ಎಂಬುದು ಎಎಪಿ ತಾತ್ವಿಕತೆಯಲ್ಲಿನ ಇನ್ನೊಂದು ಮುಖ್ಯ ಅಂಶವಾಗಿದೆ. ದೇಶದ ಸಾಮಾಜಿಕ, ಆರ್ಥಿಕ ರಚನೆಯಲ್ಲಿಯೇ ಇ ವರ್ಗ, ಜಾತಿ, ಲಿಂಗ, ಧರ್ಮದ ತಾರತಮ ಅಸಮಾನತೆಯ ಸಮಸ್ಯೆಯನ್ನು ಅತ್ಯಂತ ಮು ಸಮಸ್ಯೆಯಾಗಿ ಎಎಪಿ ಪರಿಗಣಿಸಿದ್ದು ಇದುವ ಕಂಡುಬಂದಿಲ್ಲ.

ನಮ್ಮ ದೇಶದ ರಾಜಕಾರಣ ಹಾಗೂ ಸಾಮಾ ಚಿಂತನೆಯಲ್ಲಿನ ಎರಡು ಮುಖ್ಯ ದೋಷಗಳು ಇಲ್ಲಿ ಹೊರಡುತ್ತವೆ. ಒಂದು, ರಚನೆಯಲ್ಲೇ ಇರುವ ಸಮಸ್ಯೆಗಳನ್ನು ಮಾತ್ರ ಪ್ರಧಾನ ಮಾಡಿಕೊಂಡು ರಾಜಕೀ ವ್ಯವಸ್ಥೆಯಲ್ಲಿನ ಸಮಸ್ಯೆಗಳನ್ನು ಗಮನಿಸದೇ ಇರುವು ಇದು ಒಂದು ರೀತಿಯ ಅವಕಾಶವಾದಕ್ಕೆ,

▶▶ 1

...ಮೋದಿಯ ಮಾನಸಿಯೂ, ಹಿಟ್ಲರ್‌ನ ಜೆಲಿಯೂ..

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ಅದು 1930-1931ರ ಇಸವಿ. ರಾಜಕೀಯವಾಗಿ ...ಲ್ಫ್ ಹಿಟ್ಲರ್ ಉತ್ತುಂಗಕ್ಕೇರುತ್ತಿದ್ದ ಕಾಲ. ಅಷ್ಟುಹೊತ್ತಿಗೆ ...ಝಿಗಳ ಪಕ್ಷ ಜರ್ಮನಿಯಲ್ಲಿ ಎರಡನೆ ಅತಿ ದೊಡ್ಡ ...ವಾಗಿ ಹೊಮ್ಮಿತ್ತು, ನಾಝಿಗಳ ನಾಯಕನಾದ ಹಿಟ್ಲರ್ ...ದಿದ್ದ 'ಮೈನ್ ಕಂಫ್' ಎಂಬ ಪುಸ್ತಕದ 50,000 ...ಗಳು ಮಾರಾಟವಾಗಿ ಆತ ದೇಶದಾದ್ಯಂತ ಖ್ಯಾತಿ ...ದಿದ್ದ.

...ನಾಝಿಗಳು ಅಧಿಕಾರಕ್ಕೆ ಬಂದರೆ ಸೈನ್ಯವನ್ನು ...ಗೊಳಿಸುತ್ತೇನೆ ಎಂದು ಹಿಟ್ಲರ್ ಹೇಳಿದ್ದನ್ನೇ ನಂಬಿದ್ದ ...ಧಿಕಾರಿಗಳು ಆತನ ಪರ ನಿಂತಿದ್ದರು. ಹಾಗೆಯೇ ...ರ್ ಅಧಿಕಾರಕ್ಕೆ ಬಂದರೆ ತಮಗೆ ನೆರವಾಗುತ್ತಾನೆಂದು ...ರ್ಮನಿಯ ಉದ್ಯಮಿಗಳೂ ಆತನಿಗೂ ಮತ್ತು ನಾಝಿಗಳ ...ಕ್ಕೂ ಹೇರಳವಾಗಿ ಆರ್ಥಿಕ ನೆರವನ್ನು ...ಲಾರಂಭಿಸಿದ್ದರು. ಉದ್ಯಮಿಗಳು ಕೊಟ್ಟ ಲಂಚದ ...ವನ್ನು ಉಪಯೋಗಿಸಿಕೊಂಡೇ ಹಿಟ್ಲರ್‌ನ ಪಕ್ಷ ಮತ್ತು ...ಾಲಕರು ಆತನ 'ಅಭಿವೃದ್ಧಿ'ಯ ಯೋಜನೆಗಳ ಬಗ್ಗೆ, ...ನ 'ಅನಿವಾರ್ಯತೆ' ಬಗ್ಗೆ ಸುಳ್ಳುಗಳನ್ನೇ ಸತ್ಯ ಎಂಬಂತೆ ...ರ ಮಾಡಲಾರಂಭಿಸಿದ್ದರು.

ಹೀಗೆ ಇನ್ನೇನು ಅಧಿಕಾರ ಹಿಟ್ಲರ್‌ನ ಕೈಗೆ ...ತ್ತದೆ ಎಂಬ ಸಂದರ್ಭ ನಿರ್ಮಾಣವಾಗಿದ್ದಾಗಲೇ ...ನ್ನೆಲ್ಲ ಕೊಚ್ಚಿ ಹಾಕುವ ಅಮಾನವೀಯ ಕೊಲೆಯೊಂದು ...ಯಿತು. ಆದರೆ ಹಿಟ್ಲರ್ ಮತ್ತು ಆತನ ನಾಝಿ ...ನ ಅಧಿಕಾರಿಗಳು ಆ ಕೊಲೆಯನ್ನು ಅದೆಷ್ಟು ...ಸ್ಥಿತವಾಗಿ ಮುಚ್ಚಿಹಾಕಿದರೆಂದರೆ ಹಿಟ್ಲರ್ ಕೊನೆಗೂ ...ಾವಣೆಯಲ್ಲಿ ಗೆದ್ದು ಲಕ್ಷಾಂತರ ಅಮಾಯಕ ...ಹೂದಿಗಳ ಮಾರಣಹೋಮಕ್ಕೆ ಕಾರಣನಾಗಿದ್ದು ಈಗ ...ಾಸ...

...ಪುತ್ರಿಯರೊಂದಿಗೆ ಬಂದಳು. ಆ ಇಬ್ಬರು ಪುತ್ರಿಯರಲ್ಲಿ ಒಬ್ಬಳ ಹೆಸರು ಜೆಲಿ. ಇಪ್ಪತ್ತರ ಹರೆಯದ ಜೆಲಿ ಹೊಂಬಣ್ಣದ ಕೂದಲನ್ನು ಹೊಂದಿದ್ದ ಹೊಳೆಯುವ ಕಣ್ಣುಗಳ ಚೆಲುವೆ.

ಅವಳ ಸೌಂದರ್ಯಕ್ಕೆ ಹಿಟ್ಲರ್ ಮಾರುಹೋದ. ವಾರಿಗೆಯಲ್ಲಿ ಆಕೆ ಆತನಿಗೆ ಸೊಸೆಯಾಗಿದ್ದರೂ ಆಕೆಯನ್ನು ಓಲೈಸಿದ. ಹದಿವರ್ಷದ ಯುವಕನಂತೆ ಆಕೆಯ ಮುಂದೆ ಹಲ್ಲುಕಿರಿಯುತ್ತಿದ್ದ. ಆಕೆ ಹತ್ತಾರು ಅಂಗಡಿಗಳನ್ನು ಸುತ್ತುತ್ತಿದ್ದರೆ ಈತ ಆಕೆಯ ಸೇವಕನಂತೆ ಹಿಂಬಾಲಿಸುತ್ತಿದ್ದ. ಅವಳನ್ನು ಚಿತ್ರಮಂದಿರಕ್ಕೆ, ಹೋಟೆಲ್‌ಗಳಿಗೆ, ಸಂಗೀತ ಕಛೇರಿಗಳಿಗೆ, ನಾಝಿ ಪಕ್ಷದ ಸಭೆ ಸಮಾರಂಭಗಳಿಗೂ ಕರೆದುಕೊಂಡು ಹೋಗಲಾರಂಭಿಸಿದ. ಜೆಲಿ ತರಹ ಚೆಲುವೆಯನ್ನು ತನ್ನ ಸಂಗಾತಿ ಎಂದು ತೋರಿಸುವಲ್ಲಿ ಹಿಟ್ಲರ್‌ಗೆ ಎಲ್ಲಿಲ್ಲದ ಹೆಮ್ಮೆ ಆಗುತ್ತಿತ್ತು. ಹಿಟ್ಲರ್‌ನ ಪ್ರಭಾವ ಕಂಡು ಜೆಲಿ ಕೂಡ ಮನಸೋತಳು. ಅವನಿಗೆ ಸೆಲ್ಯೂಟ್ ಹೊಡೆಯುತ್ತಿದ್ದ ಯುವಕರು, ಆಟೋಗ್ರಾಫ್ ಕೇಳುತ್ತಿದ್ದ ಯುವತಿಯರು, ಗೌರವಿಸುತ್ತಿದ್ದ ವೃದ್ಧರು, ರಕ್ಷಣೆಗೆ ಇದ್ದ ಬಾಡಿಗಾರ್ಡ್‌ಗಳು, ಹಿಂಬಾಲಿಸುತ್ತಿದ್ದ ನಾಝಿ ಪಡೆಗಳು... ಇವೆಲ್ಲ ಜೆಲಿ ತರಹದ ಯುವತಿಯ ಮೇಲೆ ಪರಿಣಾಮ ಬೀರದೆ ಇರುತ್ತದೆಯೇ? ಕೆಲ ದಿನಗಳಲ್ಲೇ ಹಿಟ್ಲರ್ ಮತ್ತು ಆತನ ಸೊಸೆ ಜೆಲಿ ನಡುವೆ ದೈಹಿಕ ಸಂಬಂಧ ಏರ್ಪಟ್ಟಿತು.

ಹಿಟ್ಲರ್ ರಾಜಕೀಯವಾಗಿ ಮುಂದುವರೆಯುತ್ತಿದ್ದರಿಂದ ಆತ ಮ್ಯುನಿಚ್ ನಗರದಲ್ಲಿನ ಒಂದು ಫ್ಲಾಟ್‌ಗೆ ತನ್ನ ವಾಸ್ತವ್ಯವನ್ನು ಬದಲಾಯಿಸಿದ. ಆಗ ಆತ ತನ್ನೊಂದಿಗೆ ಮ್ಯೂನಿಚ್‌ಗೆ ಕರೆದುಕೊಂಡು ಹೋಗಿದ್ದು ತನ್ನ ಸಹೋದರಿಯನ್ನಲ್ಲ, ಬದಲಾಗಿ ಆಕೆಯ ಮಗಳಾದ ಜೆಲಿಯನ್ನು! ಇಬ್ಬರೂ ಬರೋಬ್ಬರಿ ಒಂಬತ್ತು ಕೊಠಡಿಗಳಿದ್ದ ಫ್ಲಾಟಿನಲ್ಲಿ ವಾಸಿಸಲಾರಂಭಿಸಿದರು.



...ಅಯ್ಯೋ, ಅದ್ಯಾವುದೋ ದೂರದ ದೇಶದಲ್ಲಿ, ಅದೂ ...ು ದಶಕಗಳ ಹಿಂದೆ ನಡೆದದ್ದರ ಬಗ್ಗೆ ಈಗ್ಯಾಕೆ ...ತ್ತಿದ್ದೇನೆ ಎಂದು ಕೆಲವರಿಗೆ ಅಚ್ಚರಿ ಆಗಿರಬಹುದು. ...ರೆ ಇದು 'ಇತಿಹಾಸ ಕಾಲಕಾಲಕ್ಕೆ ...ಾವರ್ತನೆಗೊಳ್ಳುತ್ತದೆ' ಎಂಬುದಕ್ಕೆ ಒಂದು ...ನವಾದ್ದರಿಂದ ಇಲ್ಲಿ ಹೇಳಬೇಕಿದೆ. ಯಾಕೆಂದರೆ ... ಮಾನಸಿ ಸೋನಿ ಎಂಬ ಯುವತಿಯ ಜೊತೆ ...ಂತಕ ನರೇಂದ್ರ ಮೋದಿ ಹೊಂದಿದ್ದ ಪ್ರೇಮ ...ಗಕ್ಕೂ, ಆನಂತರ ಆ ಯುವತಿ ಕೈಕೊಟ್ಟಾಗ ಆಕೆಯ ...ೆ ಪೊಲೀಸರಿಂದ ಗೌಪ್ಯವಾಗಿ ನಿಗಾ ಇರಿಸಿದ್ದ ...ನ್ನೂ ಹೋಲುವ ಕತೆಯೇ ಆಗಿದೆ.

...ಇಲ್ಲಿನ ಪಾತ್ರಧಾರಿಗಳು ಮಾತ್ರ ಬೇರೆ ಬೇರೆ. ...ದಿಯ ಜಾಗದಲ್ಲಿ ಹಿಟ್ಲರ್ ಇದ್ದಾನೆ, ಮಾನಸಿಯ ...ಲ್ಲಿ ಆಂಜೆಲಾ ಎಂಬ ಯುವತಿ ಇದ್ದಾಳೆ. ಅದೆಲ್ಲಕ್ಕಿಂತ ...ವಾಗಿ ಹಿಟ್ಲರ್ ತರಹದ ವ್ಯಕ್ತಿಗಳು ತಮ್ಮ ತೆವಲಿನ ...ಿ, ಅಧಿಕಾರದ ಆಸೆಗೆ ಕೊಲೆಯನ್ನೂ ಮಾಡಲು ...ವುದಿಲ್ಲ ಎಂದು ತೋರಿಸುವ ಪಾಠವೂ ಇದರಲ್ಲಿದೆ. ...ಆಕೆಯ ಹೆಸರು ಆಂಜೆಲಾ. ಆದರೆ ಆಕೆಯ ...ಬದವರು ಆಕೆಯನ್ನು ಪ್ರೀತಿಯಿಂದ ಜೆಲಿ ಎಂದಷ್ಟೇ ...ುತ್ತಿದ್ದರು. ಜೆಲಿ ಹಿಟ್ಲರ್‌ನ ಸಹೋದರಿಯ ಮಗಳು, ...ೆ ಆಕೆ ಆತನಿಗೆ ಸೊಸೆ ಆಗಬೇಕು.

...0 ವರ್ಷ ವಯಸ್ಸಾಗಿದ್ದರೂ ವಿವಾಹ ಆಗಿರದಿದ್ದ ... 1928ರಲ್ಲಿ ಜರ್ಮನಿಯ ಒಂದು ಚಿಕ್ಕ ಊರಿನಲ್ಲಿ ...ಕೊಂದು ಮನೆಯನ್ನು ಬಾಡಿಗೆಗೆ ತೆಗೆದುಕೊಂಡ. ... ರಾಜಕೀಯ ಕಾರಣಗಳಿಂದಾಗಿ ಆತ ಊರೂರು ...ಸೇಕಿದ್ದರಿಂದ ತನ್ನ ಮನೆಯನ್ನು ನೋಡಿಕೊಳ್ಳುವಂತೆ ...ಸಹೋದರಿಯನ್ನು ಕೇಳಿಕೊಂಡ, ಅದಕ್ಕೆ ಒಪ್ಪಿದ ... ಸಹೋದರಿ ವಿಯೆನ್ನಾದಿಂದ ತನ್ನ ಇಬ್ಬರು

ಜೆಲಿ ಇನ್ನೂ ಚೆಲ್ಲುಚೆಲ್ಲು ಯುವತಿ. ಎರಡು ವರ್ಷಗಳ ಕಾಲ ಹಿಟ್ಲರ್‌ನೊಂದಿಗೆ ಸಂಬಂಧ ಹೊಂದಿದ್ದ ಆಕೆಗೆ ಕಾಲಕ್ರಮೇಣ ಆತನ ಮೇಲಿನ ವ್ಯಾಮೋಹ ಕಮ್ಮಿ ಆಯಿತು. ಮುದಿಯ ಹಿಟ್ಲರ್ ಬದಲಾಗಿ ತನ್ನ ವಯಸ್ಸಿನ ಯುವಕಯುವತಿಯರೊಂದಿಗೆ ಬೆರೆಯುವ ಆಸೆ ಆಯಿತು. ಆದರೆ ಹಿಟ್ಲರ್ ಅದಕ್ಕೆ ಒಪ್ಪಲಿಲ್ಲ. ಆಕೆಯ ಬಗ್ಗೆ ಹಿಟ್ಲರ್‌ಗೆ ಅನುಮಾನ, ಅಸೂಯೆ. ಎಲ್ಲಿ ಆಕೆ ತನಗಿಂತ ಕಿರಿಯ ವಯಸ್ಸಿನ ಯುವಕನ ಮೋಹಕ್ಕೆ ಬಿದ್ದು ತನ್ನನ್ನು ತೊರೆಯುತ್ತಾಳೋ ಎಂಬ ಭಯ. ಅದಕ್ಕೇ ಆತ ಆಕೆಯನ್ನು ತನ್ನ ನಿಗ್ರಹದಲ್ಲಿಟ್ಟುಕೊಳ್ಳಲು ಮುಂದಾದ. ತನ್ನ ಅನುಮತಿ ಇಲ್ಲದೆ ಆಕೆ ಯಾರನ್ನೂ ಮಾತನಾಡಿಸುವಂತಿಲ್ಲ; ಮನೆಯ ಹೊರಗೆ ಹೆಜ್ಜೆ ಇಡುವಂತಿಲ್ಲ ಎಂದು ಆದೇಶಿಸಿದ. ಅಷ್ಟೇ ಅಲ್ಲ, ಆಕೆಯ ಮೇಲೆ ಸದಾ ನಿಗಾ ಇಡಲು ಇಬ್ಬರು ನಾಝಿಗಳನ್ನು ನೇಮಿಸಿದ. ಇದೆಲ್ಲದರಿಂದ ಜೆಲಿಗೆ ಉಸಿರುಗಟ್ಟಿಸಿದಂತಾಯಿತು. ಆಕೆ ಹಿಟ್ಲರ್‌ನ ಬಂಧನದಿಂದ ಮುಕ್ತಿ ಪಡೆಯಲು ಹವಣಿಸಿದಂತೆಲ್ಲ ಆತನ ಹತೋಟಿ ಹೆಚ್ಚಾಗುತ್ತಾ ಹೋಯಿತು.

ಇದೆಲ್ಲದರ ಮಧ್ಯೆ ಹಿಟ್ಲರ್ ಒಬ್ಬ ವಿಕೃತ ಕಾಮಿ ಎಂದೂ, ಆತ ಜೆಲಿಯ ಬೆತ್ತಲೆ ಚಿತ್ರಗಳನ್ನು ಬಿಡಿಸಿದ್ದನೆಂದೂ ಗುಸುಗುಸು ಹಬ್ಬಿತ್ತು. ಇಂತಹ ರೂಮರ್‌ಗಳು ಪತ್ರಿಕೆಗಳಿಗೆ ಗೊತ್ತಾದರೆ ಹಿಟ್ಲರ್ ಮತ್ತು ನಾಝಿಗಳ ರಾಜಕೀಯ ಭವಿಷ್ಯ ನುಚ್ಚುನೂರಾಗುತ್ತದೆ ಎಂದು ನಾಝಿಗಳು ಹೆದರಿದ್ದರು. ಆ ಕಾರಣಕ್ಕೂ ಹಿಟ್ಲರ್ ಜೆಲಿ ಯಾರೊಂದಿಗೂ ಮಾತನಾಡದಂತೆ ನಿಗ್ರಹಿಸುತ್ತಿದ್ದ ಎಂಬ ಗುಮಾನಿಗಳೂ ಶುರುವಾಗಿದ್ದವು.

ಒಂದು ದಿನ ಹಿಟ್ಲರ್ ಬೇರೆ ಊರಿಗೆ ಹೊರಟುನಿಂತಾಗ ಜೆಲ್ಲಿ ವಿಯನ್ನಾ ನಗರಕ್ಕೆ ಹೋಗಿ ತನ್ನ ಗೆಳತಿಯೊಬ್ಬಳನ್ನು ಭೇಟಿ ಆಗುವ ಆಸೆ ವ್ಯಕ್ತಪಡಿಸಿದಳು. ಆದರೆ ಹಿಟ್ಲರ್ ಅನುಮತಿ ನೀಡಲು ನಿರಾಕರಿಸಿದ. ಆತ ಇನ್ನೇನು ಕಾರ್ ಹತ್ತಿ ಹೋಗಬೇಕೆಂದಾಗ ಮಹಡಿಯ ಬಾಲ್ಕನಿಯಲ್ಲಿ ಪ್ರತ್ಯಕ್ಷಳಾದ ಜೆಲಿ ಮತ್ತೊಮ್ಮೆ ಕೂಗಿ ಅನುಮತಿ ಕೇಳಿದ್ದು ಅಕ್ಕಪಕ್ಕದ ಮನೆಯವರಿಗೆಲ್ಲ ಕೇಳಿಸಿತ್ತು. ಆಗಲೂ ಹಿಟ್ಲರ್ "ಇಲ್ಲ ಅಂದರೆ ಇಲ್ಲ" ಎಂದು ಗದರಿ ಹೊರಟುಹೋದ.

ಅದಾದನಂತರ ನಡೆದದ್ದೆಲ್ಲವೂ ಇವತ್ತಿಗೂ ನಿಗೂಢವಾಗಿದೆ.

ಯಾಕೆಂದರೆ ಅದಾದ ಕೆಲವು ಗಂಟೆಗಳಲ್ಲೇ ಜೆಲಿ ಹೆಣವಾಗಿದ್ದಳು!

ಜೆಲಿಯ ಸಾವಿನ ಸುದ್ದಿ ಗೊತ್ತಾಗುತ್ತಿದ್ದಂತೆ ನಾಝಿ ಮುಖ್ಯಸ್ಥರು ಅದನ್ನು ಆದಷ್ಟು ಬೇಗ ಮುಚ್ಚಿಹಾಕಲು ಮುಂದಾದರು. ಆಕೆ ಆತ್ಮಹತ್ಯೆ ಮಾಡಿಕೊಂಡಳು ಎಂದೂ, ಅದಕ್ಕೆ ಕಾರಣ ಆಕೆ ಸಂಗೀತಗಾರ್ತಿಯಾಗಿದ್ದರೂ ತನ್ನ ದನಿಯ ಬಗ್ಗೆ ಆಕೆಗೆ ವಿಶ್ವಾಸ ಇರಲಿಲ್ಲ ಎಂದೂ ಸಬೂಬು ಕೊಟ್ಟರು.

ಆಕೆಯ ಮರಣದ ಸುತ್ತ ತನಿಖೆ ನಡೆಸಿದ ಪೊಲೀಸ್ ಅಧಿಕಾರಿ ಹೈನ್ರಿಕ್ ಮ್ಯುಲ್ಲರ್ ಕೂಡ ನಾಝಿ ಅಧಿಕಾರಿಗಳು ಹೇಳಿದ್ದನ್ನು ನಂಬಿ ಹಾಗೆಯೇ ತನ್ನ ವರದಿಯಲ್ಲಿ ದಾಖಲಿಸಿದ. ಮಾತ್ರವಲ್ಲ, ಆಕೆಯ ಶವವನ್ನು ಮರಣೋತ್ತರ ಪರೀಕ್ಷೆಗೂ ಕಳುಹಿಸದೆ ಅದನ್ನು ವಿಯಾನ್ನಾಗೆ ಸಾಗಿಸಲು ಅನುಮತಿ ಕೊಟ್ಟ. ಅವನ ಸಹಕಾರಕ್ಕೆ ಪ್ರತಿಫಲವಾಗಿ ನಾಝಿಗಳು 1933ರಲ್ಲಿ ಅಧಿಕಾರಕ್ಕೆ ಏರಿದ ನಂತರ ಹೈನ್ರಿಕ್ ಮ್ಯುಲ್ಲರ್ ಗೆಸ್ಟಾಪೋದ ಮುಖ್ಯಸ್ಥನಾಗಿ ಬಡ್ತಿ ಪಡೆದ. ಆನಂತರ ಆತ ನಾಝಿ ಸರ್ಕಾರದಲ್ಲಿ ಕಾನೂನಿನ ಮಂತ್ರಿಯೂ ಆದ!

ಆದರೆ ಜೆಲಿ ನಿಜವಾಗಲೂ ಆತ್ಮಹತ್ಯೆ ಮಾಡಿಕೊಂಡಿದ್ದಳಾ? ಇಲ್ಲ! ಯಾಕೆಂದರೆ ಆಕೆ ಸಾಯುವ ಕೆಲಕ್ಷಣಗಳ ಮುನ್ನ ತನ್ನ ಗೆಳತಿಯೊಬ್ಬಳಿಗೆ ಪತ್ರ ಬರೆಯುತ್ತಿದ್ದಳು. ಅದರಲ್ಲಿ "ನಾನು ಸದ್ಯದಲ್ಲೇ ವಿಯನ್ನಾಗೆ ಬರುತ್ತೇನೆ ಎಂಬ ಆಶಯ ಹೊಂದಿದ್ದೇನೆ. ಆಗ ನಾವಿಬ್ಬರೂ ಸೆಮ್ಮರಿಂಗ್ (ಇದು ಒಂದು ಆರೋಗ್ಯ ರೆಸಾರ್ಟ್) ಗೆ ಹೋ..." (ಎಂದು ವಾಕ್ಯ ಅರ್ಧದಲ್ಲೇ ಮುಕ್ತಾಯಗೊಳ್ಳುತ್ತದೆ) ಎಂದು ಬರೆದಿದ್ದಳು. ಇಂತಹ ಆಶಾಭರಿತ ಪತ್ರವನ್ನು ಬರೆಯುತ್ತಿದ್ದ ಜೆಲಿ ಆತ್ಮಹತ್ಯೆ ಮಾಡಿಕೊಳ್ಳುವ ಮಾನಸಿಕ ಸ್ಥಿತಿಯಲ್ಲಿ ಖಂಡಿತಾ ಇರಲಿಲ್ಲ ಎಂಬುದನ್ನು ಸೂಚಿಸುತ್ತದೆ.

ಹಾಗೆಯೇ ಆಕೆ ಸತ್ತ ರೀತಿಯೂ ಅನುಮಾನಾಸ್ಪದವಾಗಿದೆ.

ಜೆಲಿ ಸತ್ತಿದ್ದು ಬುಲೆಟ್ ಒಂದು ಆಕೆಯ ದೇಹವನ್ನು ಹೊಕ್ಕಿದ್ದರಿಂದ. ಆ ಬುಲೆಟ್ ಕೂಡ ಹೊರಬಂದಿದ್ದು ಹಿಟ್ಲರ್‌ನ ಬಂದೂಕಿನಿಂದ. ಆ ಬಂದೂಕು ಆಕೆಯ ಪಕ್ಕದಲ್ಲೇ ಬಿದ್ದಿತ್ತು, ಜೆಲಿಗೆ ಬಂದೂಕನ್ನು ಹಾರಿಸಲು ಗೊತ್ತಿತ್ತು, ಆದ್ದರಿಂದ ಆಕೆಯೇ ಬಂದೂಕಿನಿಂದ ಗುಂಡು ಹಾರಿಸಿಕೊಂಡು ಸತ್ತಳೆಂದು ನಾಝಿಗಳು ಹೇಳಿದ್ದರು.

ಆದರೆ ಆಕೆಯ ಸಾವಿನ ಬಗ್ಗೆ ಪೊಲೀಸ್ ಅಧಿಕಾರಿ ಹೈನ್ರಿಕ್ ಮ್ಯುಲ್ಲರ್ ನೀಡಿದ್ದ ವರದಿಯ ಪ್ರಕಾರವೇ ಬುಲೆಟ್ ಆಕೆಯ ಶ್ವಾಸಕೋಶವನ್ನು ಪ್ರವೇಶಿಸಿ ಸೊಂಟದ ಹತ್ತಿರ ಸಿಕ್ಕಿಹಾಕಿಕೊಂಡಿತ್ತು, ಇದನ್ನು ಆಧರಿಸಿ ಕೆಲವರು ತರ್ಕಿಸುವ ಪ್ರಕಾರ "ಬಂದೂಕು ಹಾರಿಸಲು ಜೆಲಿಗೆ ಗೊತ್ತಿದ್ದರಿಂದ ಆಕೆ ನೇರವಾಗಿ ತನ್ನ ಹೃದಯಕ್ಕೆ ಗುಂಡನ್ನು ಹಾರಿಸುತ್ತಿದ್ದಳು. ಮಾತ್ರವಲ್ಲ ಬುಲೆಟ್ ಆಕೆಯ ದೇಹವನ್ನು ಪ್ರವೇಶಿಸಿರುವ ರೀತಿ ನೋಡಿದರೆ ಪ್ರಾಯಶಃ ಆಕೆ ಕೂತಿದ್ದಾಗ ಆಕೆಯ ಎದುರು ನಿಂತಿದ್ದವರು ಬುಲೆಟ್‌ಅನ್ನು ಹಾರಿಸಿರುವಂತೆ ತೋರುತ್ತದೆ."

ಜೆಲಿಯ ಅಂತ್ಯಸಂಸ್ಕಾರಗಳೂ ನಿಗೂಢವಾಗಿ ನಡೆಯಿತು. ಆಕೆಯನ್ನು ಜರ್ಮನಿಯಲ್ಲಿ ಹೂಳದೇ ಪಕ್ಕದ ದೇಶವಾದ ಆಸ್ಟ್ರಿಯಾದ ರಾಜಧಾನಿ ವಿಯನ್ನಾದಲ್ಲಿರುವ ಕ್ಯಾಥೊಲಿಕ್ ಕ್ರಿಶ್ಚಿಯನ್ನರ ರುದ್ರಭೂಮಿಯಲ್ಲಿ ಹೂಳಲಾಯಿತು. ಅದಕ್ಕೆ ಮುಖ್ಯ ಕಾರಣ ಆಕೆಯನ್ನು ಜರ್ಮನಿಯಲ್ಲೇ ಹೂತಿದ್ದರೆ ಮುಂದೆ ಯಾರಾದರೂ ಆಕೆಯ ಸಾವಿನ ಬಗ್ಗೆ ಪ್ರಶ್ನೆಗಳನ್ನು ಎತ್ತಿ ಆಕೆಯ ಶವವನ್ನು ಮರುಪರೀಕ್ಷೆಗೆ ಒಳಪಡಿಸಬೇಕೆಂದು ಕೇಳದೆ ಇರಲಿ ಎಂಬುದಾಗಿತ್ತು.

ವಿಯೆನ್ನಾದಲ್ಲಿ ಜೆಲಿಯ ಅಂತ್ಯಸಂಸ್ಕಾರಗಳನ್ನು ನಡೆಸಿದ್ದು ಪಾದ್ರಿ ಯೊಹಾಸ್ ಪಾಂಟ್ ಎಂಬುವವರು. ಕ್ಯಾಥೊಲಿಕ್ ಧಾರ್ಮಿಕ ನಂಬಿಕೆಗಳ ಪ್ರಕಾರ ಆತ್ಮಹತ್ಯೆ ಮಾಡಿಕೊಳ್ಳುವುದೂ ಒಂದು ಅಪರಾಧವಾದ್ದರಿಂದ ಸಾಮಾನ್ಯವಾಗಿ ಆ ಧರ್ಮದ ರುದ್ರಭೂಮಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವವರ ಸಂಸ್ಕಾರಗಳು ನಡೆಯುವುದಿಲ್ಲ. ಆದರೂ ಪಾದ್ರಿ ಪಾಂಟ್ ಜೆಲಿಯ ಅಂತ್ಯಸಂಸ್ಕಾರಗಳನ್ನು ನಡೆಸಿದ್ದು ಯಾಕೆ?

ಈ ಪ್ರಶ್ನೆಗೆ ಪಾಂಟ್ ಅವರು 1939ರಲ್ಲಿ ಫ್ರೆಂಚ್ ಪತ್ರಿಕೆಯೊಂದಕ್ಕೆ ಹೀಗೆ ಮಾರ್ಮಿಕವಾಗಿ ಉತ್ತರಿಸಿದ್ದರು: "ಅದೊಂದು ಆತ್ಮಹತ್ಯೆ ಎಂಬಂತೆ ಸಂಬಂಧಪಟ್ಟವರು ನಟಿಸಿದ್ದರು. ಆದರೂ ನಾನು ಆಕೆಗೆ ಕ್ರಿಶ್ಚಿಯನ್ ಧಾರ್ಮಿಕ ಸಂಪ್ರದಾಯಗಳ ಪ್ರಕಾರ ಅಂತ್ಯಸಂಸ್ಕಾರವನ್ನು ನೆರವೇರಿಸಿದೆ ಎಂದರೆ ಆಕೆ ಸತ್ತಿದ್ದು ಹೇಗೆ ಎಂಬುದನ್ನು ನೀವೇ ತರ್ಕಿಸಿ."


ಜೆಲಿಯ ನಿಗೂಢ ಸಾವನ್ನು ಮುಚ್ಚಿಹಾಕುವಲ್ಲಿ ಆಗಿನ ಆಸ್ಟ್ರಿಯಾ ಸರ್ಕಾರದಲ್ಲಿ ಕಾನೂನಿನ ಮಂತ್ರಿಯಾಗಿದ್ದ ಫ್ರಾಮ್ಜ್ ಗುರುತ್ನರ್ ಎಂಬುವವನ ಪಾತ್ರವೂ ಇತ್ತು. ಗುರುತ್ನರ್ ಬಲಪಂಥೀಯ ಸಿದ್ಧಾಂತದ ಬೆಂಬಲಿಗನಾಗಿದ್ದನಲ್ಲದೆ ನಾಝಿಗಳಿಗೆ ನೆರವನ್ನೂ ನೀಡುತ್ತಿದ್ದ. ಅಷ್ಟೇ ಅಲ್ಲ ಆನಂತರ ಆತ ಹಿಟ್ಲರ್ ಸರ್ಕಾರದಲ್ಲಿ ಕಾನೂನಿನ ಮಂತ್ರಿಯ ಸ್ಥಾನ ಪಡೆದನಲ್ಲದೆ 1934ರಲ್ಲಿ ನಾಝಿಗಳು ತಮ್ಮ ನೂರಾರು ವಿರೋಧಿಗಳನ್ನು ಕೊಂದುಹಾಕಿದ್ದನ್ನೂ ಸಮರ್ಥಿಸಿಕೊಂಡಿದ್ದ.

ಆಗ ನಾಝಿಗಳನ್ನು ವಿರೋಧಿಸುತ್ತಿದ್ದ 'ಡರ್ ಗೆರಾಡೆ ವೆಗ್' ಎಂಬ ಪತ್ರಿಕೆಯ ಸಂಪಾದಕ ಫ್ರಿಟ್ಜ್ ಗೆರ್ಲಿಚ್ ಎಂಬುವವರು ಜೆಲಿಯ ನಿಗೂಢ ಸಾವಿನ ಬಗ್ಗೆ ತನಿಖೆ ನಡೆಸಿ ಆಕೆ ಆತ್ಮಹತ್ಯೆಯ ಮಾಡಿಕೊಳ್ಳಲಿಲ್ಲ, ಬದಲಾಗಿ ಆಕೆ ಹಿಟ್ಲರ್‌ನ ವಿಕೃತಿಯ ಬಗ್ಗೆ ಎಲ್ಲಿ ಬಾಯಿಬಿಡುತ್ತಾಳೊ ಎಂದು ಹೆದರಿ ಹಿಟ್ಲರ್ ಅಥವಾ ಆತನ ನಾಝಿ ಪಡೆ ಆಕೆಯನ್ನು ಕೊಂದು ಹಾಕಿತು ಎಂದು ವಾದಿಸಿದ್ದರು. ಅದಕ್ಕೆ ಅವರಿಗೆ ಸಿಕ್ಕ ಪ್ರತಿಫಲ ಏನು ಗೊತ್ತಾ? ನಾಝಿಗಳು ಗೆರ್ಲಿಚ್ ಅವರನ್ನು 1934ರ ಜೂನ್ 30ರಂದು ಕೊಂದು ಹಾಕಿದರಲ್ಲದೆ ಅದರ ಬಗ್ಗೆ ಅವರ ಮಡದಿಗೆ ತಿಳಿಸಲು ರಕ್ತಸಿಕ್ತವಾಗಿದ್ದ ಅವರ ಕನ್ನಡಕವನ್ನು ಕಳುಹಿಸಿದ್ದರು.

ಜೆಲಿ ಬಗ್ಗೆ ಓದಿದಾಗ ಮಾನಸಿಯ 'ಸ್ನೂಪ್ ಗೇಟ್' ಹಗರಣ ನೆನಪಾಗಿದ್ದರಿಂದ ಇಷ್ಟೆಲ್ಲಾ ಹೇಳಬೇಕಾಯಿತು. ■



ಮಂಡ್ಯ: ಲೋಕಾಯುಕ್ತರ ಕೈಗೆ ತಗಲಾಕಿಕೊಂಡ ಮಿಮ್ಸ್ ವೈದ್ಯ ನಂದೀಶ್


ಡಾಕ್ಟರ್ ನಂದೀಶ್

ಆಸೆಯೇ ದುಃಖಕ್ಕೆ ಮೂಲ, ಅತಿ ಆಸೆ ಗತಿಕೇಡು ಎಂಬ ಗಾದೆ ಮಾತುಗಳು ಮಂಡ್ಯ ವೈದ್ಯಕೀಯ ಕಾಲೇಜಿನ (ಮಿಮ್ಸ್) ಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ.ವಿ.ಎಲ್. ನಂದೀಶ್‌ಗೆ ಕರೆಕ್ಟಾಗೇ ಒಪ್ಪುತ್ತದೆ. ಉಚಿತವಾಗಿ ಆರೋಗ್ಯ ಸೇವೆ ಮಾಡುತ್ತಿದ್ದೇನೆಂದು ಪೋಸು ನೀಡಿ ಜನರನ್ನು ನಂಬಿಸಿದ್ದ ಡಾಕ್ಟರ್ ನಂದೀಶನ ಅಸಲಿಮುಖವನ್ನು ಲೋಕಾಯುಕ್ತ ಪೊಲೀಸರು ಬೆತ್ತಲುಗೊಳಿಸಿದ್ದಾರೆ. ಉತ್ತಮ ಡಾಕ್ಟರ್ ಎಂದು ಕೊಂಡಾಡುತ್ತಿದ್ದ ಜಿಲ್ಲೆಯ ಜನರೇ ನಂದೀಶರ ಅಕ್ರಮ ಆಸ್ತಿ-ಪಾಸ್ತಿಗಳ ಪಟ್ಟಿ ಕಂಡು ದಂಗಾಗಿಹೋಗಿದ್ದಾರೆ. ಲೋಕಾಯುಕ್ತ ಪೊಲೀಸರು ತನ್ನ ಮುಖವಾಡ ಕಳಚಿದ್ದಲ್ಲದೆ, ಹಣ, ಚಿನ್ನಾಭರಣ ವಶಪಡಿಸಿಕೊಂಡಿರುವುದನ್ನು ಕಂಡು ಡಾಕ್ಟರ್ ನಂದೀಶ್ ಅಂಬೋ ಎಂದು ಬಾಯಿಬಡಿದುಕೊಳ್ಳುತ್ತಿದ್ದಾರೆ.

ಕೆಲ ದಿನಗಳ ಹಿಂದೆ ಬೆಂಗಳೂರಿನ ಲೋಕಾಯುಕ್ತ ಎಸ್ಪಿ ಪಿ.ಕೆ.ಶಿವಶಂಕರ್, ಮಂಡ್ಯ ಲೋಕಾಯುಕ್ತ ಡಿವೈಎಸ್ಪಿ ಗಿರಿಜೇಶ್, ರಾಮನಗರ ಡಿವೈಎಸ್ಪಿ ಧನಂಜಯ್, ಇನ್ಸ್‌ಪೆಕ್ಟರ್‌ಗಳಾದ ಅನಿಲ್, ಗೋಪಾಲಕೃಷ್ಣರ ನೇತೃತ್ವದಲ್ಲಿ ಮಂಡ್ಯದ ಅಶೋಕನಗರ ನಿವಾಸ, ಮಂಡ್ಯ ಡಯಾಗ್ನೋಸ್ಟಿಕ್ ಸೆಂಟರ್ ಹಾಗೂ ಸ್ವಗ್ರಾಮ ಮಳವಳ್ಳಿಯ ವಿರಾಜಪುರದ ಮನೆ ಮೇಲೆ ಏಕಕಾಲಕ್ಕೆ ದಾಳಿ ಮಾಡಿದ ತಂಡಕ್ಕೆ ಡಾ.ನಂದೀಶ್ ಮಾಡಿದ್ದ ಅಕ್ರಮ ಆಸ್ತಿಯ ದೊಡ್ಡ ಪಟ್ಟಿಯೇ ಸಿಕ್ಕಿತ್ತು. ಎರಡು ದಿನಗಳ ಕಾಲ ದಾಳಿ ನಡೆಯಿತೆಂದರೆ ಉತ್ತಮ ವೈದ್ಯರೆಂದು ಹೆಸರು ಮಾಡಿದ್ದ ಡಾ.ನಂದೀಶರು ಅದೆಷ್ಟು ಆಸ್ತಿ-ಪಾಸ್ತಿ ಸಂಪಾದಿಸಿದ್ದರೆಂಬುದು ಗೊತ್ತಾಗುತ್ತದೆ. ಲೋಕಾಯುಕ್ತರ ಪ್ರಕಾರ ಡಾ.ನಂದೀಶರ ಅಧಿಕೃತ ಆದಾಯ 1.08 ಕೋಟಿ. ಆದರೆ ಸಿಕ್ಕ ಆಸ್ತಿಯ ಮೌಲ್ಯ 3.65 ಕೋಟಿ ರೂ. ಅಂದರೆ ಅವರು ಶೇ.235.42ರಷ್ಟು ಆಸ್ತಿ ಅಕ್ರಮವಾಗಿ ಸಂಪಾದಿಸಿದ್ದಾರೆ.


ಲೋಕಾಯುಕ್ತ ದಾಳಿ ನಡೆಯಲು ಕಿಡಿಗೇಡಿಗಳೇ ಕಾರಣ, ದಾಳಿಯಲ್ಲಿ ಸಿಕ್ಕಿರುವ ಕೋಟ್ಯಂತರ ಮೌಲ್ಯದ ಆಸ್ತಿಗಳು ನನ್ನ ತಾತ, ಅಪ್ಪನವು ಎಂದೆಲ್ಲಾ ಬೋಂಗು ಬಿಡುತ್ತಿರುವ ಡಾ.ನಂದೀಶ್ ಮಾತನ್ನು ಯಾರೂ ನಂಬುತ್ತಿಲ್ಲ. ಉಚಿತ ಆರೋಗ್ಯ ಸೇವೆಯ ಹೆಸರಲ್ಲಿ ಇಷ್ಟೊಂದು ಆಸ್ತಿ ಮಾಡಿರುವ ಡಾಕ್ಟರ್ ನಂದೀಶ್‌ರ ಮನೆ ಮೇಲಿನ ಲೋಕಾಯುಕ್ತ ದಾಳಿಯನ್ನು ಬಹುತೇಕ ಜನರು ಕೊಂಡಾಡುತ್ತಿದ್ದಾರೆ. ಡಾ.ನಂದೀಶ್ ಸುತ್ತಲಿರುವ ಧನದಾಹಿ ಬೆರಳೆಣಿಕೆ ವೈದ್ಯರು ಅವರಿಗೆ ಸಾಂತ್ವನ ಹೇಳುತ್ತಾ ಖಂಡನೆ, ಪ್ರತಿಭಟನೆ ಮಾಡುತ್ತೇನೆಂದು ಅರಚಿ ಏನೂ ಮಾಡದೆ ಸುಮ್ಮನಾಗಿದ್ದಾರೆ.

ಸಿಕ್ಕ ಆಸ್ತಿ ಎಷ್ಟು?

ಉಚಿತವಾಗಿ ಜನರಿಗೆ ಸೇವೆ ಮಾಡುತ್ತಿದ್ದೇನೆಂದು ಜನರಿಂದ, ಸಂಘ-ಸಂಸ್ಥೆಗಳಿಂದ ಶಹಬ್ಬಾಸ್ ಹೇಳಿಸಿಕೊಳ್ಳುತ್ತಿದ್ದ ನಂದೀಶರನ್ನು ಜನ ಈಗ 'ಈತನದ್ದು ಸೇವಾ ಮನೋಭಾವವಲ್ಲ, ಸ್ವಾಹಾ ಮನೋಭಾವ' ಎಂದು ಟೀಕಿಸುತ್ತಿದ್ದಾರೆ.

ಲೋಕಾಯುಕ್ತ ಪೊಲೀಸರ ದಾಳಿಯಲ್ಲಿ ಡಾ.ನಂದೀಶ್ ಅವರು ಪತ್ನಿ, ಪುತ್ರ, ಪುತ್ರಿಯ ಹೆಸರಲ್ಲಿ ಖರೀದಿಸಿರುವ ಅಷ್ಟೂ ಆಸ್ತಿಗಳು ಬಯಲಾಗಿಹೋಗಿದೆ. ಆ ಪ್ರಕಾರ ಅವರ ಬಳಿ ಬೆನ್ಜ್ ಸೇರಿದಂತೆ ಹೋಂಡಾ ಸಿಟಿ, ಶವರ್ಲೆಟ್ ಸ್ಪಾರ್ಕ್, ಮಾಟಿಜ್ ಕಂಪನಿಯ ಕಾರುಗಳಿವೆ. 55 ಲಕ್ಷ ರೂ. ಮೌಲ್ಯದ ಬೆನ್ಜ್‌ಕಾರು 3 ಮೋಟಾರು ಬೈಕ್‌ಗಳು ಅವರ ಬಳಿ ಇತ್ತು, ನಂದೀಶರ ಅಧಿಕೃತ ಆದಾಯ 1.08 ಕೋಟಿ ರೂ. ಬರೀ ಕಾರುಗಳ ಶೋಕಿಗೆ ಖರ್ಚಾಗಬೇಕಿತ್ತು, ಆದರೆ ಡಾ.ನಂದೀಶ್ ಸಾಹೇಬರು 10 ಲಕ್ಷ ರೂ. ಮೌಲ್ಯದ ಎಂಡೋಸ್ಕೋಪಿ ಯಂತ್ರವನ್ನು ಮನೆಯಲ್ಲೇ ಇಟ್ಟುಕೊಂಡಿದ್ದರು.

ಮಂಡ್ಯದ ಬ್ಯಾಂಕ್ ಲಾಕರ್‌ನಲ್ಲೇ 1 ಕೆ.ಜಿ. 400 ಗ್ರಾಂ ಚಿನ್ನ ಪತ್ತೆಯಾಯಿತು. 1 ಲಕ್ಷ ರೂ. ನಗದು, 13 ಕೆ.ಜಿ. ಬೆಳ್ಳಿ ಹಾಗೂ 15 ಲಕ್ಷದ ಗೃಹಪಯೋಗಿ ವಸ್ತುಗಳು ಕೂಡ ದೊರೆತಿದೆ. ಇನ್ನು ಬೆಂಗಳೂರಿನ ಜೆ.ಪಿ.ನಗರದಲ್ಲಿ ಒಂದು ಫ್ಲಾಟ್, ಕೆಂಗೇರಿಯಲ್ಲಿ ಒಂದು ಮನೆ, ಉಲ್ಲಾಳದಲ್ಲಿ 40x60ಅಳತೆ ಸೈಟು, ಪುಟ್ಟೇನಹಳ್ಳಿಯಲ್ಲಿ 60x40 ಸೈಟು, ಮಂಡ್ಯದ ಕಿರಗಂದೂರು ಬಡಾವಣೆಯಲ್ಲಿ 40x50 ಅಳತೆ ಸೈಟು, ಮೈಸೂರಿನ ಬನ್ನೂರು ರಸ್ತೆಯಲ್ಲಿ 60x40 ಅಳತೆಯ ಸೈಟು ನಂದೀಶ್ ಹೊಂದಿರುವುದು ಪತ್ತೆಯಾಗಿದೆ. ಹಾಗೆಯೇ ಧನದಾಹಿ ವೈದ್ಯರೇ ಸೇರಿ ಮಾಡಿರುವ ದುಡ್ಡಿನ ಅಡ್ಡೆಯಾದ ಮಂಡ್ಯ ಡಯಾಗ್ನೋಸ್ಟಿಕ್ ಸೆಂಟರ್ ಎಂಬ ಕೇಂದ್ರದಲ್ಲೂ ಪತ್ನಿ ವಿನಯಾ ನಂದೀಶ್ ಹೆಸರಲ್ಲಿ ಪಾಲುದಾರಿಕೆ ಹೊಂದಿರುವುದು ಪತ್ತೆಯಾಗಿದೆ. ಹಾಗೆಯೇ ನಂದೀಶರ ಸ್ವಗ್ರಾಮ ಮಳವಳ್ಳಿ ತಾಲ್ಲೂಕು ವಿರಾಜಪುರದಲ್ಲಿ ಪಿತ್ರಾರ್ಜಿತವಾಗಿ 10.5 ಎಕರೆ ಜಮೀನು, 4.5 ಎಕರೆ ಸ್ವಂತ ಜಮೀನು ಹೊಂದಿರುವುದು ಬಯಲಾಗಿದೆ. ಉಚಿತ ಸೇವೆ ಮಾಡುತ್ತಿದ್ದೇನೆಂದು ಹೇಳುವ ಡಾ.ನಂದೀಶ್‌ರವರಿಗೆ ಇಷ್ಟೊಂದು ಆಸ್ತಿ ಎಲ್ಲಿಂದ ಬಂತು ಎಂಬುದು ಯಕ್ಷ ಪ್ರಶ್ನೆಯಾಗಿದೆ.


ಡಾಕ್ಟರ್ ನಂದೀಶ್‌ರ ಮಳವಳ್ಳಿಯ ವಿರಾಜಪುರದ ಬಂಗಲೆ

ತಾತ-ಅಪ್ಪಂದು

ನಂದೀಶ್ 'ಯಾರೋ ಕಿಡಿಗೇಡಿಗಳು ಸುಳ್ಳು ಮಾಹಿತಿ ನೀಡಿ ಲೋಕಾಯುಕ್ತ ರೇಡ್ ಮಾಡಿಸಿದ್ದಾರೆ. ಒಂದೂವರೆ ಕೆ.ಜಿ. ಚಿನ್ನಾಭರಣ ನನ್ನಪ್ಪ ನನಗೆ ಕೊಟ್ಟಿದ್ದು, ಆಸ್ತಿ ನನ್ನ ತಾತನದ್ದು' ಎಂದೆಲ್ಲಾ ಕಂಡಕಂಡವರ ಎದುರು ಹೇಳಿಕೊಂಡು ಗೋಳಾಡುತ್ತಿದ್ದರೂ ಜನ ಮಾತ್ರ ನಂಬುತ್ತಿಲ್ಲ. ಒಂದೂವರೆ ಕೆ.ಜಿ.ಚಿನ್ನ ನನ್ನಪ್ಪ ಕೊಟ್ಟಿದ್ದೆಂದು ಹೇಳುವ ನಂದೀಶ್, ಆತನ ತಮ್ಮ ಶೈಲೇಂದ್ರನಿಗೆ ಹಾಗೂ ಮೂವರು ಹೆಣ್ಣು ಮಕ್ಕಳಿಗೆ ಆಗಿನ ಕಾಲದಲ್ಲೇ ಒಂದೂವರೆ ಕೆ.ಜಿ.ಯಷ್ಟು ಚಿನ್ನ ಅವರಪ್ಪ ಕೊಟ್ಟಿದ್ದರೆ? ಅಷ್ಟೊಂದು ಅವರಪ್ಪನಿಗೆ ಎಲ್ಲಿಂದ ಬಂತು? ಎಂದು ಜನರು ಕೂಡ ಸಾರ್ವಜನಿಕವಾಗಿ ಚರ್ಚೆ ಮಾಡುತ್ತಿರುವುದು ಮಂಡ್ಯದಲ್ಲಿ ಸಖತ್ ಇಂಟರೆಸ್ಟಿಂಗ್ ಆಗಿದೆ.


ಲೆಕ್ಕಕ್ಕೇ ಸಿಗದ್ದು

ನಂದೀಶರನ್ನು ಹತ್ತಿರದಿಂದ ಗಮನಿಸಿದವರು ಬೇರೆಯದ್ದೇ ಮಾಹಿತಿ ನೀಡುತ್ತಾರೆ. ಲೋಕಾಯುಕ್ತ ದಾಳಿಯಲ್ಲಿ ಸಿಕ್ಕಿದ್ದು ಏನೇನು ಅಲ್ಲ, ಸಿಗಬೇಕಾದ್ದು ತುಂಬಾ ಇದೆ ಎಂದು ಆರೋಪಿಸುತ್ತಿದ್ದಾರೆ. ಅದರಲ್ಲೂ ಮಿಮ್ಸ್ ಡಾಕ್ಟರ್‌ಗಳೇ ಈ ಬಗ್ಗೆ ನಿತ್ಯ ಚರ್ಚೆ ಮಾಡುತ್ತಿದ್ದಾರೆ.

ನಂದೀಶ್ ತನ್ನ ಪುತ್ರ ಡಾ.ಅಮೋಘನನ್ನು ಬೆಂಗಳೂರಿನ ಹೊಸಕೋಟೆಯ ಎಂವಿಜೆ ಮೆಡಿಕಲ್ ಕಾಲೇಜಿನಲ್ಲಿ ರೇಡಿಯಾಲಜಿ ಎಂ.ಡಿ. ಪದವಿಗೆ ಸೇರಿಸಿದ್ದಾರೆ. ಇದು ಮೆರಿಟ್ ಸೀಟ್ ಅಲ್ಲ, ಬದಲಿಗೆ ಪೇಮೆಂಟ್ ಖೋಟಾ. ಪ್ರಸ್ತುತ 1.50 ಕೋಟಿ ರೂ. ಫೀಸ್ ನಡೆಯುತ್ತಿದೆ. ನಂದೀಶ್ ಕೂಡ ತಮ್ಮ ಮಗನಿಗೆ 1.50 ಕೋಟಿ ಫೀಸ್ ಕಟ್ಟಿದ್ದಾರೆಂದು ಹೇಳಲಾಗುತ್ತಿದೆ. ಮಗಳನ್ನು ದೆಹಲಿಯ ಲಾ ಸ್ಕೂಲ್‌ಗೆ ಸೇರಿಸಿದ್ದು, ಅಲ್ಲಿಯ ಫೀಸ್, ಖರ್ಚು ತಿಂಗಳಿಗೆ ಲಕ್ಷ ಲಕ್ಷ ದಾಟುತ್ತದೆ. ಮಿಮ್ಸ್‌ನಲ್ಲಿ ತಿಂಗಳಿಗೆ 1.25 ಲಕ್ಷ ರೂ. ಪಡೆಯುವ ನಂದೀಶ್‌ಗೆ ಇವೆಲ್ಲಾ ಹೇಗೆ ಸಾಧ್ಯ ಎಂಬ ಪ್ರಶ್ನೆಗೂ ಉತ್ತರವಿದೆ.

ಉಚಿತ ಸೇವೆ ಮಾಡುವ ಡಾ.ನಂದೀಶ್ ಇಷ್ಟೆಲ್ಲಾ ಆಸ್ತಿ -ಪಾಸ್ತಿ ಮಾಡಲು ಬೇರೆಯದ್ದೇ ಕಾರಣವಿದೆ. ಮಿಮ್ಸ್‌ನಲ್ಲಿ ವೈದ್ಯರಾಗಿರುವ ಯಾರೇ ಆದರೂ ನಿಯಮದ ಪ್ರಕಾರ ಹತ್ತಾರು ನರ್ಸಿಂಗ್ ಹೋಂಗಳಲ್ಲಿ ಸೇವೆ ಸಲ್ಲಿಸುವಂತಿಲ್ಲ, ಕೇವಲ ಒಂದು ನರ್ಸಿಂಗ್ ಹೋಂನಲ್ಲಿ ಸೇವೆ ಮಾಡಬಹುದು. ಆದರೆ ಡಾ. ನಂದೀಶ್ ನಗರದಲ್ಲಿರುವ ಹತ್ತಾರು ನರ್ಸಿಂಗ್ ಹೋಂಗಳಿಗೆ ಭೇಟಿ ಕೊಡುತ್ತಾರೆ. ಮನೆಯಲ್ಲೂ ಕ್ಲಿನಿಕ್ ತೆರೆದಿರುವ ನಂದೀಶ್ ಅಲ್ಲಿಗೆ ಬರುವ ರೋಗಿಗಳಿಂದ ಹಣ ಮುಟ್ಟುವುದಿಲ್ಲ. ರೋಗಿಗಳನ್ನು ಜಿಲ್ಲಾಸ್ಪತ್ರೆಗೆ ಕಳುಹಿಸದೆ ಬೇರೆ ಬೇರೆ ನರ್ಸಿಂಗ್ ಹೋಂಗಳಿಗೆ ರೆಫರ್ ಮಾಡುತ್ತಾರೆ.

ಪ್ರತಿ ರೋಗಿಗೂ ಇಂತಿಷ್ಟು ಎಂದು ನರ್ಸಿಂಗ್ ಹೋಂಗಳು ನೀಡುತ್ತವೆ. ಹಾಗೆಯೇ ತನ್ನ ಪತ್ನಿ ಪಾಲುದಾರಿಕೆಯಲ್ಲಿರುವ ಮಂಡ್ಯ ಡಯಾಗ್ನೋಸ್ಟಿಕ್ ಸೆಂಟರ್ ಎಂಬ ದುಡ್ಡಿನ ಅಡ್ಡೆಗೆ ಪ್ರತಿ ರೋಗಿಗಳನ್ನು ಪರೀಕ್ಷಿಸಲು ಕಳುಹಿಸುವುದರಿಂದಲೂ ಸಾಕಷ್ಟು ಕಮಾಯಿ ಆಗುತ್ತದೆ ಎಂಬುದು ಇವರ ಕಂಡರಾಗದ ವೈದ್ಯರ ಆರೋಪ.


ಡಾಕ್ಟರ್ ನಂದೀಶ್‌ರ ಮಂಡ್ಯ ಡಯಾಗ್ನೋಸ್ಟಿಕ್ ಸೆಂಟರ್

ನಂದೀಶರ ಇಷ್ಟೆಲ್ಲಾ ಆಸ್ತಿಗಳನ್ನು ನೋಡಿದರೆ ಈ ಆರೋಪ ನಿಜ ಎಂಬುದು ಗೊತ್ತಾಗುತ್ತದೆ.

ಲಿಂಗಾಯತ ಸಮುದಾಯಕ್ಕೆ ಸೇರಿದ ನಂದೀಶ್ ಮಳವಳ್ಳಿ ತಾಲ್ಲೂಕಿನ ವಿರಾಜಪುರ ಗ್ರಾಮದಿಂದ ಮಂಡ್ಯಕ್ಕೆ ಬಂದು ಹಲವು ವರ್ಷಗಳೇ ಕಳೆದಿದೆ. ಮೊದಲಿಗೆ ಆದಿಚುಂಚನಗಿರಿ ಮೆಡಿಕಲ್ ಕಾಲೇಜಿನ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ನಂದೀಶ್ ಜಿಲ್ಲೆಯ ಜನರ ಮನಸ್ಸಿನಲ್ಲಿ ಉತ್ತಮ ಸ್ಥಾನ ಪಡೆದವರು. ಮೊದಲು ಸೇವಾ ಮನೋಭಾವ ಹೊಂದಿದ್ದ ಡಾಕ್ಟರ್ ನಂದೀಶ್‌ರಿಗೆ ಹಣ ಮಾಡುವ ಬಗ್ಗೆ ಅದ್ಯಾರು ಹೇಳಿಕೊಟ್ಟರೋ ಗೊತ್ತಿಲ್ಲ, ಉತ್ತಮ ಶಸ್ತ್ರ ಚಿಕಿತ್ಸಕರೆಂದು ಹೆಸರು ಮಾಡಿರುವ ನಂದೀಶ್ ಪರ ಜಿಲ್ಲೆಯ ಜನರಿಗೆ ಒಳ್ಳೆಯ ಅಭಿಪ್ರಾಯವಿತ್ತು, ತಾವು ಮಾಡಿರುವ ಸೇವೆಗೆ ಕೆ.ವಿ.ಶಂಕರೇಗೌಡ ಪ್ರಶಸ್ತಿ ಪಡೆದಿದ್ದ ಡಾ.ನಂದೀಶ್‌ರನ್ನು ಹಲವು ಸಂಘ - ಸಂಸ್ಥೆಗಳು ಸನ್ಮಾನಿಸಿ ಅಭಿನಂದಿಸಿವೆ. ಆದರೆ ದುಡ್ಡು ಮಾಡುವ ಹಪಾಹಪಿಗೆ ಬಿದ್ದ ನಂದೀಶ್ ಬರುಬರುತ್ತಾ ತಮ್ಮ ಹೆಸರನ್ನು ಸ್ವಲ್ಪಮಟ್ಟಿಗೆ ಕಳೆದುಕೊಂಡಿದ್ದರು. ಈಗ ಲೋಕಾಯುಕ್ತ ದಾಳಿಯ ನಂತರ ಇದ್ದ ಅಲ್ಪಸ್ವಲ್ಪ ಹೆಸರನ್ನು ಕಳೆದುಕೊಂಡಿದ್ದಾರೆ ಎಂಬುದು ಜನರ ಮಾತಿನಿಂದಲೇ ವ್ಯಕ್ತವಾಗುತ್ತಿದೆ.

ನಕಲಿ ಸರ್ಟಿಫಿಕೇಟ್

ಆದಿ ಚುಂಚನಗಿರಿ ಮೆಡಿಕಲ್ ಕಾಲೇಜಿನಲ್ಲಿ ಡಾ.ನಂದೀಶ್ ಪ್ರಾಧ್ಯಾಪಕರಾಗಿದ್ದರು. ಮಂಡ್ಯದಲ್ಲೇ ಮೆಡಿಕಲ್ ಕಾಲೇಜು ಆರಂಭವಾದಾಗ ಇಲ್ಲಿ ಕೆಲಸ ಗಿಟ್ಟಿಸಿದ ನಂದೀಶರು ಅದಕ್ಕಾಗಿ ನಕಲಿ ಬೋಧನಾ ಪ್ರಮಾಣ ಪತ್ರವನ್ನು ಕೊಟ್ಟಿದ್ದರು. 1998ರಿಂದ 2005ರವರೆಗೆ ಆದಿಚುಂಚನಗಿರಿ ಮೆಡಿಕಲ್ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದೆ ಎಂಬ ನಕಲಿ ಸರ್ಟಿಫಿಕೇಟ್‌ನ್ನು ಮಿಮ್ಸ್‌ಗೆ ಕೊಟ್ಟು ನಂದೀಶ್ ಬಡ್ತಿ ಪಡೆದಿದ್ದರು. ಈ ಬಗ್ಗೆ ಹೋರಾಟಗಾರರಾದ ಎಚ್.ಎಲ್.ಕೇಶವಮೂರ್ತಿ, ಕೆ.ಬೋರಯ್ಯ, ಸುನಂದ ಜಯರಾಂ, ಕೃಷ್ಣಪ್ರಕಾಶ್ ಸೇರಿದಂತೆ ಹಲವರು ದನಿಯೆತ್ತಿ ಡಾ.ನಂದೀಶ್ ಮತ್ತಿತರರ ವಿರುದ್ಧ ಲೋಕಾಯುಕ್ತ ಹಾಗೂ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದರು. ಅಲ್ಲದೆ ನಕಲಿ ಸರ್ಟಿಫಿಕೇಟ್ ಸಲ್ಲಿಸಿದ ವೈದ್ಯರ ವಿರುದ್ಧ ತನಿಖೆಗೆಂದು ಸರ್ಕಾರದಿಂದ ನೇಮಿಸಲಾದ ನಿವೃತ್ತ ನ್ಯಾಯಾಧೀಶರಾದ ಎನ್. ನಾರಾಯಣ್ ಕೂಡ ಡಾ.ನಂದೀಶ್ ಸೇರಿದಂತೆ ಇತರ ವೈದ್ಯರು ಸುಳ್ಳು ಬೋಧನಾ ಪ್ರಮಾಣಪತ್ರ ನೀಡಿ ಬಡ್ತಿ ಪಡೆದಿರುವುದು ನಿಜ. ಇವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ಅಂದಿನ ವೈದ್ಯಕೀಯ ಸಚಿವ ಎ.ರಾಮದಾಸ್‌ಗೆ ವರದಿ ನೀಡಿದ್ದರು. ಆ ವರದಿಯನ್ನು ಅಂದಿನ ಕೆಳಗೆ ಹಾಕಿಕೊಂಡು ಕೂತ ರಾಮದಾಸ್ ಕಣ್ಣೆತ್ತಿಯೂ ನೋಡಲಿಲ್ಲ, ನಂತರ ಹೈಕೋರ್ಟ್ ನಿವೃತ್ತ ನ್ಯಾಯಾಧೀಶ ಗುರುರಾಜನ್ ನೇತೃತ್ವದ ಸಮಿತಿ ಆದಿಚುಂಚನಗಿರಿ ಕಾಲೇಜಿಗೆ ಭೇಟಿ ನೀಡದೆ ಸುಳ್ಳು ಬೋಧನಾ ಪ್ರಮಾಣ ಪತ್ರದ ಬಗ್ಗೆ ಅಪೂರ್ಣ ಹಾಗೂ ಏಕಪಕ್ಷೀಯ ವರದಿ ನೀಡಿತು. ಈ ಮಧ್ಯೆ ಹೋರಾಟಗಾರರಾದ ಎಚ್.ಎಲ್.ಕೇಶವಮೂರ್ತಿ ಮತ್ತವರ ತಂಡ ಜನರಲ್ಲಿ ಜಾಗೃತಿ ಮೂಡಿಸಲು, ಸರ್ಕಾರದ ಕಣ್ಣು ತೆರೆಸಲು 'ಮಿಮ್ಸ್ ವೈದ್ಯರ ಅಕ್ರಮ- ಮುಂದೇನು?' ಎಂಬ ಪುಸ್ತಕವನ್ನು ಹೊರತಂದರು. ಇದರಿಂದ ಸಿಟ್ಟಿಗೆದ್ದ ನಂದೀಶ್ ಹಾಗೂ ಅವರ ಧನದಾಹಿ ವೈದ್ಯರ ತಂಡ ಮಾನ ಹೋಯಿತೆಂದು ಹಾರಾಡಿ ಮಂಡ್ಯ ನ್ಯಾಯಾಲಯದಲ್ಲಿ ಅವರ ವಿರುದ್ಧ ಮಾನನಷ್ಟ ಮೊಕದ್ದಮೆ ಹಾಕಿದ್ದಾರೆ.

ರಾಜೀನಾಮೆ ಬೆದರಿಕೆ


ಮಿಮ್ಸ್‌ನಲ್ಲಿ ಡಾ.ನಂದೀಶ್ ಮಾತು ಚೆನ್ನಾಗೇ ನಡೆಯುತ್ತದೆ. 2006ರಲ್ಲಿ ಮಿಮ್ಸ್ ನಿರ್ದೇಶಕ ಚಿದಾನಂದ ಅಕ್ರಮ ನೇಮಕಾತಿ ಹಾಗೂ ಖರೀದಿಯಲ್ಲಿ ಭಾಗಿಯಾಗಿದ್ದಾನೆ ಎಂದು ಎಚ್.ಎಲ್.ಕೇಶವಮೂರ್ತಿ, ಕೆ.ಬೋರಯ್ಯ, ಸುನಂದಾ ಜಯರಾಂ, ಡಾ.ವಾಸು ಮತ್ತಿತರರು ಪ್ರಗತಿಪರ ಸಂಘಟನೆಗಳು ಒಕ್ಕೂಟ ಕಟ್ಟಿಕೊಂಡು ಚಿದಾನಂದನ ವಿರುದ್ಧ ಹೋರಾಟ ರೂಪಿಸಿದ್ದರು. ಆ ಸಂದರ್ಭದಲ್ಲಿ ಚಿದಾನಂದನ ಪರ ವಕಾಲತ್ತು ಹಾಕಿದ್ದ ಡಾ.ನಂದೀಶ್ ಎಲ್ಲಾ ವೈದ್ಯರನ್ನು ಸೇರಿಸಿ ಸಾಮೂಹಿಕ ರಾಜೀನಾಮೆ ನೀಡುವ ಬೆದರಿಕೆ ಹಾಕಿದ್ದರು. ಮತ್ತೊಂದು ಬಾರಿ ಪ್ರಗತಿಪರ ಸಂಘಟನೆಯ ಕಾರ್ಯಕರ್ತರು ಜಿಲ್ಲಾಸ್ಪತ್ರೆಯಲ್ಲಿ ಕೆಲಸ ಮಾಡದ ವೈದ್ಯರನ್ನು ಹಿಡಿದು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದಿದ್ದರು. ಇದರಿಂದ ಸಿಟ್ಟಿಗೆದ್ದ ನಂದೀಶ್ ಮತ್ತು ತಂಡ ರಾಜೀನಾಮೆ ನೀಡುವ ಬೆದರಿಕೆ ಹಾಕಿ ಮಿಮ್ಸ್ ಶಿಕ್ಷಕರ ಸಂಘದ ಮೂಲಕ ವಿದ್ಯಾರ್ಥಿಗಳನ್ನು ಎತ್ತಿಕಟ್ಟಿ ಪ್ರತಿಭಟನೆ ಮಾಡಿಸಿದ್ದರು. ಈ ಬಗ್ಗೆ ಇಲಾಖಾ ವಿಚಾರಣೆ ನಡೆಯುತ್ತಿದೆ.

ಹತ್ತಾರು ನರ್ಸಿಂಗ್ ಹೋಂಗಳಿಗೆ ಭೇಟಿ ಮಾಡಬೇಡಿ ನಿಮ್ಮ ವಿರುದ್ಧ ಸಾಕಷ್ಟು ದೂರಿದೆ ಎಂದು ಕೆಲ ತಿಂಗಳ ಹಿಂದಷ್ಟೇ ಮಿಮ್ಸ್ ನಿರ್ದೇಶಕ ಡಾ.ಪುಷ್ಪಸರ್ಕಾರ್ ನಂದೀಶ್ ಸೇರಿದಂತೆ ಹಲವಾರು ವೈದ್ಯರನ್ನು ಕರೆಸಿ ಎಚ್ಚರಿಕೆ ನೀಡಿದ್ದರು. ಆಗಲೂ ರಾಜೀನಾಮೆ ಬೆದರಿಕೆ ಹಾಕಿದ ನಂದೀಶ್ ಮಾತಿಗೆ ಕ್ಯಾರೇ ಎನ್ನದೆ ಮೂರು ತಿಂಗಳು ರಜೆ ಬಿಸಾಕಿ ಖಾಸಗಿ ನರ್ಸಿಂಗ್ ಹೋಂಗಳನ್ನು ಸುತ್ತುತ್ತಿದ್ದರು.

ಈಗ ಅವರ ಮೇಲೆ ಲೋಕಾಯುಕ್ತ ರೇಡ್ ನಡೆದಿದೆ. ಲೋಕಾಯುಕ್ತ ದಾಳಿಯ ನಂತರವಾದರೂ ಹಣ ಮಾಡುವ ದುರಾಸೆ ಬದಿಗಿಟ್ಟು ಪ್ರಾಮಾಣಿಕವಾಗಿ ಸೇವೆ ಮಾಡಲಿ ಎಂಬುದು ಜನರ ಆಶಯವಾಗಿದೆ.

...ರಾವಳಿ: ಎರಡು ಎಡವಟ್ಟು ಸಾಹಿತ್ಯ ಸಮಾಚಾರಗಳು!

ಾಹಿತ್ಯ ಸಮ್ಮೇಳನಕ್ಕೆ ಧನನಾಯಕ್ ಸೂತಕ ಿಂಕೋಲಾದ ಬೇಲೇಕೇರಿ ಬಂದರಿನಲ್ಲಿ ಅದಿರು ರಿಕೆ ಬಂದಾಗಿ ಎರಡು ವರ್ಷ ಕಳೆದಿದೆ. ಆದರೂ ಾಹುತಕಾರಿ ದಂಧೆಯ ಅಡ್ಡ ಪರಿಣಾಮ ಮಾತ್ರ ೂ ನಿಂತಿಲ್ಲ. ಅದಿರು ವಹಿವಾಟು ಅಂಕೋಲಾ ರ ಸುತ್ತಲಿನ ಹಳ್ಳಿಗಳಲ್ಲಿ ಮಾಡಿದ ಸಾವು-ನೋವು, ಮಾಲಿನ್ಯ, ಹಬ್ಬಿಸಿದ ರೋಗ-ರುಜಿನ, ಮೀನುಗಾರ-ಕುಲ ಕಸುಬಿಗೆ ಕೊಟ್ಟ ಸಂಚಕಾರ, ಹುಟ್ಟು ಹಾಕಿದ ಡೆಗಳ ವಿಕೃತ ಕತೆಗಳಂತೂ ಹೇಳತೀರದು. ಈಗ ದಿರು ಸೈತಾನ್ ಅಂಕೋಲೆಯಲ್ಲಿ ರಕ್ತದ ಹೆಜ್ಜೆಗಳನ್ನು ಸಿಬಿಟ್ಟಿದ್ದಾನೆ.



ವಿರೋದ್ಯಮಿ ಆರ್.ಎನ್.ನಾಯಕ್‌ನನ್ನು ಅಂಡರ್ ಸುಪಾರಿ ಹಂತಕರು ಆಹುತಿ ಪಡೆಯುತ್ತಿದ್ದಂತೆಯೇ ಬಿಸ್ನೆಸ್‌ನ ಪಾತಕ ಪುರಾಣ ಅನಾವರಣಗೊಂಡಿದೆ. ದಿರು ವ್ಯವಹಾರ ಉತ್ತರ ಕನ್ನಡದ ರಾಜಕೀಯ-ಜಿಕ-ಸಾಂಸ್ಕೃತಿಕ ಮತ್ತು ಸಾಹಿತ್ಯ ವಲಯದೊಳಗೆ ಗೆ ಹಾಸುಹೊಕ್ಕಾಗಿ ತನ್ನ ಹಿಡಿತಕ್ಕೆ ಿಸಿಕೊಂಡಿತ್ತೆಂಬುದಕ್ಕೆ ಧನನಾಯಕ್ ಕಗ್ಗೊಲೆ ನಿಚ್ಚಳ ನದಂತಿದೆ! ಆರೆನ್ನೆನ್ ಹತ್ಯೆಯಾದಾಗ ಕಂಗೆಟ್ಟಿದ್ದ ಸಾಹಿತ್ಯ ಪರಿಷತ್ ವಾರ ಕಳೆದರೂ ಸೂತಕದ ಯಿಂದ ಹೊರಬರಲಾಗದೆ ಚಡಪಡಿಸುತ್ತಿದೆ. ತಮ್ಮ ಚಟುವಟಿಕೆಗೆ ಮಹಾ ಪೋಷಕನಂತಿದ್ದ ಆರೆನ್ನೆನ್ ಬಳಿಕ ಸಭೆ ಸೇರಿದ್ದ ಕಸಾಪ ಪರಾಕ್ರಮಿಗಳು 4 ಮತ್ತು 5 ರಂದು ನಡೆಯಬೇಕಿದ್ದ ಜಿಲ್ಲಾ ಸಮ್ಮೇಳನವನ್ನೇ ಹಠಾತ್ ಮುಂದೂಡಿಬಿಟ್ಟರು! ವು 'ಸಾಯಿತ್ತ'ಗಳಂತೂ ಆರೆನ್ನೆನ್‌ರ ಕಪ್ಪು ದಂಧೆಯನ್ನು ಾಡುವ ಭರದಲ್ಲಿ ಹಲುಬಿದ್ದು ಆಘಾತಕಾರಿಯಾಗಿತ್ತು. ೆರ ಸಾವಿನ ಹದಿನಾಲ್ಕು ದಿನಗಳನಂತರ ೇಕಿದ್ದ ಜಿಲ್ಲಾ ಸಾಹಿತ್ಯ ಜಾತ್ರೆಯನ್ನು ಬಲವಂತದಿಂದ ಾಡಿದ್ದು 'ಅದಿರು ಸಾಹಿತ್ಯ' ಅವಾಂತರವೇ ಸರಿ. ಸಮ್ಮೇಳನ ಎಂಬುದು ಜಾತಿ-ಧರ್ಮ-ವರ್ಗ-ಳ ಹಂಗಿಲ್ಲದೇ ನಡೆಯಬೇಕಾದ ಕೈಂಕರ್ಯವೇ ವ್ಯಕ್ತಿ ಪ್ರತಿಷ್ಠೆಯ ವೈಭವೀಕರಣವಲ್ಲ. ಈ ಸರಳ ಕಸಾಪ ಧಿಕ್ಕರಿಸಿ ಆರೆನ್ನೆನ್ ಸಾವಿನ ನೆಪವೊಡ್ಡಿ ಸಮ್ಮೇಳನ ಮುಂದಕ್ಕೆ ಹಾಕಿದೆ. ಆರೆನ್ನೆನ್ ಸಮ್ಮೇಳನಕ್ಕೆ 25 ಸಾವಿರ ರೂ. ಕೊಡುವುದಾಗಿ ಹೇಳಿದ್ದರಂತೆ. ಅಷ್ಟೇ ಅಲ್ಲ, ಆರ್ಥಿಕ ಅಡಚಣೆಯಾದರೆ ಮತ್ತೆ ಸಹಾಯ ಮಾಡುವುದಾಗಿಯೂ ಭರವಸೆ ಕೊಟ್ಟಿದ್ದರಂತೆ.

ಅಂದರೆ, ಆರೆನ್ನೆನ್‌ರ ಫಂಡಿನ ಬಲದ ಮೇಲೆ ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ಅದರ ಅಧ್ಯಕ್ಷ ರೋಹಿದಾಸ್ ನಾಯ್ಕ್ ಗ್ಯಾಂಗು ಹಮ್ಮಿಕೊಂಡಿತ್ತೆಂಬ ಅರ್ಥ ಧ್ವನಿಸುತ್ತದೆ. ಮಾಜಿ ಅಬಕಾರಿ ಇಲಾಖೆಯ ಅಧಿಕಾರಿಯಾದ ಈ ರೋಹಿದಾಸ್ ನಾಯ್ಕ್ ಪಕ್ಕಾ ಅಸಾಹಿತ್ಯ ಆಸಾಮಿ; ಆತ ಬರೆದಿರುವ ಸಾಹಿತ್ಯ ಆತನಿಗೇ ಪ್ರೀತಿ. ಸಾಹಿತ್ಯ ಸರದಾರ ಎನಿಸಿಕೊಳ್ಳುವ ತೆವಲು ಈತನಿಗೆ. ಅಬಕಾರಿ ಅಧಿಕಾರಿಯಾಗಿದ್ದಾಗ ಕೂಡಿ ಹಾಕಿದ್ದ ಕಾಸಿನ ಬಲದಿಂದಲೇ ಈತ 'ಸಾಹಿತ್ಯ ರಾಜಕೀಯ' ಮಾಡುತ್ತಾ ಬಂದಿದ್ದಾನೆ. ಕಳೆದೆರಡು ಅವಧಿಯ ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷನಾಗಿರುವ ಈತ ಕಸಾಪ ಎಲೆಕ್ಷನ್‌ನಲ್ಲಿ ಆಡಿದ ಆಟ ಯಾವ ವೃತ್ತಿನಿರತ ಪೊಲಿಟಿಕಲ್ ಪುಢಾರಿ ಪುಂಡಾಟಕ್ಕೇನೂ ಕಡಿಮೆಯಿರಲಿಲ್ಲ. ಇಂಥ ಇತಿಹಾಸದ ರೋಹಿದಾಸ್ ನಾಯ್ಕ್ ಅಂಕೋಲೆಯಲ್ಲಿ ಆರೆನ್ನೆನ್ ಹತ್ಯೆಯಾಗುವಾಗ ದಿಲ್ಲಿಯಲ್ಲಿ ಅದ್ಯಾವುದೋ ಸಾಹಿತ್ಯ ಸಮ್ಮೇಳನಕ್ಕೆ ಹೋಗಿದ್ದರು. ಅಲ್ಲಿಂದಲೇ ಸಂತಾಪ ಸೂಚಿಸಿದ ನಾಯ್ಕ್ ಅಂಕೋಲೆಯಲ್ಲಿ ನಡೆಯಬೇಕಿದ್ದ ಜಿಲ್ಲಾ ಸಾಹಿತ್ಯ ಸಮ್ಮೇಳನದ ಬಗ್ಗೆ ಒಂದು 'ನಿರ್ಧಾರ'ಕ್ಕೆ ಬರುವಂತೆ ತನ್ನ ಬಳಗಕ್ಕೆ ಸೂಚಿಸಿದ್ದರಂತೆ.

ರೋಹಿದಾಸ್ ನಾಯ್ಕ್‌ರ ಮಾರ್ಗದರ್ಶಕರಾದ ಹಿರಿಯ ಸಾಹಿತಿಯೊಬ್ಬರು ತಕ್ಷಣ ಕಸಾಪದ ಸದಸ್ಯರನ್ನು ಸಂಪರ್ಕಿಸಿ ಸಾಹಿತ್ಯ ಸಮ್ಮೇಳನವನ್ನು ನಿಗದಿತ ದಿನಾಂಕದಂದು ನಡೆಸಬೇಕೋ? ಮುಂದೂಡಬೇಕೋ? ಎಂದು ಅಭಿಪ್ರಾಯ ಕೇಳಿದರಂತೆ. ಆಗ ಬಹುತೇಕರು ಈಗಾಗಲೇ ಘೋಷಿಸಿದ್ದ ದಿನದಂದೇ ಸಮ್ಮೇಳನ ಮಾಡಿ ಮುಗಿಸೋಣ ಎಂದು ಹೇಳಿದ್ದಾರೆ. ಸದ್ರಿ ಸಮ್ಮೇಳನಕ್ಕೆ ಕಸಾಪ ಭರದ ಸಿದ್ಧತೆ ನಡೆಸಿತ್ತು. ಸಾಕಷ್ಟು ಕಾಸೂ ಖರ್ಚು ಮಾಡಿತ್ತು. ವೇದಿಕೆ-ಬ್ಯಾನರ್-ಅಡುಗೆ, ಅತಿಥಿಗಳಿಗೆ ಉಳಿವ-ಕರೆತರುವ ವ್ಯವಸ್ಥೆ ಆಮಂತ್ರಣ ಪತ್ರಿಕೆ ಮುದ್ರಣ... ಹೀಗೆ ಹಲವು ಕೆಲಸ ಆಗಿತ್ತು. ಕೊನೆ ಗಳಿಗೆಯಲ್ಲಿ ಸಮ್ಮೇಳನ ಮುಂದೂಡಿದರೆ ಹಣ ಪೋಲಾಗುತ್ತೆ; ಪುನಃ ಶ್ರಮ-ಹಣ ವ್ಯಯಿಸಬೇಕಾಗುತ್ತದೆಂಬುದು ಪ್ರಜ್ಞಾವಂತ ಸಾಹಿತಿಗಳ ಒಮ್ಮತವಾಗಿತ್ತು. ನಿಗದಿತ ಸಮಯಕ್ಕೆ ಸಮ್ಮೇಳನ ನಡೆಸುವುದು ಉತ್ತಮ ಎಂಬ ಅಭಿಪ್ರಾಯ ಮೂಡಿತ್ತು.


ಅಷ್ಟಕ್ಕೂ ಸಾಹಿತ್ಯ ಸಮ್ಮೇಳನ ನಡೆಯುವುದು ಸೂತಕದ 12 ದಿನದ ನಂತರವೇ ಆಗಿತ್ತು. ಆದರೂ ಇದ್ಯಾವುದೂ ಲೆಕ್ಕಿಸದೇ ಅಂಕೋಲಾದ ಸಾಹಿತ್ಯ ಸಮ್ಮೇಳನವನ್ನು ದಿಢೀರ್ ಮುಂದಕ್ಕೆ ತಳ್ಳುವ ನಿರ್ಧಾರಕ್ಕೆ ಕಸಾಪ ಬಂದುಬಿಟ್ಟಿತು. ಹಿಂದೆಲ್ಲ ಕಸಾಪದ ದಾನಿ-ದಾತರು ಸತ್ತಾಗ ತೋರಿಸಿದ ಗೌರವ-ಸಂತಾಪ ಆರೆನ್ನೆನ್ ಬಗ್ಗೆ ತೋರಿಸಲಾಗಿತ್ತು. ಯಾಕೆ ಇಂಥ 'ವಿಶೇಷ ಸೂತಕ' ಕಸಾಪ ಆಚರಿಸುತ್ತದೆ? ಅಂಥದೊಂದು ಜಿಜ್ಞಾಸೆಗೆ ಬಿದ್ದವರು ಹೋಗಿ ನಿಂತಿದ್ದು ಕಪ್ಪು ಹಣದ ಅದಿರು ಉದ್ಯಮದ ಅಡ್ಡೆಗೇ!! ಆರೆನ್ನೆನ್‌ರ ಹಣದ ಮಹಿಮೆಯಿಂದ ಸಾಹಿತ್ಯ ಸಮ್ಮೇಳನ ಮುಂದಕ್ಕೆ ಹೋಗಿದೆ. ಜತೆಗೆ ಜಾತಿ ಸಾಹಿತ್ಯ ರಾಜಕಾರಣವೂ ಥಳುಕು ಹಾಕಿಕೊಂಡಿದೆ.


ಆರೆನ್ನೆನ್ ಜಾತಿಯಲ್ಲಿ ನಾಡವ. ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷರು ನಾಮಧಾರಿ. ಆತನ ಸುತ್ತಲೂ ಜಾತಿ ಬಳಗದ ಪದಾಧಿಕಾರಿಗಳೇ ತುಂಬಿಕೊಂಡಿದ್ದಾರೆ. ಉತ್ತರ ಕನ್ನಡದಲ್ಲಿ ಅದರಲ್ಲೂ ಅಂಕೋಲಾದಲ್ಲಿ ನಾಡವ-ನಾಮಧಾರಿ ಜಾತಿ ವೈಷಮ್ಯಕ್ಕೆ ಅದರವೇ ಆದ ಬರ್ನಾಸ್ ಇತಿಹಾಸವಿದೆ. ಸಾಹಿತ್ಯ ಸಮ್ಮೇಳನ ಮುಂದೂಡದಿರಲು ಕಸಾಪದ 'ಥಿಂಕ್ ಟ್ಯಾಂಕ್' ನಿರ್ಧರಿಸಿದಾಗ ಜಾತಿ ಅಸ್ತ್ರ ಹಿಡಕೊಂಡು ಎಂಟ್ರಿಯಾದವನು ಗೋಪಾಲಕೃಷ್ಣ ನಾಯಕ್ ಎಂಬ ರಾಜ್ಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ. ಅಂಕೋಲಾ ಮೂಲದ ನಾಡವ ಸಮಾಜದ ಗೋಪು ದಂಧೆ-ದಗಲುಬಾಜಿಯಲ್ಲಿ ಜಿಲ್ಲೆಯ ಹೊರಗೇ. ಈತನೂ ಅದಿರು ಉದ್ಯಮದ ಬೈ-ಪ್ರಾಡಕ್ಟ್!

ಥೂತ್ ಕಾಂಗ್ರೆಸ್ ಲೀಡರ್ ಆಗಿ ಅವತಾರ ಎತ್ತಿದ ನಂತರವೇ ಈ ಗೋಪು ರೋಪು ಅಂಕೋಲಾ-ಕಾರವಾರದಲ್ಲಿ ಶುರುವಾಗಿತ್ತು. ಆತನಕ ಆತ ಅನಾಮಧೇಯ. ಕಾಂಗ್ರೆಸ್‌ನ ಅಸೆಂಬ್ಲಿ ಟಿಕೆಟ್‌ಗೂ ಬೆವರಿಳಿಸಿದ್ದ. ಇಂಥ ಗೋಪು ತನ್ನ ಬೆಂಬಲಿಗರೊಂದಿಗೆ ಸೇರಿಕೊಂಡು ಸಾಹಿತ್ಯ ಸಮ್ಮೇಳನ ಮುಂದೂಡಲೇಬೇಕೆಂದು ರಂಪ ಎಬ್ಬಿಸಿಬಿಟ್ಟ! ಸಾಹಿತ್ಯ ಸಮ್ಮೇಳನ ರದ್ದು ಮಾಡದಿದ್ರೆ ಬಹಿಷ್ಕಾರ ಹಾಕುತ್ತೇವೆ-ಎಂದು ಬೊಬ್ಬಿರಿದ. ಇದಕ್ಕೆ ಕಸಾಪದ ಕಲಿಗಳು ಸೊಪ್ಪು ಹಾಕಲಿಲ್ಲ. ಸಮ್ಮೇಳನ ಮುಂದೂಡಿದರೆ ಹಾನಿಯಾಗುತ್ತದೆ; ಸಮ್ಮೇಳನದ ಹೊತ್ತಿಗೆ ಸೂತಕವೂ ಮುಗಿದಿರುತ್ತದೆ ಎಂದು ಸಮಜಾಯಿಷಿ ನೀಡಿದರು. ಆಗ ಮತ್ತಷ್ಟು ಸೆಟಗೊಂಡ ಗೋಪು ಗ್ಯಾಂಗ್ ಜಾತಿರಾಜಕೀಯದ ಧಮಕಿ ಹಾಕಿದರು. ಆಗ ಜಿಲ್ಲಾ ಕಸಾಪದ ನಾಮಧಾರಿ ಪಂಗಡದ ಅಧ್ಯಕ್ಷ ರೋಹಿದಾಸ್ ನಾಯ್ಕ್ ಅಂಡ್ ಕೋ. ಕಂಗಾಲಾಯ್ತು.

ಬೇರೆ ದಾರಿ ಕಾಣದೆ ಜನವರಿ ಮೊದಲ ವಾರ ನಿಗದಿಯಾಗಿದ್ದ ಜಿಲ್ಲಾ ಸಾಹಿತ್ಯ ಸಮ್ಮೇಳನ ಅನಿರ್ದಿಷ್ಟಾವಧಿ ಮುಂದೂಡಿದರು ಕಸಾಪ ಆಡಳಿತಗಾರರು. ಹೇಗಿದೆ ಅದಿರು ಉದ್ಯಮದ ಕಪ್ಪು ಕಾಸಿನ ಮಹಿಮೆ? ಸಾಹಿತ್ಯ-ಸಾಂಸ್ಕೃತಿಕ ಪ್ರಜ್ಞೆಯನ್ನೂ ಅದಿರೋದ್ಯಮ ಕಲುಷಿತಗೊಳಿಸುವ ದುರಂತವಿದು!!







ಶಕುಂತಲ ಶೆಟ್ಟಿ | ವಸಂತ್ ಬಂಗೇರ | ಮೋಹನ್ ಆಳ್ವ

2. ಸೌಜನ್ಯ ಕೊಲೆಗಾರರ ಕೃಪೆಯಲ್ಲಿ ಆಳ್ವಾಸ್ "ಧನಸಿರಿ"!!

ಮೂಡಬಿದರೆಯ ಮೂಢ ಸಾಹಿತ್ಯ ಜಾತ್ರೆಯ ರೂವಾರಿ ಮೋಹನ್ ಆಳ್ವಾನ ಸಾಹಿತ್ಯ ವ್ಯಾಪಾರದಷ್ಟೇ ಆತಂಕ-ಅನುಮಾನ ಆತನ ಶೈಕ್ಷಣಿಕ ದಂಧೆ ಮೂಡಿಸಿದೆ. ಆತನ ಶೈಕ್ಷಣಿಕ ಬದ್ಧತೆ ಭಯ ಮೂಡಿಸುತ್ತಿದೆ. ಸರಿಸುಮಾರು ಇಪ್ಪತ್ತು ಸಾವಿರದಷ್ಟು ವಿದ್ಯಾರ್ಥಿಗಳಿರುವ ಶೈಕ್ಷಣಿಕ ಸಂಸ್ಥೆ ನಡೆಸುವ ನೈತಿಕತೆ, ನ್ಯಾಯವಂತಿಕೆ-ಮನುಷ್ಯತ್ವ ಆಳ್ವಾನಿಗಿದೆಯಾ ಎಂಬ ಜಿಜ್ಞಾಸೆ ಶುರುವಾಗಿದೆ.

ಧರ್ಮಸ್ಥಳ ಕಾಲೇಜಿನ ಅಮಾಯಕ ವಿದ್ಯಾರ್ಥಿನಿ ಸೌಜನ್ಯ ಗೌಡ ಧರ್ಮ ವ್ಯಾಪಾರಿಗಳ ಗ್ಯಾಂಗ್‌ನಿಂದ ರೇಪ್ ಮತ್ತು ಮರ್ಡರ್ ಆದಾಗ ಈ ಶಿಕ್ಷಣ ಪ್ರೇಮಿಗೆ ಒಂಚೂರೂ ನೋವು-ಬೇಸರ ಆಗಿರಲಿಲ್ಲ. ತರಹೇವಾರಿ ಶಿಕ್ಷಣ ಸಂಸ್ಥೆಗಳನ್ನು ನಡೆಸುವ ಈ ಶಿಕ್ಷಣ ವ್ಯಾಪಾರಿ ಸೌಜನ್ಯ ಪ್ರಕರಣ ನಡೆದಾಗ ಒಂದೇ ಒಂದು ಸಾಂತ್ವನ-ಸಿಟ್ಟಿನ ಸ್ಟೇಟ್‌ಮೆಂಟ್ ಕೊಟ್ಟಿರಲಿಲ್ಲ. ಬೇಡ ಬಿಡಿ; ಆತ ಸೌಜನ್ಯ ಪರ ಮಾತಾಡುವುದು ಬೇಡ. ಆದರೆ ಈ ಸ್ವಯಂಘೋಷಿತ ಶಿಕ್ಷಣ-ಸಾಹಿತ್ಯ ಪ್ರೇಮಿ ಸೌಜನ್ಯಳ ಕೊಂದು ತಿಂದು ಹಾಕಿದ ಪಾಪಿಗಳ ಕಾವಲುಭಟನಂತೆ ಕಂಗೊಳಿಸಿದ್ದು ಮಾತ್ರ ಘೋರ ಆಘಾತಕಾರಿಯೇ ಸರಿ!!

ಈ ಮೋಹನ್ ಆಳ್ವಾ ಧರ್ಮ ಸಂಸ್ಥಾನದ ರಾಜರ್ಷಿಗಳ ದಾಸಾನುದಾಸ. ಆತ ಕಾಲೇಜಿನ ತುಂಬ ದೇವದೂತರ ಗ್ಲಾಸ್-ಫ್ರೇಮ್ ಹಾಕಿದ ಫೋಟೋಗಳು ರಾರಾಜಿಸುತ್ತಿವೆ. ಅದೆಂಥ ಸಂಬಂಧವೋ? ಆಳ್ವಾನ ಶೈಕ್ಷಣಿಕ-ಸಾಹಿತ್ಯಕ-ಸಾಮಾಜಿಕ ಹರಾಕಿರಿಗಳೆಲ್ಲ ಈ ದೇವಮಾನವನ ಕೃಪಾಶೀರ್ವಾದದಿಂದಲೇ ಆರಂಭವಾಗುತ್ತವೆ. ಸೌಜನ್ಯ ಸಾವು ಸಿಬಿಐ ತನಿಖೆಗೆ ಒಳಪಡಿಸಬೇಕೆಂದು ಬೆಳ್ತಂಗಡಿ ಪ್ರಾಂತದಲ್ಲಿ ಪ್ರತಿಭಟನೆಗಳು ಭುಗಿಲೆದ್ದಾಗ ದೇವ ಸಂಸ್ಥಾನ ತತ್ತರಿಸಿಹೋಗಿತ್ತು. ಆಗ ದೇವರ ಹೆಸರಿನ ವ್ಯಾಪಾರಿಗಳು 'ಪ್ರತಿ ಪ್ರತಿಭಟನಾ ಸಭೆ' ನಡೆಸಿದ್ದರು. ತಾವು ಸುಬಗರೆಂದು ಬಿಂಬಿಸಿಕೊಳ್ಳಲು ತಿಪ್ಪರಲಾಗ ಹಾಕಿದ್ದರು. ಆ ಸಭೆಯಲ್ಲಿ ಮಂತ್ರಿಗಳಾದ ವಿನಯಕುಮಾರ್ ಸೊರಕೆ, ಅಭಯಚಂದ್ರ ಜೈನ್ ಭಾಗವಹಿಸಿ ಸೌಜನ್ಯ ಕೊಲೆಗಾರರೆಂದು ಸಂಶಯಕ್ಕೀಡಾದವರ ಪರ ವಕಾಲತ್ತು ನಡೆಸಿದ್ದರು. ಆ ದೇವದೂತರ ತಾರೀಫು ಮಾಡುವ ಸಭೆಯಲ್ಲಿ ಕಳಾಯಿಸಿದ್ದ ಮೂರನೆ ದೊಡ್ಡ ಮನುಷ್ಯನೆಂದರೆ ಇದೇ 'ಧನಸಿರಿ'ಯ ಮೋಹನ್ ಆಳ್ವಾ ಎಂಬ ಆಷಾಢಭೂತಿ.

ಸಹಜವಾಗೇ ಸೌಜನ್ಯ ಪರ ಹೋರಾಟಗಾರರೆಂದರೆ ಈ ಆತ್ಮರತಿ ಆದ್ಮಿಗೆ ಅಲರ್ಜಿ. ಈತ ಮೊನ್ನೆ ನಡೆಸಿದ ಆಳ್ವಾಸ್ ವಿರಾಸತ್ ಎಂಬ ಕೋಮುವಾದಿಗಳ-ಬಂಡವಾಳಶಾಹಿಗಳ ಮೇಳಕ್ಕೆ ಸೌಜನ್ಯ ಪರವಿರುವವರನ್ನು ಬುದ್ಧಿಪೂರ್ವಕವಾಗೇ ಕರೆದಿರಲಿಲ್ಲ. ಅವಿಭಜಿತ ದಕ್ಷಿಣ ಕನ್ನಡದ ಅಷ್ಟೂ ಮಂತ್ರಿ-ಶಾಸಕ-ಸಂಸದರನ್ನು ತನ್ನ ಸಾಹಿತ್ಯ ಶೋಗೆ ಆಹ್ವಾನಿಸಿದ್ದ ಆಳ್ವಾ ಸೌಜನ್ಯ ಪರ ಸರ್ಕಾರದ ಮಟ್ಟದಲ್ಲಿ ದೊಡ್ಡ ಬಡಿದಾಟ ಮಾಡಿದ್ದ ಬೆಳ್ತಂಗಡಿ ಶಾಸಕ ವಸಂತ ಬಂಗೇರ ಮತ್ತು ಪುತ್ತೂರಿನ ಶಕುಂತಲಾ ಶೆಟ್ಟಿಗೆ ಮಾತ್ರ ಕರೆದಿರಲಿಲ್ಲ. ಅಷ್ಟಕ್ಕೂ ಆಳ್ವಾನ ಸಾಹಿತ್ಯ ಪ್ರಹಸನ ಉದ್ಘಾಟಿಸಿದ್ದೇ ಧರ್ಮ ವ್ಯಾಪಾರಿ. ಆತನಿಗೆ ಮುಜುಗರ ಆಗಬಾರದೆಂದೇ ಇರಬೇಕು ಬಂಗೇರಾ ಮತ್ತು ಶಕುಂತಲರ ದೂರ ಇಟ್ಟಿದ್ದ ಮೋಹನ್ ಆಳ್ವಾ!


ಸಿಬಿಐ ತನಿಖೆಗೆ ಸೌಜನ್ಯ ಪ್ರಕರಣ ಒಳಪಡಿಸಬೇಕೆಂದು ಸಿಎಂ ಎದುರು ಶಕುಂತಲಾ ಶೆಟ್ಟಿ ಮತ್ತು ವಸಂತ ಬಂಗೇರಾ ಪಟ್ಟು ಹಿಡಿದು ಕೂತಿದ್ದರು. ಧರ್ಮವ್ಯಾಪಾರಿಗಳಂತೂ ನೇರಾನೇರ ವಸಂತ ಬಂಗೇರಾ ಮೇಲೆ ವಾಗ್ದಾಳಿ ನಡೆಸಿದ್ದರು. ಸೌಜನ್ಯ ಪ್ರಕರಣ ಸಿಬಿಐ ಒಳಪಡಿಸೋದು ಸ್ಥಳೀಯ ಶಾಸಕರ ಕರ್ತವ್ಯ ಎಂದು ಹೇಳುತ್ತ ಆತ ದೇವಬಳಗದ ಟಾರ್ಗೆಟ್ ಎಂಬ ಸಂದೇಶ ಬಿತ್ತರಿಸಿದ್ದರು. ಅಷ್ಟು ರೋಷ ಬಂಗೇರಾ ಮೇಲೆ ಸೌಜನ್ಯ ಕೊಲೆಗಾರ ತಂಡಕ್ಕೆ ಮಡುಗಟ್ಟಿತ್ತು. ಹಾಗೆಯೇ ವಿಧಾನಮಂಡಳದ ಮಹಿಳಾ-ಮಕ್ಕಳ ಸಮಿತಿ ಅಧ್ಯಕ್ಷೆಯಾದ ಶಕುಂತಲಾ ಶೆಟ್ಟಿಯೂ ಸಿಬಿಐ ತನಿಖೆಗೆ ಪ್ರಯತ್ನಿಸಿದ್ದರು.


ಕೋಟಿ-ಕೋಟಿ ಕರಗಿಸಿ ಆಯೋಜಿಸಿದ್ದ ಸಾಹಿತ್ಯ ಹೈಡ್ರಾಮಾದಲ್ಲಿ ಜೋಕರ್‌ನಂತೆ ಮಿಂಚಿದ ಆಳ್ವ ದೇವದೂತರ ಸಂಪ್ರೀತಗೊಳಿಸಿದನೇ ವಿನಃ ಜನರನ್ನು ಯಾಮಾರಿಸಲು ಈ ಬಾರಿ ಆತನಿಂದ ಸಾಧ್ಯವಾಗಲಿಲ್ಲ ಪಾಪ! ತನ್ನ ಶಿಕ್ಷಣ ವ್ಯಾಪಾರದ ಮಾರ್ಕೆಟಿಂಗ್ ಮೇಳ-ಕೋಮುವಾದಿಗಳ ವಿಜೃಂಭಿಸುವ ಅಸಾಹಿತ್ಯ ಕೂಟವೇ ಆಳ್ವಾಸ್ ನುಡಿಸಿರಿ ಎಂಬುದನ್ನು ಆತ ಸ್ವಯಂ ಸಾಬೀತು ಪಡಿಸಿಕೊಂಡು ಬಿಟ್ಟಿದ್ದ. ಹೀಗಾಗಿ ಈ ಬಾರಿ ಆತನಿಗೆ ನಾಡಿನಾದ್ಯಂತದಿಂದ ಛೀಮಾರಿ ಎದುರಾಗಿತ್ತು. ಹೀಗಾಗಿ ರಂಗು-ರಂಗಿನ ಪೇಟ-ಶರ್ವಾಣಿ ಹಾಕಿಕೊಂಡಿದ್ದ ಆಳ್ವ ತನ್ನ ಕಳೆಗುಂದಿದ ಮುಖ ಮರೆಮಾಚಲು ಸಾಧ್ಯವೇ ಆಗಿರಲಿಲ್ಲ. ಒಟ್ಟಿನಲ್ಲಿ ಆಳ್ವನ ಸಾಹಿತ್ಯ ಬಡಿವಾರದ ಅಸಲೀ ಅವತಾರ ಅನಾವರಣವಾಗಿ ಹೋಯ್ತು.

ಅಷ್ಟೇ ಅಲ್ಲ, 'ಧನಸಿರಿ' ಮೇಲೆ ಸೌಜನ್ಯಳ ಸಾವಿನ ಕರಿ ನೆರಳೂ ದಟ್ಟವಾಗಿ ಆವರಿಸಿತ್ತು. ಈಗ ಹೇಳಿ, ಹುಡುಗಿಯೊಬ್ಬಳ ಮಾನ-ಪ್ರಾಣ ಕ್ಷುಲ್ಲಕವಾಗಿ ಪರಿಗಣಿಸುವ ಕೊಲೆಗಾರರ ತಂದು ಅಸಾಹಿತ್ಯ ಸಮ್ಮೇಳನ ನಡೆಸಿ ಸುದ್ದಿಗೆ ಹಪಹಪಿಸುವ ಸಾಹಿತ್ಯೋದ್ಯಮಿ ಆಳ್ವಾಗೆ ಕಾಲೇಜುಗಳ ನಡೆಸುವ ನೈತಿಕತೆ ಇದೆಯಾ?!

■ ವರದಿಗಾರ

ದಾವಣಗೆರೆಯಲ್ಲಿ ಮೋದಿ ವರ್ಸಸ್ ಮಲ್ಲಿಕಾರ್ಜುನ್?





2014ರ ಮೇ ತಿಂಗಳಲ್ಲಿ ನಡೆಯಲಿರುವ ಪಾರ್ಲಿಮೆಂಟ್ ಚುನಾವಣೆಗೆ ದಾವಣಗೆರೆಯಲ್ಲಿ ಈಗಾಗಲೇ ಮಹತ್ವ ಬಂದಿದೆ. ಅತ್ತ ಬಿಜೆಪಿ ವತಿಯಿಂದ ಹಾಲಿ ಶಾಸಕ ಸಿದ್ದೇಶ್ವರರೇ ಕಣಕ್ಕಿಳಿಯುವುದು ಗ್ಯಾರಂಟಿಯಾಗಿದ್ದರೆ ಇತ್ತ ಕಾಂಗ್ರೆಸ್ ಕ್ಯಾಂಡಿಡೇಟ್ ಯಾರು ಎಂಬ ಲೆಕ್ಕಾಚಾರಗಳು ಶುರುವಾಗಿವೆ.

ಸದ್ಯ ಜಿಲ್ಲೆಯ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಏಳನ್ನು ಕಾಂಗ್ರೆಸ್ ಗೆದ್ದಿದೆ. ಆದರೂ ಇಲ್ಲಿನ ದಾವಣಗೆರೆ ಲೋಕಸಭಾ ಕ್ಷೇತ್ರದಿಂದ ಗೆಲ್ಲಲು ಸಿದ್ಧಾಂತ, ಪಕ್ಷ ಬದ್ಧತೆ, ಬಡವ, ಬಂಧು ಎನ್ನುವುದಕ್ಕೆಲ್ಲ ಕಿಮ್ಮತ್ತಿಲ್ಲ. ಬದಲಾಗಿ ಅಭ್ಯರ್ಥಿಯ ಗೆಲುವಿಗೆ ಜಾತಿಬಲ ಮತ್ತು ಝಣ-ಝಣ ಕಾಂಚಾಣ ಪ್ರಮುಖ ಎಂಬುದೇ ಕಟುಸತ್ಯವಾಗಿದೆ. ಯಾರಿಗೆ ಇವೆರಡೂ ಇದೆಯೋ ಅವರು ಮಾತ್ರ ಸಿದ್ದೇಶ್ವರರ ಎದುರು ಚುನಾವಣೆ ಮಾಡುವ ತಾಕತ್ತು ಹೊಂದಿರುವವರೆಂದು ಪರಿಗಣಿಸಲಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲೂ ಇಬ್ಬರು ಕಾಂಗ್ರೆಸ್ ಟಿಕೆಟ್‌ಗಾಗಿ ಕಸರತ್ತು ಶುರುಹಚ್ಚಿಕೊಂಡಿದ್ದಾರೆ.


ಮಹಿಮಾ ಮಾಯೆ?


ಹಿಂದೊಮ್ಮೆ ಜೆಡಿಎಸ್‌ನಿಂದ ಗೆದ್ದು ಶಾಸಕರಾಗಿದ್ದ ಮಹಿಮಾ ಪಟೇಲ್ ಆನಂತರ 2008ರಲ್ಲಿ ಸ್ವಂತ ಪಕ್ಷ ಕಟ್ಟಿ, ಸೂಳೇಕೆರೆಯಲ್ಲಿ ತಪಸ್ಸು ಮಾಡಿದರೂ ಚುನಾವಣೆಯಲ್ಲಿ ಸೋತು ಸುಣ್ಣವಾಗಿ ಕೊನೆಗೆ ಕಾಂಗ್ರೆ ಅಂಗಳಕ್ಕೆ ಬಂದುನಿಂತರು. ಇದೇ ಮಾರ್ಚ್‌ನಲ್ಲಿ ವಿಧಾನಸಭೆ ಚುನಾವಣೆಯಲ್ಲಿ ಚನ್ನಗಿರಿ ವಿಧಾನಸಭಾ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದರು ಮಹಿಮಾ. ಆದರೆ ಅದು ಸಿಗುವುದಿಲ್ಲ ಎಂದು ಖಾತ್ರಿಯಾದಾಗ ದಾವಣಗೆರೆ ಉತ್ತರ ಕ್ಷೇತ್ರದ ಟಿಕೆಟ್‌ಗಾಗಿ ಆಶಿಸಿದ್ದರು. ಆದರೆ ಅಷ್ಟುಹೊತ್ತಿಗೆ ದಾವಣಗೆರೆ ಕ್ಷೇತ್ರದಲ್ಲಿ ಶಾಮನೂರು ಮಲ್ಲಿಕಾರ್ಜುನರ ಮಿನಿ ವಿಮಾನ ಲ್ಯಾಂಡಾಗಿತ್ತು. ಅದು ಗೊತ್ತಾಗುತ್ತಿದ್ದಂತೆ ಮಹಿಮಾ ತಮ್ಮ ಇಚ್ಛೆಯ ಕಲ್ಕಿ ಭಗವಂತನ ಜಪ ಮಾಡುತ್ತಾ ಬೆಂಗಳೂರಿನ ಡಾಲರ್ಸ್ ಕಾಲೋನಿಯ ಮನೆ ಸೇರಿದ್ದರು. ಕಳೆದ ಆರು ತಿಂಗಳ ಕಾಲ ಕಲ್ಕಿ 'ಭಗವಂತ'ನ ಧ್ಯಾನದಲ್ಲಿದ್ದ ಮಹಿಮಾ ಪಾರ್ಲಿಮೆಂಟ್ ಚುನಾವಣೆಯ ಗದ್ದಲ ಶುರುವಾಗುತ್ತಿದ್ದಂತೆ ಎಚ್ಚರಗೊಂಡಿದ್ದಾರೆ. "ನೋಡ್ತಾ ಇರಿ, ದಾವಣಗೆರೆ ಪಾರ್ಲಿಮೆಂಟ್ ಕ್ಯಾಂಡಿಡೇಟು ನಾನೇ" ಎಂದು ಊರೂರು ಸುತ್ತಲು ಶುರುಮಾಡಿದ್ದಾರೆ.


ಆದರೆ ಸಿದ್ದೇಶ್ವರರ ಎದುರು ಮತಗಳಿಗೆ ಸೆಣಸಾಡುವಷ್ಟು ಆರ್ಥಿಕಶಕ್ತಿ ಮಹಿಮಾ ಅವರಿಗೆ ಖಂಡಿತಾ ಇಲ್ಲ. ಬದಲಾಗಿ ಅವರು ದಿವಂಗತ ಗೋಪಾಲ ಗೌಡರನ್ನು ನೆನಪು ಮಾಡಿಕೊಳ್ಳುತ್ತಾ ಮತದಾರರ ಎದುರು "ಒಂದು ವೋಟಿನ ಜೊತೆ ಒಂದು ರೂಪಾಯಿಯನ್ನೂ ಕೊಟ್ಟುಬಿಡಿ" ಎಂದು ಕೇಳುತ್ತಾ ಸುತ್ತಾಡುವ ಸಾಧ್ಯತೆಗಳೇ ಹೆಚ್ಚು.

ಎಲ್ಲೂ ಸಲ್ಲದ ಕೆಂಗೋ ಹನುಮಂತಪ್ಪ

ದಾವಣಗೆರೆ ಪಾರ್ಲಿಮೆಂಟ್ ಕ್ಷೇತ್ರದಲ್ಲಿ ಬಪ್ಪೂನಿನಂತೆ ಕಾಣಿಸಿಕೊಳ್ಳುವ ಕೆಂಗೋ ಹನುಮಂತಪ್ಪ ಒಂದೇ ಒಂದು ಬಾರಿ ಜಿಲ್ಲಾ ಪಂಚಾಯತಿಗೆ ಗೆದ್ದ ಆಸಾಮಿ.







ಹಳೆಯ ತಲೆಮಾರಿನ ರಾಜಕಾರಣಿ ಆದ ಹನುಮಂತಪ್ಪ ತಮ್ಮ ಸರ್ಕಾರಿ ನೌಕರಿಗೆ ರಾಜೀನಾಮೆ ನೀಡದೆ ಇದ್ದಿದ್ದರೆ ಅವರಿಗೆ ಈಗ ಪೆನ್ಷನ್ ಬರುತ್ತಿತ್ತು. ಆದರೆ ರಾಜಕೀಯದ ಹುಚ್ಚನ್ನು ಹತ್ತಿಸಿಕೊಂಡ ಹನುಮಂತಪ್ಪ ತನ್ನ ನೌಕರಿಗೆ ರಾಜೀನಾಮೆ ಬಿಸಾಡಿ ಚನ್ನಯ್ಯ ಒಡೆಯರ್ ಅವರ ಹಿಂದೆ ಅಲೆದಾಡಲು ಪ್ರಾರಂಭಿಸಿದರು. ಚನ್ನಯ್ಯ ಒಡೆಯರ್ ದಿವಂಗತರಾದ ನಂತರ ತಾನೇ ಒಡೆಯರ್ ರಾಜಕಾರಣಕ್ಕೆ ವಾರಸುದಾರ ಎಂಬಂತೆ ಪೋಸು ಕೊಟ್ಟರು. ಈಗ ಹನುಮಂತಪ್ಪ ತಾನೇ ಕಾಂಗ್ರೆಸ್ ಪಕ್ಷದ ಪಾರ್ಲಿಮೆಂಟ್ ಕ್ಯಾಂಡಿಡೇಟ್ ಎಂದು ಸ್ವಯಂ ನಿರ್ಧರಿಸಿರುವಂತಿದೆ.

ದಿವಂಗತ ಚನ್ನಯ್ಯ ಒಡೆಯರ್ ಅವರ ಕಾಲದಿಂದಲೂ ದಾವಣಗೆರೆ ಪಾರ್ಲಿಮೆಂಟ್ ಕ್ಷೇತದಲ್ಲಿ ಕುರುಬ ಸಮುದಾಯಕ್ಕೆ ಮಹತ್ವದ ಪಾತ್ರ ಇದೆ. ಹೊನ್ನಾಳಿ, ಹರಿಹರ, ಸ್ವಲ್ಪಮಟ್ಟಿಗೆ ದಾವಣಗೆರೆ ವಿಧಾನಸಭಾ ಕ್ಷೇತ್ರಗಳಲ್ಲಿ ಕುರುಬ ಸಮುದಾಯದ ಮತಗಳು ಕೆಲಸ ಮಾಡುತ್ತವೆ.

ಆದರೂ ಕಳೆದ ಎರಡು ಚುನಾವಣೆಗಳಲ್ಲಿ ಹೊನ್ನಾಳಿ ಮತ್ತು ಹರಿಹರ ಮತ ಕ್ಷೇತ್ರಗಳಲ್ಲಿ ಕುರುಬ ಸಮುದಾಯದ ಅಭ್ಯರ್ಥಿಗಳೇ ಸೋಲನ್ನು ಅನುಭವಿಸಿದ್ದರು. 2008ರ ಚುನಾವಣೆಯಲ್ಲಿ ಹರಿಹರದಿಂದ ಡಾ.ನಾಗಪ್ಪ ಬಿ.ಜೆ.ಪಿ ಹರೀಶನೆದುರು ಸೋತರೆ, 2013ರ ಚುನಾವಣೆಯಲ್ಲಿ ಅದೇ ಕೋಮಿನ ರಾಮಪ್ಪ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದರೂ ಜೆ.ಡಿ.ಎಸ್‌ನ ಶಿವಶಂಕರ್ ಎದುರು ಸೋಲನ್ನು ಕಂಡಿದ್ದರು. ಇಂತಹ ರಾಜಕೀಯ ವಾಸ್ತವದ ಎದುದು ಕೆಂಗೋ ಹನುಮಂತಪ್ಪ ಪಾರ್ಲಿಮೆಂಟ್ ಚುನಾವಣೆಗೆ ತನ್ನ ಸಮುದಾಯದ ಮತದಾರರನ್ನೇ ಆಧರಿಸಿ ಕಾಂಗ್ರೆಸ್ ಟಿಕೆಟ್‌ಗೆ ಪರಿತಪಿಸುತ್ತಿರುವುದು ಹಾಸ್ಯಾಸ್ಪದವಾಗಿದೆ.

ಈ ಕ್ಷೇತ್ರದಲ್ಲಿ ಕುರುಬ ಸಮುದಾಯ ಮತ್ತು ಸಾಧು ಲಿಂಗಾಯತರಲ್ಲದೆ ಪಂಚಮಸಾಲಿ ಲಿಂಗಾಯತರೂ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಜೊತೆಗೆ ಮುಸ್ಲಿಮರು, ನಾಯಕರು, ಪರಿಶಿಷ್ಟ ಜಾತಿಯ ಉಪ್ಪಾರರು ಯಾವುದೇ ಚುನಾವಣೆಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಾರೆ. ಇದನ್ನೆಲ್ಲ ಕೆಂಗೋ ಹನುಮಂತಪ್ಪ ಅರ್ಥ ಮಾಡಿಕೊಳ್ಳದಿರುವುದೇ ದುರಂತ.

ಎಲ್ಲರೂ ಹಿಂದೆ ಸರಿದರು

ಬರಲಿರುವ ಪಾರ್ಲಿಮೆಂಟ್ ಚುನಾವಣೆಯಲ್ಲಿ ಸ್ಪರ್ಧಿಸಲು ನಾಮುಂದು, ತಾಮುಂದು ಎನ್ನುತ್ತಿದ್ದ ಘಟಾನುಘಟಿಗಳೆಲ್ಲಾ ಸಿದ್ದೇಶ್ವರರೆದುರು ನಿಲ್ಲಲು ಅದೆಷ್ಟು ದುಡ್ಡು ಬೇಕೆನ್ನುವುದನ್ನು ಲೆಕ್ಕಹಾಕಿಯೇ ಹಿಂದೆ ಸರಿದರು.

ಹರಿಹರ ಕ್ಷೇತ್ರದ ಮಾಜಿ ಮಂತ್ರಿ ಡಾ.ವೈ.ನಾಗಪ್ಪನವರು ಕುರುಬ ಸಮುದಾಯದವರಾದರೂ ಬರೀ ಜಾತಿಯನ್ನಾಧರಿಸಿಯೋ ಅಥವಾ ಸಂಪೂರ್ಣವಾಗಿ ಜಾತ್ಯತೀತರಾಗಿಯೊ ಪಾರ್ಲಿಮೆಂಟ್ ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವಿಲ್ಲ ಎಂದು ಅರ್ಥಮಾಡಿಕೊಂಡೇ ತಮ್ಮ ಪಾರ್ಲಿಮೆಂಟ್ ಕನಸಿಗೆ ಎಳ್ಳುನೀರು ಬಿಟ್ಟರು.

ಹಾಗೆಯೇ ಮಾಜಿ ಮಂತ್ರಿ ಕೊಂಡಜ್ಜಿ ಬಸಪ್ಪನವರ ಮಗ ಮೋಹನ್ ಕೊಂಡಜ್ಜಿ ಕ್ಷೇತ್ರದಲ್ಲಿ ಚಿರಪರಿಚಿತ. ಅವರಿಗೆ ಜಾತಿ ಮತ್ತು ಮಠ - ಇವೆರಡರ ಬೆಂಬಲ ಇದೆ. ಮೋಹನ್ ಕೊಂಡಜ್ಜಿ ಮನೆಗೆ ಕಷ್ಟದಲ್ಲಿರುವ ಕ್ಷೇತ್ರದ ಜನ ಬಂದರೆ ತಮ್ಮ ಕೈಲಾದ ಸಹಾಯ ಮಾಡುವ ಮಾನವೀಯ ವ್ಯಕ್ತಿತ್ವ ಉಳ್ಳವರು. ಆದರೆ ಕಾಂಚಾಣವೇ ಹರಿದಾಡುವ ಚುನಾವಣಾ ರಾಜಕಾರಣ ಎದುರಾದಾಗ ಅವರ ಆರ್ಥಿಕ ಮಿತಿಗಳು ಅವರನ್ನು ಹಿಂದಕ್ಕೆ ಜಗ್ಗಿ ನಿಲ್ಲಿಸುತ್ತವೆ. ಒಂದಷ್ಟು ದಿನ ಪಾರ್ಲಿಮೆಂಟ್

ಪೀತ ಪತ್ರಕರ್ತ ರುದ್ರಮುನಿಯ ಮೊಮ್ಮಗನ ಪಾಪಕೃತ್ಯ!



ದಾವಣಗೆರೆ ಪಟ್ಟಿಗೆ ಪೀತ ಪತ್ರಿಕೋದ್ಯಮದ ಪಿತಾಮಹ ಎಂದೇ ಕುಖ್ಯಾತಿ ಪಡೆದಿರುವ ನಾ.ಬಾ.ರುದ್ರಮುನಿಯ ಅಪ್ರಾಪ್ತ ವಯಸ್ಸಿನ ಮೊಮ್ಮಗ ಪೃಥ್ವಿ ಯುವತಿಯೊಬ್ಬಳ ಮೇಲೆ ರೇಪ್ ಅಂಡ್ ಮರ್ಡರ್ ಅಟೆಂಪ್ಟ್ ಮಾಡಿ ಈಗ ರಿಮಾಂಡ್ ಹೋಮ್ ಸೇರಿದ್ದಾನೆ.

ಪೃಥ್ವಿಯ ಅಮಾನವೀಯ ಕೃತ್ಯದ ಬಗ್ಗೆ ವಿವರಿಸುವ ಮುನ್ನ ಆತನ ತಾತ ರುದ್ರಮುನಿಯ ಪಾಪ ಪುರಾಣದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲೇ ಬೇಕು. ತನ್ನ ದಲಿತ ಜಾತಿಯನ್ನೇ ಟ್ರಂಪ್‌ಕಾರ್ಡ್ ಮಾಡಿಕೊಂಡಿದ್ದ ರುದ್ರಮುನಿ ದಾವಣಗೆರೆಯ ಶ್ರೀಮಂತರ, ಮೇಲ್ಜಾತಿಯವರ ಮತ್ತು ಅಧಿಕಾರಿಗಳ ವೈಯಕ್ತಿಕ ಸಮಸ್ಯೆಗಳನ್ನೇ ತನ್ನ ತಗಡು ಪತ್ರಿಕೆಯ ಉದ್ಧಾರಕ್ಕೆ ಬಳಸಿಕೊಂಡ ಆಸಾಮಿ.

ಒಂದು ದಶಕದ ಹಿಂದೆ ಅನಕ್ಷರಸ್ಥನಾದ ರುದ್ರಮುನಿ ಅದು ಹೇಗೋ ಸೋಫ಼ ರಿಪೇರಿ ಕಸುಬು ಕಲಿತು ಜೀವನ ನಿರ್ವಹಣೆ ಮಾಡುತ್ತಿದ್ದ. ಅದ್ಯಾರು ಇಂತಹವನ ಮೆದುಳಿಗೆ ಪತ್ರಿಕೆ ಮಾಡುವ ಐಡಿಯಾ ಕೊಟ್ಟರೋ ಭಗವಂತನೇ ಬಲ್ಲ. ಐಡಿಯಾ ಸಿಕ್ಕಿದ್ದೇ ತಡ ರುದ್ರಮುನಿ 'ಭುವನೇಶ್ವರಿ' ಎಂಬ ಪತ್ರಿಕೆಯನ್ನು ಪ್ರಾರಂಭಿಸಿದ. ತನ್ನ ಪತ್ರಿಕೆಯಲ್ಲಿ ದೇವಿ ಭುವನೇಶ್ವರಿಯೇ ಅಸಹ್ಯ ಪಟ್ಟುಕೊಳ್ಳುವಂತೆ ಜನರ ಖಾಸಗಿ ವಿಚಾರಗಳ ಬಗ್ಗೆ ಬರೆದು ಅವರ ಮಾನ ಹರಾಜು ಹಾಕುತ್ತಿದ್ದ.

ಮುಂದಿನ ಜನ್ಮ ಎಂಬುದು ಇದ್ದರೆ ಅದಕ್ಕೂ ಸಾಕಾಗುವಷ್ಟು ಪಾಪಗಳನ್ನು ಈ ರುದ್ರಮುನಿ ಈ ಬದುಕಿನಲ್ಲೇ ಮಾಡಿಮುಗಿಸಿದ್ದಾನೆ. ಈತನ ಪತ್ರಿಕಾ ಕಚೇರಿಯಲ್ಲಿ ಇವನ ತೆವಲಿಗೆ ಸಲುಗಿದ ಹೆಣ್ಣುಮಕ್ಕಳ ಸಂಖ್ಯೆ ಇಟ್ಟವರಿಲ್ಲ, ಒಂದು ಕಡೆ ಪತ್ರಿಕೆ, ಮತ್ತೊಂದು ಕಡೆ ಜಾತಿ ಪ್ರಮಾಣಪತ್ರವನ್ನು ಹಿಡಿದುಕೊಂಡೇ ಸುತ್ತಾಡುತ್ತಿದ್ದ ಈತನ ತಂಟೆಗೆ ಹೋಗಲು ಜನ ಹೆದರುತ್ತಿದ್ದರು.

ಇಂತಹ ಪಾಪಿ ರುದ್ರಮುನಿಯ ಅರ್ಧ ಡಜನ್ ಮಕ್ಕಳಲ್ಲಿ ಚಂದ್ರಶೇಖರ್ ಎಂಬಾತನೂ ಒಬ್ಬ. ಈ ಮಗನೂ ತಂದೆಗಿಂತ ಕಡಿಮೆ ಕುಳವೇನಲ್ಲ. ಎಸ್.ಬಿ.ಎಂ. ಬ್ಯಾಂಕ್‌ಗೆ ಸೀಜಿಂಗ್ ಏಜಂಟ್ ಆಗಿದ್ದ ಚಂದ್ರಶೇಖರ್ ಒಳ್ಳೆಯ ಹೆಸರನ್ನು ಗಿಟ್ಟಿಸಿರಲಿಲ್ಲ. ಆತನೂ ತನ್ನ ತಂದೆಯ 'ಭುವನೇಶ್ವರಿ' ಪತ್ರಿಕೆಯ ಹೆಸರು ಹೇಳಿಕೊಂಡು ಜನರನ್ನು ಪೀಡಿಸಿದವನೇ.


ಇಂತಹ ಚಂದ್ರಶೇಖರನ ಮಗ ಪೃಥ್ವಿ ಎಂಬುವವನೇ ಕಳೆದ ವಾರ ಯುವತಿಯೊಬ್ಬಳನ್ನು ರೇಪ್ ಮಾಡಿ, ಆನಂತರ ಅವಳನ್ನು ಕೊಲ್ಲಲೂ ಯತ್ನಿಸಿ ಸಿಕ್ಕಿಬಿದ್ದಿದ್ದಾನೆ. ಹದಿನೇಳು ವರ್ಷ ವಯಸ್ಸಿನ ಪೃಥ್ವಿ ತಲೆಗೆ ಓದು ಹತ್ತಲಿಲ್ಲ, ಹುಟ್ಟಾ ಪೋಲಿ. ಶೋಕಿಗೆ ಬೈಕ್ ಬೇರೆ ಇತ್ತು, ಇವನ ಮನೆ ಸರಸ್ವತೀ ಬಡಾವಣೆಯಲ್ಲಿದೆ. ಆದರೆ ಆ ಬಡಾವಣೆಯ ಜನರಿಗೆ ಪೃಥ್ವಿಯ ತಂದೆ ಮತ್ತು ತನ್ನ ಕೀರ್ತಿ ಗೊತ್ತಿದ್ದರಿಂದ ಯಾರೂ ಇವನ ಸಹವಾಸಕ್ಕೆ ಹೋಗುತ್ತಿರಲಿಲ್ಲ.

ಇಲ್ಲಿಯತನಕ ಪೃಥ್ವಿಯ ತಂದೆ ಮತ್ತು ತಾತ ಮಾಡಿದ ಯಾವ ಪಾಪಕ್ಕೂ ಪೊಲೀಸರು ಬೇಡಿ ತೊಡಿಸಲಾಗಿರಲಿಲ್ಲ, ಆದರೆ ಈಗ ಮೊಮ್ಮಗ ಆ 'ಕೀರ್ತಿ'ಗೆ ಪಾತ್ರನಾಗಿದ್ದಾನೆ.

ಹಲವು ತಿಂಗಳ ಹಿಂದೆ ಈ ಪೃಥ್ವಿ ವಿನಯ್ ಎಂಬ ತನ್ನ ಸ್ನೇಹಿತನ ಮೂಲಕ ಪಂಕಜಾ (ಹೆಸರನ್ನು ಬದಲಿಸಲಾಗಿದೆ) ಎಂಬ ಯುವತಿಯ ಪರಿಚಯ ಮಾಡಿಕೊಂಡಿದ್ದ. ಈ ವಿನಯ್ ಕೂಡ ಅಪ್ರಾಪ್ತ ವಯಸ್ಸಿನವನೇ. ಪಂಕಜಾ ಇವರಿಬ್ಬರಿಗಿಂತ ಐದಾರು ವರ್ಷ ಹಿರಿಯಳು.

ಕಳೆದ ಡಿಸೆಂಬರ್ ತಿಂಗಳ 21ರ ಸಂಜೆ ಏಳು ಗಂಟೆ ಪಂಕಜಾಳನ್ನು ಪುಸಲಾಯಿಸಿ, ಆಕೆಯನ್ನು ತನ್ನ ಬೈಕ್ ಮೇಲೆ ಕೂರಿಸಿಕೊಂಡು ಬಾಪೂಜಿ ಆಡಿಟೋರಿಯಂ ಅಂಗಳಕ್ಕೆ ಕರೆದುಕೊಂಡು ಹೋಗಿದ್ದಾನೆ. ಸಂಜೆ ಏಳು ಗಂಟೆ ಆಯಿತೆಂದರೆ ಈ ಆಡಿಟೋರಿಯಂ ಆವರಣ ಕತ್ತಲಲ್ಲಿ ಮುಳುಗಿಬಿಡುತ್ತದೆ. ಇದರ ಸುತ್ತ ಶಾಮನೂರರ ಶಿಕ್ಷಣ ಕೇಂದ್ರಗಳ ಬೃಹತ್ ಕಟ್ಟಡಗಳಿವೆ. ಒಂದೆಡೆ ಜೆಜೆಎಂ ಡೆಂಟಲ್ ಕಾಲೇಜ್ ಇದ್ದರೆ ಮತ್ತೊಂದೆಡೆ ಬಿ.ಆರ್.ಎಂ. ಇಂಜಿನಿಯರಿಂಗ್ ಕಾಲೇಜಿದೆ. ಹತ್ತಿರದಲ್ಲೇ ಜನಜಂಗುಳಿಯಿಂದ ತುಂಬಿತುಳುಕುವ ನಾಲ್ಕು ಸಾರ್ವಜನಿಕ ದಾರಿಗಳಿವೆ. ಆದರೆ ಆಡಿಟೋರಿಯಂ ಎಂಬ ಗರ್ಭದೊಳಗೆ ಅಮಾವಾಸ್ಯೆಯ ಕತ್ತಲು.

ಪಂಕಜಾಳನ್ನು ಆಡಿಟೋರಿಯಂನ ಸಂದಿಗೆ ಪೃಥ್ವಿ ಎಳೆದೊಯ್ದಿದ್ದಾನೆ. ಗಾಬರಿಗೊಂಡ ಪಂಕಜಾ ಚೀರಿಕೊಂಡರೂ ಯಾವ ನರಪಿಳ್ಳೆಗೂ ಕೇಳಿಸಿಲ್ಲ. ಪೃಥ್ವಿ ಪಶುವಿಗಿಂತ ಕಡೆಯಾಗಿ ಪಂಕಜಾಳನ್ನು ಎಳೆದಾಡಿದ್ದಾನೆ. ಆಕೆಯ ಮೇಲೆ ಅತ್ಯಾಚಾರವೆಸಗಿದ್ದಾನೆ. ಸಾಲದೆಂಬಂತೆ ತಾನು ಸೇದುತ್ತಿದ್ದ ಸಿಗರೇಟಿನ ತುದಿಯಿಂದ ಪಂಕಜಾಳ ತೊಡೆ ಸುಟ್ಟಿದ್ದಾನೆ. ಅವನ ವಿಕೃತ-ವಿಕಟವರ್ತನೆಗೆ ಕಂಗಾಲಾದ ಪಂಕಜಾ ಪ್ರಜ್ಞೆ ತಪ್ಪಿದ್ದಾಳೆ.



ಅಷ್ಟಕ್ಕೆ ಸುಮ್ಮನಾಗದ ಪೃಥ್ವಿ ಪಂಕಜಾಳನ್ನು ಜೀವಂತವಾಗಿ ಉಳಿಸಬಾರದೆಂದು ಅವಳನ್ನು ಕೊಲ್ಲಲು ಹತ್ತಿರದಲ್ಲೇ ಇದ್ದ ಕಲ್ಲನ್ನು ಎತ್ತಿ ಆಕೆಯ ತಲೆಗೆ ಹಾಕಿದ್ದಾನೆ. ಪಂಕಜಾಳ ಅದೃಷ್ಟ ಚೆನ್ನಾಗಿತ್ತು, ಆ ಏಟಿನಿಂದ ಆಕೆಯ ತಲೆಗೆ ಗಾಯವಾಯಿತೇ ಹೊರತು ಪ್ರಾಣ ಹೋಗಿಲ್ಲ.

ಪಂಕಜಾ ಸತ್ತಿದ್ದಾಳೆಂದು ಭಾವಿಸಿದ ಪೃಥ್ವಿ ಮುಂದೇನು ಮಾಡುವುದೆಂದು ಚರ್ಚಿಸಲು ತನ್ನ ಸ್ನೇಹಿತ ವಿನಯ್‌ಗೆ ಫೋನ್ ಮಾಡಿದ್ದಾನೆ. ವಿನಯ್ ಅಲ್ಲಿಗೆ ಬಂದಾಗಲೂ ಪಂಕಜಾ ಪ್ರಜ್ಞೆ ತಪ್ಪಿ ಬಿದ್ದಿದ್ದಳು. ಆಕೆ ಸತ್ತಿದ್ದಾಳೆಂದು ತಿಳಿದ ಇಬ್ಬರು ಯುವಕರು ಆಕೆಯನ್ನು ಅಲ್ಲೇ ಬಿಟ್ಟು ತಮ್ಮ ಮನೆಗಳನ್ನು ಸೇರಿದ್ದಾರೆ. ಸ್ವಲ್ಪ ಹೊತ್ತಿನ ನಂತರ ಎಚ್ಚರವಾದ ಪಂಕಜಾ ತಡವರಿಸುತ್ತಾ ತನ್ನ ಮನೆ ತಲುಪಿದ್ದಾಳೆ. ಪೃಥ್ವಿ ತನ್ನ ಮೇಲೆ ಮಾಡಿದ ದಾಳಿಯ ಬಗ್ಗೆ ಪಂಕಜಾ ತನ್ನ ತಂದೆಗೆ ವಿವರಿಸಿದ್ದಾಳೆ. ಅದನ್ನು ಕೇಳಿ ಆಘಾತಗೊಂಡ ಆಕೆಯ ತಂದೆ ಆಕೆಯನ್ನು ಆಸ್ಪತ್ರೆಗೆ ಸೇರಿಸಿ ಪೊಲೀಸರಿಗೂ ದೂರು ನೀಡಿದ್ದಾರೆ. ವೈದ್ಯಕೀಯ ಪರೀಕ್ಷೆಯಲ್ಲಿ ಅತ್ಯಾಚಾರ ನಡೆದಿರುವುದು ಸಾಬೀತಾಗಿದೆ. ಪೊಲೀಸರು ಪೃಥ್ವಿಯನ್ನು ಠಾಣೆಗೆ ಎಳೆದು ತಂದಿದ್ದಾರೆ. ಅವನ ಗೆಳೆಯ ವಿನಯ್‌ನನ್ನೂ ಪೊಲೀಸರು ಹಿಡಿದಿದ್ದಾರೆ. ಅವರಿಬ್ಬರೂ ಅಪ್ರಾಪ್ತರಾದ್ದರಿಂದ ಸದ್ಯ ಇಬ್ಬರನ್ನೂ ರಿಮ್ಯಾಂಡ್ ಹೋಮಿಗೆ ಕಳುಹಿಸಲಾಗಿದೆ.

ನಮ್ಮ ಕಾನೂನಿನಪ್ರಕಾರ ಅವರಿಬ್ಬರೂ ಬಾಲಾಪರಾಧಿಗಳು. ಆದ್ದರಿಂದ ದೆಹಲಿಯ 'ನಿರ್ಭಯ' ಪ್ರಕರಣದಲ್ಲಿ ಬಾಲಾಪರಾಧಿಗೆ ಲಘುವಾದ ಶಿಕ್ಷೆ ಜಾರಿಯಾದಂತೆ ಇವರಿಬ್ಬರಿಗೂ ಕಡಿಮೆ ಶಿಕ್ಷೆ ಸಿಗುವ ಸಾಧ್ಯತೆ ಇದೆ.

ಇಷ್ಟು ದಿನ ಪೃಥ್ವಿಯ ತಾತ ರುದ್ರಮುನಿ ಮಾಡಿದ ಪಾಪಗಳಿಗೆ ಶಿಕ್ಷೆ ಎಂಬುದೇ ಇಲ್ಲದಂತಾಗಿತ್ತು. ಈಗ ಆತನ ಕಿರಾತಕ ಮೊಮ್ಮಗನೂ ತಾನು ಎಸಗಿದ ಕೃತ್ಯಕ್ಕೆ ಸೂಕ್ತ ಶಿಕ್ಷೆಯಿಂದ ತಪ್ಪಿಸಿಕೊಳ್ಳುವ ಅಪಾಯ ಇದೆ. ಹಾಗಾದರೆ ನೊಂದ ಪಂಕಜಾಳಿಗೆ ನ್ಯಾಯ ಸಿಗುತ್ತದೆಯೇ?

■ ವರದಿಗಾರ

...ವಣೆಯಲ್ಲಿ ಮೋಹನ್ ಕೊಂಡಜ್ಜಿಯವರ ಹೆಸರು ...ದಾಡಿದರೂ ಅಡಿಕೆ ಧಣಿ ಸಿದ್ದೇಶ್ವರರೆದುರು ಯಾಕೆ ...ಎನ್ನುವಂತಾಗಿದೆ ಅವರ ಪರಿಸ್ಥಿತಿ.

ಮೋದಿ ಅಲೆಯಲ್ಲಿ ಸಿದ್ದೇಶ್ವರ

...ಹಾಲಿ ಸಂಸದ ಸಿದ್ದೇಶ್ವರರು ಕಳೆದ 2009ರ ...ರ್ಲಿಮೆಂಟ್ ಚುನಾವಣೆಯಲ್ಲೇ ಮಾಜಿ ಆಗುವ ...ಕವಿತ್ತು. ಆಗ ಅವರು ಶಾಮನೂರು ಮಲ್ಲಿಕಾರ್ಜುನರ ...ದ್ಧ ಕೇವಲ ಎರಡು ಸಾವಿರ ಚಿಲ್ಲರೆ ಮತಗಳ ...ರದಿಂದ ಗೆದ್ದು ಬಚಾವಾಗಿದ್ದರು.

...ಬರುವ ಚುನಾವಣೆಯಲ್ಲಿ ಸಿದ್ದೇಶ್ವರರು ತಮ್ಮ ...ನೆಯನ್ನೇ ತೆರೆದಿಟ್ಟು ಹೋರಾಡಿದರೂ ಗೆಲುವೆಂಬುದು ...ಸಾಧ್ಯ ಎಂಬಂತಹ ವಾತಾವರಣ ನಿರ್ಮಾಣವಾಗಿದೆ. ...ಕೆಂದರೆ ಈ ಸಾರಿ ಮಾಜಿ ಮಂತ್ರಿ ರವೀಂದ್ರನಾಥ, ...ಲುಕಾಚಾರ್ಯ ಮತ್ತು ಹರೀಶಗಳಂತಹ ಘಟಾನುಘಟಿ ...ಗಳೇ ಸಿದ್ದೇಶ್ವರರನ್ನು ಸೋಲಿಸುವ ತಯ್ಯಾರಿ ನಡೆಸಿದ್ದಾರೆ.

ಕಣಕ್ಕೆ ಮಲ್ಲಿಕಾರ್ಜುನ್

...ದಾವಣಗೆರೆ ಪಾರ್ಲಿಮೆಂಟ್ ಕ್ಷೇತ್ರದಲ್ಲಿ ಬಿಜೆಪಿ ...ರ್ಥಿ ಸಿದ್ದೇಶ್ವರರ ಎದುರು ಹಾಲಿ ಕಾಂಗ್ರೆಸ್ ಶಾಸಕ ...ತ್ತು ಮಾಜಿ ಮಂತ್ರಿ ಎಸ್.ಎಸ್.ಮಲ್ಲಿಕಾರ್ಜುನ್ ಅವರೇ ...ಟಿ ಎಂಬ ಮಾತಿದೆ.

2013ರ ವಿಧಾನ ಸಭೆ ಚುನಾವಣೆಯಲ್ಲಿ ಹರಿಹರ ...ವನ್ನು ಹೊರತುಪಡಿಸಿ ಉಳಿದ ಆರು ಕ್ಷೇತ್ರಗಳಲ್ಲಿ ...ಗ್ರೆಸ್ ಜಯಭೇರಿ ಬಾರಿಸುವಲ್ಲಿ ಮಲ್ಲಿಕಾರ್ಜುನರ ...ಕೀಯ ತಂತ್ರಗಾರಿಕೆಯೇ ಮುಖ್ಯ ಕಾರಣವಾಗಿತ್ತು. ...ೇ ಅಲ್ಲ, ದಾವಣಗೆರೆ ಮಹಾನಗರ ಪಾಲಿಕೆಯ ...ನಾವಣೆಯಲ್ಲೂ 41 ವಾರ್ಡುಗಳ ಪೈಕಿ ಬರೋಬ್ಬರಿ ... ವಾರ್ಡುಗಳಲ್ಲಿ ಬಿಜೆಪಿಯನ್ನು ಅಡ್ಡಡ್ಡ ಮಲಗಿಸಿ ...ಗ್ರೆಸ್ ಕಾರ್ಪೊರೇಟರುಗಳನ್ನು ಗೆಲ್ಲಿಸಿದ್ದೂ ಇದೇ ...ಲ್ಲಿಕಾರ್ಜುನ್. ಸದ್ಯ ಮಲ್ಲಿಕಾರ್ಜುನ್ ಶಾಸಕರಾಗಿದ್ದು ...ರ ತಂದೆ ಶಾಮನೂರು ಶಿವಶಂಕರಪ್ಪನವರು ...ತ್ರಿಯಾಗಿರುವುದೂ ಪಾರ್ಲಿಮೆಂಟ್ ಚುನಾವಣೆಯಲ್ಲಿ ...ಗ್ರೆಸ್‌ಗೆ ನೆರವಾಗಲಿದೆ.

ಯಡ್ಡಿಯ ಪುನರ್ ಆಗಮನ

ಕಳೆದ ಡಿಸೆಂಬರ್ ತಿಂಗಳಲ್ಲಿ ಯಡಿಯೂರಪ್ಪ ತಾನು ...ಂಭಿಸಿದ್ದ ಕರ್ನಾಟಕ ಜನತಾ ಪಕ್ಷವನ್ನು ಸದ್ಯದಲ್ಲೇ ...ರ್ಜಿಸಿ ಬಿಜೆಪಿಯನ್ನು ಸೇರಿಕೊಂಡರೆ ದಾವಣಗೆರೆ ಮತ ...ದಲ್ಲಿನ ಪ್ರಸ್ತುತ ರಾಜಕೀಯ ಲೆಕ್ಕಾಚಾರಗಳು ಒಂದಿಷ್ಟು ...ಾಗುವುದು ಗ್ಯಾರಂಟಿ. ಯಾಕೆಂದರೆ ಈಗ ಈ ಕ್ಷೇತ್ರದಲ್ಲಿ ...ಡ್ಡಿಯ ರಾಜಕೀಯ ಪ್ರಭಾವ ನೆಲ ಕಚ್ಚಿದ್ದರೂ ಅತ ... ಪಡೆಯನ್ನು ಮತ್ತೆ ಸೇರಿಕೊಂಡರೆ ಅದು ನೆಲಬಿಟ್ಟು ...ವುದನ್ನು ಅಲ್ಲಗಳೆಯುವಂತಿಲ್ಲ. ಜೊತೆಗೆ ಇಲ್ಲಿ ನರೇಂದ್ರ ...ದಿಯ ಮೋಡಿ ಕೆಲಸ ಮಾಡದಿದ್ದರೂ ಬಿಜೆಪಿಗೆ ...ೇ ಆದ ಮತಗಳಿವೆ.


ಮಲ್ಲಿಕಾರ್ಜುನ್ ಅವರಿಗೆ ಸಿದ್ದೇಶ್ವರರನ್ನು ಎದುರಿಸುವ ... ಶಕ್ತಿ ಇದ್ದು ಜೊತೆಗೆ ಅವರೂ ಕೂಡ ಸಾಧು ...ಾಯತ ಸಮುದಾಯಕ್ಕೆ ಸೇರಿರುವುದರಿಂದ ಅವರೇ ... ಕಾಂಗ್ರೆಸ್ ಅಭ್ಯರ್ಥಿ ಎಂದು ಹೈಕಮಾಂಡ್ ...ಲಿಸಿದೆ ಎಂಬ ಮಾತುಗಳು ಕೇಳಿಬರುತ್ತಿವೆ.

ಈ ಹಿನ್ನೆಲೆಯಲ್ಲಿ ಮುಂದಿನ ಚುನಾವಣೆಯಲ್ಲಿ ...ಣಗೆರೆಯಲ್ಲಿ ಮೋದಿಯ ಮೋಡಿ ಮಕಾಡೆ ...ಗುವುದೇ? ಕಾದು ನೋಡಬೇಕಷ್ಟೇ.

■ ಟಿ.ಎನ್.ಷಣ್ಮುಖ


ದಾವಣಗೆರೆ ವಿವಿಗೆ ಕಲಿವಾಳ ವಕ್ಕರಿಸಿದ್ದು ಹೇಗೆ?


ಸಾಹಿತಿ ಯು.ಆರ್.ಅನಂತಮೂರ್ತಿ ಕೋಪಗೊಂಡಿದ್ದಾರೆ. ಅರ್ಹರಿಗೆ ದಾವಣಗೆರೆ ವಿಶ್ವವಿದ್ಯಾಲಯದ ಉಪಕುಲಪತಿ ಸ್ಥಾನವನ್ನು ಕೊಡುವ ಬದಲು ಬಿ.ಬಿ.ಕಲಿವಾಳ ಎಂಬಾತನನ್ನು ತಂದು ಕೂರಿಸಿರುವುದಕ್ಕೆ ಅವರಿಗೆ ಇನ್ನಿಲ್ಲದಷ್ಟು ಬೇಸರವಾಗಿದೆ.




ಕಲಿವಾಳರು ದಾವಣಗೆರೆ ಉಪಕುಲಪತಿ ಸ್ಥಾನದಲ್ಲಿ ವಕ್ಕರಿಸಿದ್ದಾದರೂ ಹೇಗೆ ಎಂದು ನೋಡಿದರೆ ಅಚ್ಚರಿಯಾಗುತ್ತದೆ. ಇದರ ಹಿಂದಿನ ಮರ್ಮ ಒಂದು ಕೋಟಿಯಿಂದ ನಾಲ್ಕು ಕೋಟಿ ಎಂಬ ಮಾತು ಕೇಳಿಬರುತ್ತಿದೆ.

2008ರಲ್ಲಿ ಪ್ರಾರಂಭವಾದ ದಾವಣಗೆರೆ ವಿಶ್ವವಿದ್ಯಾಲಯ ಹುಟ್ಟಿದಂದಿನಿಂದ ಆರಕ್ಕೇರಲಿಲ್ಲ, ಮೂರಕ್ಕಿಳಿಯಲಿಲ್ಲ ಎಂಬ ಸ್ಥಿತಿಯಲ್ಲೇ ತೆವಳುತ್ತಾ ಬಂದಿದೆ. ಮೊದಲು ಕುಲಪತಿಯಾಗಿ ನೇಮಕಗೊಂಡ ಮೈಸೂರು









ವಿವಿಯ ಇಂದುಮತಿ ವಿವಿಧ ಅಧಿಕಾರಿಗಳ ಜೊತೆ ಜಗಳದಲ್ಲಿ ಹೆಚ್ಚು ಸಮಯ ಕಳೆದರೇ ಹೊರತು ವಿವಿಯನ್ನು ಉದ್ಧಾರವನ್ನಂತೂ ಮಾಡಲಿಲ್ಲ. ಇಂತಹ ವಿವಿಯ ಉಪಕುಲಪತಿ ಸ್ಥಾನ ತೆರವಾದಾಗ ಸಿದ್ದರಾಮಯ್ಯನವರ ಸರ್ಕಾರ ಓರ್ವ ಅರ್ಹ ವ್ಯಕ್ತಿಯನ್ನು ಉಪಕುಲಪತಿಯಾಗಿ ನೇಮಿಸಿ ಅದಕ್ಕೊಂದು ದಿಕ್ಕು ಕೊಡುತ್ತಾರೆಂದೇ ಎಲ್ಲರೂ ಭಾವಿಸಿದ್ದರು. ಅದಕ್ಕೆ ತಕ್ಕಂತೆ ಸಿದ್ದರಾಮಯ್ಯನವರು ತಮ್ಮ ಮಿತ್ರರಾದ ಅನಂತಮೂರ್ತಿಯವರ ನೇತೃತ್ವದಲ್ಲಿ ಸೂಕ್ತ ವ್ಯಕ್ತಿಯ ಶೋಧನೆಗೆ ಸಮಿತಿಯನ್ನು ನೇಮಿಸಿದರು.


ನಿಯಮದಂತೆ ಸಮಿತಿಯಲ್ಲಿ ರಾಜ್ಯಪಾಲರ ನಾಮಿನಿಯಾಗಿ ಎಸ್.ಎಸ್.ರಾಮೇಗೌಡ, ಹೈದರಾಬಾದಿನ ಮೌಲಾನಾ ಆಜಾದ್, ಉರ್ದು ವಿವಿಯ ಪ್ರೊ. ಮಹಮ್ಮದ್ ಮಿಯಾನ್ ಮತ್ತು ಯುಜಿಸಿಯ ಮಾಜಿ ಅಧ್ಯಕ್ಷ ಪ್ರೊ. ಸುಖದೇವ್ ತೋರಟ್ ಸದಸ್ಯರಾದರು. ಉಪಕುಲಪತಿ ಸ್ಥಾನಕ್ಕೆ ಬಂದಿದ್ದ ನೂರಕ್ಕೂ ಹೆಚ್ಚಿನ ಅರ್ಜಿಗಳನ್ನು ಪರಿಶೀಲಿಸಿದ ಸಮಿತಿ ಕೊನೆಗೆ 16 ಅಭ್ಯರ್ಥಿಗಳನ್ನು ಮೌಖಿಕ ಸಂದರ್ಶನಕ್ಕೆ ಆಹ್ವಾನಿಸಿತ್ತು.

ಸಂದರ್ಶನಗಳ ನಂತರ ಸಮಿತಿಯ ಮುಂದೆ ನಾಲ್ಕು ಹೆಸರುಗಳು ಉಳಿದವು. ಅವುಗಳೆಂದರೆ ಬೆಂಗಳೂರು ವಿವಿಯ ಕನ್ನಡ ವಿಭಾಗದ ಬಸವರಾಜ್ ಕಲ್ಲುಡಿ, ಅದೇ ವಿವಿಯ ರಸಾಯನ ವಿಜ್ಞಾನ ವಿಭಾಗದ ಗೋಮತಿ ದೇವಿ, ವಾಣಿಜ್ಯ ವಿಭಾಗದ ಪ್ರೊ. ಈರೇಶಿ ಮತ್ತು ಪ್ರೊ.ಬಿ.ಬಿ.ಕಲಿವಾಳ. ಕಲ್ಲುಡಿ ಮತ್ತು ಕಲಿವಾಳರು ಲಿಂಗಾಯತ ಸಮುದಾಯಕ್ಕೆ ಸೇರಿದ್ದರೆ, ಗೋಮತಿದೇವಿ ಪರಿಶಿಷ್ಟ ಪಂಗಡಕ್ಕೂ, ಈರೇಶಿ ಅವರು ಪರಿಶಿಷ್ಟ ಜಾತಿಗೂ ಸೇರಿದವರಾಗಿದ್ದಾರೆ.

ತಕರಾರು ಶುರುವಾಗಿದ್ದೇ ಅಲ್ಲಿಂದ. ಅನಂತಮೂರ್ತಿಯವರನ್ನು ಹೊರತು ಪಡಿಸಿ ಉಳಿದ ಮೂವರೂ ಪೂರ್ವ ನಿರ್ಧಾರದಂತೆ ಕಲಿವಾಳ ಅವರ ಪರ ವಹಿಸುತ್ತಿರುವಂತಹ







ಅಭಿಪ್ರಾಯಗಳು ಆಗ ವ್ಯಕ್ತವಾಗಲಾರಂಭಿಸಿದವು. ಅದಕ್ಕೆ ಜಾತಿರಾಜಕಾರಣ ಮತ್ತು ಝಣ ಝಣ ಕಾಂಚಾಣವೂ ಕಾರಣವಿದ್ದಿರಬಹುದು ಎಂಬ ಗುಮಾನಿ ಶುರುವಾಯಿತು.

ಈ ನಾಲ್ವರ ಮಧ್ಯೆ ಯಾರ ಮೂವರ ಹೆಸರನ್ನು ಅಂತಿಮ ಮಾಡಬೇಕೆಂಬ ಕುರಿತು ಶೋಧನಾ ಸಮಿತಿಯ ಸದಸ್ಯರ ನಡುವೆ ಚರ್ಚೆ ನಡೆಯಿತು. ಆಗ ಇತರೆ ಸದಸ್ಯರು "ಬೇಕಿದ್ದರೆ ಗೋಮತಿದೇವಿಯ ಹೆಸರನ್ನು ಕೈಬಿಟ್ಟು ಬಸವರಾಜ್ ಕಲ್ಲುಡಿಯ ಹೆಸರನ್ನು ಇಟ್ಟುಕೊಳ್ಳೋಣ" ಎಂದಿದ್ದಾರೆ. ಅದಕ್ಕೆ ಅನಂತಮೂರ್ತಿಯವರು "ಕಲ್ಲುಡಿ ನನಗೆ ತುಂಬಾ ಚೆನ್ನಾಗಿ ಗೊತ್ತು. ಆತನೂ ಅರ್ಹನೇ. ಆದರೂ ಆತನ ಹೆಸರನ್ನು ಕೈಬಿಡೋಣ. ಆದರೆ ಎಲ್ಲ ರೀತಿಯಲ್ಲೂ ಅರ್ಹರಾದ ಗೋಮತಿದೇವಿಯವರ ಹೆಸರನ್ನು ಉಳಿಸಿಕೊಳ್ಳೋಣ. ಆಕೆಗೆ ಈ ಹುದ್ದೆ ಕೊಟ್ಟರೆ ಸೂಕ್ತ ವ್ಯಕ್ತಿಗೆ ಕೊಟ್ಟಂತಾಗುತ್ತದೆ ಮತ್ತು ಸಾಮಾಜಿಕ ನ್ಯಾಯ ಕೂಡ ಒದಗಿಸಿದಂತಾಗುತ್ತದೆ" ಎಂದಿದ್ದಾರೆ.

ಅನಂತಮೂರ್ತಿಯವರು ಹಾಗಂದಿದ್ದೇ ತಡ, ಇತರರಿಗೆ ಕೈಜಾರಲಿದ್ದ ಚಪಾತಿ ತುಪ್ಪಕ್ಕೆ ಬಿದ್ದಂತಾಗಿರಬೇಕು. ಯಾಕೆಂದರೆ ಲಿಂಗಾಯತ ಸಮುದಾಯದವರೇ ಈ ಹುದ್ದೆಗೆ ಅಂತಿಮವಾಗಿ ನೇಮಕಗೊಳ್ಳಲಿದ್ದಾರೆ ಎಂಬ ಮಾತು ಅಪ್ಪೋತ್ತಿಗೆ ವಿಧಾನಸೌಧದ ಪಡಸಾಲೆಯಲ್ಲಿ ಕೇಳಿಬರುತ್ತಿತ್ತು. ಆಗಲೂ ಅನಂತಮೂರ್ತಿಯವರು ಗೋಮತಿದೇವಿಯವರ ಹೆಸರನ್ನು ಮೊದಲು ಸೂಚಿಸಿ, ಎರಡನೆ ಆಯ್ಕೆಯಾಗಿ ಈರೇಶಿ ಅವರನ್ನು ಪಟ್ಟಿ ಮಾಡಿ, ಮೂರನೆ ವ್ಯಕ್ತಿಯಾಗಿ ಕಲಿವಾಳ ಅವರ ಹೆಸರನ್ನು ಸೇರಿಸಲು ಒಪ್ಪಿದರು. ಅಷ್ಟೇ ಅಲ್ಲ ತಮ್ಮ ನಿಚ್ಚಳ ಆಯ್ಕೆ ಗೋಮತಿದೇವಿ ಎಂಬುದನ್ನೂ ಅನಂತಮೂರ್ತಿಯವರು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೂ ಫೋನ್ ಮೂಲಕ ತಿಳಿಸಿದರು.

ತಾನು ನೇತೃತ್ವ ಹೊಂದಿದ್ದ ಸಮಿತಿಯ ಮೊದಲನೆ ಆಯ್ಕೆಯೇ ಸರ್ಕಾರದ ಮತ್ತು ರಾಜ್ಯಪಾಲರ ಆಯ್ಕೆ ಆಗುತ್ತದೆಂದೇ ಅನಂತಮೂರ್ತಿಯವರು ನಂಬಿದ್ದರು. ಸ್ವತಃ ಸಿದ್ದರಾಮಯ್ಯನವರೂ ಗೋಮತಿದೇವಿಯವರನ್ನು ಆಯ್ಕೆ ಮಾಡಬಹುದೆಂದು ರಾಜ್ಯಪಾಲ ಭಾರದ್ವಾಜ್ ಅವರಿಗೂ ಸೂಚಿಸಿದ್ದಾರೆ. ಆದರೆ ಅನಂತಮೂರ್ತಿ ಮತ್ತು ಸಿದ್ದರಾಮಯ್ಯನವರಿಗೆ ಒಂದು ದೊಡ್ಡ ಶಾಕ್ ಕಾದಿತ್ತು. ಯಾಕೆಂದರೆ ಕೊನೆಗೂ ರಾಜ್ಯಪಾಲರು ತಮ್ಮ ಅಂಕಿತ ಹಾಕಿದ್ದು ಕಲಿವಾಳ ಅವರ ಹೆಸರಿಗೆ!

ಕೆಲವರ ಪ್ರಕಾರ ಸಿದ್ದರಾಮಯ್ಯನವರ ಸರ್ಕಾರ ಅಧಿಕಾರಕ್ಕೆ ಬಂದನಂತರ ತೆರವಾದ ತುಮಕೂರು ವಿವಿಯ ಉಪಕುಲಪತಿ ಸ್ಥಾನಕ್ಕೂ ಇದೇ ಕಲಿವಾಳ 'ನಾಲ್ಕು ಕೋಟಿ'ಯ ಲಾಬಿ ಮಾಡಿದ್ದರು. ಆದರೆ ಆ ಹುದ್ದೆಗೆ ರಾಜಾಸಾಬ್ ಎಂಬುವವರನ್ನು ನೇಮಿಸಿದಾಗ ಅದು ಅಲ್ಪಸಂಖ್ಯಾತ ಮುಸ್ಲಿಮ್ ಸಮುದಾಯದ ಪಾಲಾಗಿತ್ತು.

ಆದರೂ ಪಟ್ಟು ಬಿಡದ ತ್ರಿವಿಕ್ರಮನಂತೆ ಈ ಬಾರಿಯೂ ಕಲಿವಾಳ ಮರಳಿ ಯತ್ನವ ಮಾಡಿದ್ದರು. ಜೊತೆಗೆ ದಾವಣಗೆರೆ ವಿವಿಯ ಉಪಕುಲಪತಿ ಹುದ್ದೆಯನ್ನು ಲಿಂಗಾಯತ ವ್ಯಕ್ತಿಗೆ ನೀಡಿದರೆ ಸಿದ್ದು ಸರ್ಕಾರ ಸದಾ 'ಅಹಿಂದ' ಪರವಲ್ಲ ಎಂಬ ಸಂದೇಶವೂ ರವಾನೆಯಾಗುತ್ತದೆ ಎಂಬ ಅಭಿಪ್ರಾಯವೂ ಕೇಳಿಬಂದಿತ್ತು.

ನಾಲ್ಕು ಕೋಟಿಯ ಪ್ರಭಾವವೋ, ಲಿಂಗಾಯತ ಲಾಬಿಯ ಒತ್ತಡವೋ ಗೊತ್ತಿಲ್ಲ, ಆದರೆ ದಾವಣಗೆರೆ ವಿವಿಯ ಉಪಕುಲಪತಿ ಸ್ಥಾನವು ಕಲಿವಾಳ ಎಂಬ ಲಿಂಗವಂತನಿಗೆ ದಕ್ಕಿದೆ. ಅಲ್ಲಿಗೆ ಗೋಮತಿದೇವಿ ಎಂಬ ಪರಿಶಿಷ್ಟ ಪಂಗಡದ ಮಹಿಳೆಗೂ, ಈರೇಶಿ ಎಂಬ ದಲಿತ ಸಮುದಾಯದ ಅರ್ಹರಿಗೂ ಉಪಕುಲಪತಿ ಸ್ಥಾನ ಕೈತಪ್ಪಿದೆ.

ತಮ್ಮೆಲ್ಲ ಶ್ರಮ ಮತ್ತು ಸಾಮಾಜಿಕ ಕಾಳಜಿ ನೀರುಪಾಲಾಗಿದ್ದರಿಂದ ಅನಂತಮೂರ್ತಿಯವರಿಗೆ ಕೋಪ ಬರದೆ ಇನ್ನೇನಾಗುತ್ತೆ?

ಅನಂತಮೂರ್ತಿಯವರ ಕೋಪ ಮತ್ತು ಕಲಿವಾಳರ ಸಂಭ್ರಮದ ನಡುವೆ ಸಿದ್ದು ಮೌನಕ್ಕೆ ಶರಣಾಗಿದ್ದಾರೆ.

■ ಬಿ. ನಾರಾಯಣ್

...ಫಾರೂಕ್ ಶೇಕ್ ಎಂಬ ನಟನ ಇನ್ನೊಂದು ಮುಖ

...ತ್ತೀಚೆಗೆ ತೀರಿಕೊಂಡ ಫಾರೂಕ್ ... ಪ್ರತಿಭಾವಂತ ನಟ ಆಗಿದ್ದರು ...ಎಂದು ಎಲ್ಲರಿಗೂ ಗೊತ್ತು, ಆದರೆ ...ನವರಿಗೆ ಗೊತ್ತಿಲ್ಲದ ವಿಚಾರ ...ೂಕ್ ಎಂತಹ ಮಾನವೀಯ ...ಾಗಿದ್ದರು ಎಂಬುದು! ಅವರ ... ತೋರುವ ಒಂದು ಉದಾಹರಣೆ ... ನೋಡಿ.


ಫಾರೂಕ್

...ದು ವರ್ಷಗಳ ಹಿಂದೆ ...ೋತ್ಪಾದಕರು ಮುಂಬೈ ಮೇಲೆ ... ಮಾಡಿದಾಗ ತಾಜ್ ...ಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದ ...ಜನ್ ಕಾಂಬ್ಳೆ ಎಂಬುವವರು ...ಗಿದ್ದರು. ರಾಜನ್ ಅವರು ತಾಜ್ ಹೋಟೆಲ್‌ಗೆ ...ದ್ದ ಜನರನ್ನು ರಕ್ಷಿಸುತ್ತಿರುವಾಗಲೇ ಭಯೋತ್ಪಾದಕರು ...ನ್ನು ಕೊಂದು ಹಾಕಿದ್ದರು. ರಾಜನ್ ಅವರ ತ್ಯಾಗವನ್ನು ... ಮತ್ತು ಅವರ ಸಾವಿನಿಂದ ದಿಕ್ಕು ಇಲ್ಲದಂತಾಗಿದ್ದ ... ಪತ್ನಿ ಶ್ರುತಿ ಮತ್ತು ಚಿಕ್ಕ ಮಕ್ಕಳಾದ ರೋಹಮ್ ಮತ್ತು ಅಥರ್ವ ಅವರ ಬಗ್ಗೆ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಒಂದು ವರದಿ ಪ್ರಕಟವಾಗಿತ್ತು.

ಆ ವರದಿಯನ್ನು ಓದಿದ್ದೇ ತಡ ಫಾರೂಕ್ ಅವರು ಆ ಪತ್ರಿಕೆಯ ಸಂಪಾದಕರಿಗೆ ಫೋನ್ ಮಾಡಿ, ರಾಜನ್‌ರ ಇಬ್ಬರು ಪುತ್ರರ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ತಾವು ಹೊರುವುದಾಗಿ ಹೇಳಿದರು. ಆದರೆ ಅಂತಹ ನೆರವು ಕೊಡುವ ಮುನ್ನ ಅವರು ಒಂದು ಷರತ್ತನ್ನು ಹಾಕಿದರು. ಅದೇನೆಂದರೆ ಯಾವುದೇ ಕಾರಣಕ್ಕೂ ತಾನು ಯಾರೆಂದು ರಾಜನ್ ಅವರ ಸಂಸಾರದವರಿಗೆ ತಿಳಿಸಕೂಡದು ಎಂಬುದಾಗಿತ್ತು.

ಅದಕ್ಕೆ ಎಕ್ಸ್‌ಪ್ರೆಸ್ ಸಂಪಾದಕರು ಒಪ್ಪಿಕೊಂಡರು. ಅದರಂತೆ ಪ್ರತಿ ಶೈಕ್ಷಣಿಕ ವರ್ಷದ ಆರಂಭದಲ್ಲಿ ಸಂಪಾದಕರು ಫಾರೂಕ್ ಅವರಿಗೆ ಫೋನ್ ಮಾಡಿ ಆ ವರ್ಷ ರಾಜನ್ ಪುತ್ರರ ಶಾಲಾಶುಲ್ಕದ ಲೆಕ್ಕ ಹೇಳುತ್ತಿದ್ದರು. ಒಮ್ಮೆಯೂ ಮರುಮಾತಾಡದೆ ಫಾರುಕ್ ಅಷ್ಟು ಹಣವನ್ನು ಕಳುಹಿಸುತ್ತಿದ್ದರು. ರಾಜನ್ ಅವರ ಪತ್ನಿಗೆ ಪ್ರತಿ ವರ್ಷ ಯಾರೋ 'ಶೇಕ್ ಸಾಹೇಬ್' ಕಳುಹಿಸುತ್ತಿದ್ದ ಹಣವು ಕೈಸೇರುತ್ತಿತ್ತೇ ಹೊರತು ಆತ ಯಾರು ಎಂಬುದು ಗೊತ್ತಿರಲಿಲ್ಲ.


ಶ್ರುತಿ ಮತ್ತು ಮಕ್ಕಳಾದ ರೋಹಮ್-ಅಥರ್ವ


ಈಗ ಆ 'ಶೇಕ್ ಸಾಹೇಬ್' ಅವರೇ ತಮ್ಮ 65ನೇ ವಯಸ್ಸಿನಲ್ಲಿ ತೀರಿಕೊಂಡಿದ್ದಾರೆ. ಅವರು ಇನ್ನಿಲ್ಲವಾದ ನಂತರವೇ ಪ್ರತಿ ವರ್ಷ ತಮಗೆ ನೆರವು ನೀಡುತ್ತಿದ್ದದ್ದು ಖ್ಯಾತ ನಟ ಫಾರೂಕ್ ಶೇಕ್ ಎಂದು ರಾಜನ್ ಕುಟುಂಬದವರಿಗೆ ಗೊತ್ತಾಗಿದೆ.

"ನಾವು ಕಂಗಾಲಾಗಿದ್ದಾಗ, ನಮ್ಮ ಪರಿಚಿತರೇ ನಮ್ಮ ನೆರವಿಗೆ ಬಾರದಿದ್ದಾಗ ನಮ್ಮ ಪರಿಚಯವೇ ಇಲ್ಲದಿದ್ದ ಫಾರೂಕ್ ಶೇಕ್ ನಮ್ಮ ನೆರವಿಗೆ ಬಂದಿದ್ದರು. ನನ್ನ ಪುತ್ರರಿಗೆ ಆಶ್ರಯ ಒದಗಿಸಿದ್ದರು. ಪ್ರತಿಫಲವಾಗಿ ನಮ್ಮಿಂದ ಅವರು ಏನನ್ನೂ ನಿರೀಕ್ಷಿಸಲಿಲ್ಲ, ಧನ್ಯವಾದವನ್ನು ಕೂಡ. ಅಂತಹ ಪುಣ್ಯಾತ್ಮನಿಗೆ ವೈಯಕ್ತಿಕವಾಗಿ ಥ್ಯಾಂಕ್ ಯು ಕೂಡ ಹೇಳುವ ಅವಕಾಶ ನನಗೆ ಸಿಗದಿದ್ದಕ್ಕೆ ನನಗೆ ತುಂಬಾ ಬೇಸರವಾಗಿದೆ" ಎಂದು ಮೊನ್ನೆ ರಾಜನ್ ಅವರ ಪತ್ನಿ ಶ್ರುತಿ ಹೇಳಿದ್ದಾರೆ.

ತೆರೆಯ ಮೇಲೆ ಮಾತ್ರ ದಾನಶೂರ ಕರ್ಣರಂತೆ ನಟಿಸುವ ಇತರೆ ನಟರು ಫಾರೂಕ್ ಶೇಕ್ ಅವರಿಂದ ಒಂದಿಷ್ಟು ನಟನೆ ಮಾತ್ರವಲ್ಲ, ಮಾನವೀಯತೆಯನ್ನೂ ಕಲಿತರೆ ಎಷ್ಟು ಚೆನ್ನಾಗಿರುತ್ತದಲ್ಲವೇ? ■


ಅಮೆರಿಕದ ದುಷ್ಟತನ ಭಾರತದ ನೀಚತನ





ದೇವಯಾನಿ ಖೋಬ್ರಗಡೆ ವಿವಾದ ಇಲ್ಲಿಗೆ ಮೂರು ವಾರಗಳಿಂದಲೂ ನಿತ್ಯವೂ ಮಾಧ್ಯಮಗಳಲ್ಲಿ ಜಾಗ ಪಡೆದುಕೊಂಡಿದೆ. ದೇವಯಾನಿಯನ್ನು ಬಂಧಿಸಿ ಬಟ್ಟೆಬಿಚ್ಚಿಸಿ ತಪಾಸಣೆ ಮಾಡಿ ಅವಮಾನ ಮಾಡಿದ ಅಮೆರಿಕದಂಥ ಸೂಪರ್ ಪವರ್ ವಿರುದ್ಧ ಭಾರತ ಸರ್ಕಾರದ ಸ್ವಾಭಿಮಾನ ಕೆರಳಿಬಿಟ್ಟಿದೆ. ಹೀಗೆ ನಿತ್ಯವೂ ಹೇಳಿಕೆಗಳ ಸರಮಾಲೆ ಪುಂಖಾನುಪುಂಖವಾಗಿ ಹೊರಬರುತ್ತಿದೆ.

ಅಸಲಿಗೆ ಈ ವಿವಾದ ಶುರುವಾಗಿದ್ದು ಹೇಗೆ?



ಡಿಸೆಂಬರ್ 12ರಂದು ಬೆಳಗ್ಗೆ ನ್ಯೂಯಾರ್ಕ್‌ನ ತನ್ನ ನಿವಾಸದಿಂದ ತನ್ನ ಮಗಳನ್ನು ಶಾಲೆಗೆ ಬಿಟ್ಟುಬರಲು ಹೋಗಿದ್ದ ದೇವಯಾನಿಯನ್ನು ಅಮೆರಿಕ ಪೊಲೀಸರು ಸುತ್ತುವರೆದು ಬಂಧಿಸಿದರು. ಕೈಗೆ ಕೋಳ ತೊಡಿಸಿದರು. ತಪಾಸಣೆಯ ಹೆಸರಿನಲ್ಲಿ ಬಟ್ಟೆ ಬಿಚ್ಚಿಸಿ ಅವಮಾನ ಮಾಡಿದರು. ನಂತರ ಆಕೆಯನ್ನು ಮಾದಕ ದ್ರವ್ಯ ವ್ಯಸನಿಗಳನ್ನು ಕೂಡಿಟ್ಟಿದ್ದ ಕೋಣೆಯಲ್ಲಿ ಕೂಡಿಹಾಕಿದರು.

ಅಮೆರಿಕ ಪೊಲೀಸರ ಆರೋಪವೇನೆಂದರೆ ಈ ಭಾರತದ ರಾಯಭಾರಿಣಿ ತನ್ನ ಮನೆಗೆಲಸದಾಕೆ ಸಂಗೀತಳ ಪಾಸ್‌ಪೋರ್ಟ್ ದಾಖಲಾತಿಗಳಲ್ಲಿ ಕೆಲವು ಸುಳ್ಳು ಮಾಹಿತಿ ನೀಡಿದ್ದಾಳೆ ಹಾಗೂ ಮನೆಗೆಲಸದಾಕೆಗೆ ಅತ್ಯಂತ ಕಡಿಮೆ ಸಂಬಳ ನೀಡಿ ಅಮೆರಿಕದ ಕನಿಷ್ಟ ವೇತನ ಕಾನೂನನ್ನು ಉಲ್ಲಂಘಿಸಿದ್ದಾಳೆ ಎಂಬುದು.

ಈ ಸುದ್ದಿ ತಿಳಿದ ಭಾರತ ರಾಯಭಾರ ಕಚೇರಿಯ ಸಿಬ್ಬಂದಿ ದೇವಯಾನಿಯನ್ನು ಬಿಡಿಸಲು ಏನೆಲ್ಲ ಪ್ರಯತ್ನ ಮಾಡಿದರೂ ಅಲ್ಲಿನ ಪೊಲೀಸರು ಜಪ್ಪೆನ್ನಲಿಲ್ಲ. ನಂತರ ವಿಧಿಯಿಲ್ಲದೆ ದೆಹಲಿಯಿಂದ ಭಾರತ ಸರ್ಕಾರದ ಪ್ರತಿನಿಧಿಗಳೇ ಕಣಕ್ಕಿಳಿಯಬೇಕಾಯ್ತು. ಭಾರತದ ವಿದೇಶಾಂಗ ಸಚಿವರೇ ಖುದ್ದಾಗಿ ದೇವಯಾನಿ ಬಿಡುಗಡೆ ಕಾರ್ಯಾಚರಣೆಗಿಳಿದರೂ ಪ್ರಯೋಜನವಾಗಲಿಲ್ಲ. ದೇವಯಾನಿಯ ಬಿಡುಗಡೆಗೆ 2,50,000 ಡಾಲರ್ ಮೊತ್ತದ ಬಾಂಡ್‌ನ ಜಾಮೀನು ಪಡೆಯುವ ನಿರ್ಬಂಧ ವಿಧಿಸಲಾಯ್ತು. ಭಾರತ ಸರ್ಕಾರವೇ ಅಷ್ಟು ಮೊತ್ತದ ಬಾಂಡ್‌ನ ಭರವಸೆ ನೀಡಿದ ನಂತರವೇ ಜಾಮೀನು ಮಂಜೂರಾಗಿದ್ದು!

ಇಷ್ಟಕ್ಕೂ ಈ ದೇವಯಾನಿ ಖೋಬ್ರಗಡೆ ಯಾರೋ ಮಾಮೂಲಿ ವ್ಯಕ್ತಿಯಲ್ಲ; ಐಎಫ್‌ಎಸ್ ದರ್ಜೆಯ ಅಧಿಕಾರಿಣಿಯಾಗಿರುವ ಈಕೆ ಅಮೆರಿಕದ ನ್ಯೂಯಾರ್ಕ್‌ನಲ್ಲಿರುವ ಭಾರತ ರಾಯಭಾರ ಕಚೇರಿಯ ಉಪ-ರಾಯಭಾರಿಗಳಲ್ಲಿ ಒಬ್ಬರಾಗಿ ಕರ್ತವ್ಯದಲ್ಲಿದ್ದಾರೆ. ಈಕೆಯ ತಂದೆ ಉತ್ತಮ್ ಖೋಬ್ರಗಡೆ ಐಎಎಸ್ ಅಧಿಕಾರಿಯಾಗಿದ್ದವರು.

ದೇವಯಾನಿ ಅಮೆರಿಕ ಪ್ರಜೆಯನ್ನೇ ಮದುವೆಯಾಗಿದ್ದು ಆತ ಅಲ್ಲಿ ಪ್ರೊಫೆಸರ್ ಆಗಿದ್ದಾನೆ. ಹೀಗೆ ಹೆಚ್ಚುಕಡಿಮೆ ಅಮೆರಿಕದಲ್ಲೇ ನೆಲೆ ನಿಂತಿರುವ ದೇವಯಾನಿ ತನ್ನ ಮನೆಗೆಲಸಕ್ಕಾಗಿ ಸಂಗೀತ ರಿಚರ್ಡ್ಸ್ ಎಂಬಾಕೆಯನ್ನು 2012ರ ನವೆಂಬರ್‌ನಲ್ಲಿ ಭಾರತದಿಂದ ತನ್ನ ಜೊತೆ ಕರೆದೊಯ್ದಿದ್ದಳು. ವಾಸ್ತವದಲ್ಲಿ ಭಾರತ ಸರ್ಕಾರವೇ ತನ್ನ ರಾಯಭಾರಿಯ ಮನೆಗೆಲಸದಾಕೆಯನ್ನು ನೇಮಿಸಿತ್ತು ಎಂದರೂ ತಪ್ಪಾಗಲಾರದು.

ಹೀಗೆ ರಾಯಭಾರಿಣಿಯ ಮನೆಯಲ್ಲಿ ಮನೆಗೆಲಸ ಮಾಡುತ್ತಿದ್ದ ಸಂಗೀತಾ ಕಳೆದ ಕೆಲವು ತಿಂಗಳುಗಳ ಹಿಂದೆ ತನಗೆ ನೀಡುತ್ತಿದ್ದ ವೇತನ ಸಾಕಾಗುತ್ತಿಲ್ಲ, ಆದ್ದರಿಂದ ತಾನು ಮತ್ತೊಂದು ಕಡೆ ಪಾರ್ಟ್‌ಟೈಮ್ ಕೆಲಸ ಮಾಡಲು ಅನುಮತಿ ಕೊಡಬೇಕೆಂದು ತನ್ನ ಮಾಲಕಿಯನ್ನು ಕೇಳಿಕೊಂಡಿದ್ದಳು. ಆದರೆ ದೇವಯಾನಿ ಅದಕ್ಕೆ ಬಿಲ್‌ಕುಲ್ ಸಮ್ಮತಿಸಲೇ ಇಲ್ಲ. ಹೀಗಿದ್ದಾಗ 2013ರ ಜೂನ್ 13ರಂದು ಯಾವುದೋ ಸಾಮಾನು ತರಲೆಂದು ಹೊರಗೆ ಹೋದ ಸಂಗೀತಾ ವಾಪಸ್ ಬರಲೇಯಿಲ್ಲ. ಬಹುಶಃ ಹೆಚ್ಚಿನ ಸಂಬಳ ತರುವ ಕೆಲಸದ ತಲಾಶೆಗೆ ಹೋಗಿದ್ದಳು.

ಹೀಗೆ ಸೂಕ್ತ ಐಡೆಂಟಿಟಿ ದಾಖಲೆ ಪತ್ರಗಳಿಲ್ಲದೆ ತಿರುಗುತ್ತಿದ್ದ ಸಂಗೀತಾಳನ್ನು ಅಲ್ಲಿ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಹೀಗೆ ಅಸಹಾಯಕ ಸ್ಥಿತಿಯಲ್ಲಿ ಬಂಧನಕ್ಕೊಳಗಾಗಿರುವವರಿಗಾಗಿ ಕೆಲಸ ಮಾಡುತ್ತಿರುವ ಸ್ವಯಂಸೇವಾ ಸಂಸ್ಥೆಯೊಂದು ಈಕೆಯ ಸಹಾಯಕ್ಕೆ ನಿಂತಿದೆ.

ತನ್ನ ವಿರುದ್ಧ ಕಾನೂನು ಉಲ್ಲಂಘನೆಯ ಕೇಸು ದಾಖಲಾಗುವ ಸುಳಿವನ್ನು ಅರಿತ ದೇವಯಾನಿಯ ಐಎಫ್‌ಎಸ್ ಬುದ್ಧಿ ಬೇಗನೇ ಚುರುಕಾಯಿತು. ಸಂಗೀತಾ ಮತ್ತು ಆಕೆಯ ಕುಟುಂಬ ಒಪ್ಪಂದವನ್ನು ಉಲ್ಲಂಘನೆ ಮಾಡಿ, ತನ್ನಿಂದ ಹಣ ವಸೂಲಿ ಮಾಡಲು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆಂದೂ ಆರೋಪಿಸಿ ಜುಲೈ 2ನೇ ತಾರೀಕು ದೆಹಲಿ ಹೈಕೋರ್ಟ್‌ನಲ್ಲಿ ದೇವಯಾನಿ ಕೇಸು ದಾಖಲಿಸಿದಳು. ಹಾಗೆಯೇ ಸಂಗೀತಾ ತನ್ನ ಮೇಲೆ ಏನಾದರೂ ಕೇಸು ದಾಖಲಿಸುವಂತಿದ್ದರೆ ಅದು ಭಾರತದ ಕಾನೂನು ಚೌಕಟ್ಟಿನಲ್ಲಿ ಮಾಡಬೇಕೇ ಹೊರತು ಅಮೆರಿಕದಲ್ಲಿ ಯಾವುದೇ ಕಾನೂನು ಪ್ರಕರಣ ದಾಖಲಿಸದಂತೆ ತಡೆಯಾಜ್ಞೆ ನೀಡಬೇಕೆಂದು ಕೋರಿದ್ದಳು.

ಇದಕ್ಕೆ ಪ್ರತಿಯಾಗಿ ಸಂಗೀತಾಳ ಗಂಡ ಫಿಲಿಪ್ ರಿಚರ್ಡ್ಸ್ ದೆಹಲಿ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿ ದೇವಯಾನಿ ಖೋಬ್ರಗಡೆ ಮತ್ತು ಭಾರತ ಸರ್ಕಾರ ಇಬ್ಬರೂ ಒಟ್ಟಾಗಿ ತನ್ನ ಪತ್ನಿಯನ್ನು "ಸ್ಲೇವ್ ಲೇಬರ್" ಥರದಲ್ಲಿ ದುಡಿಸಿಕೊಂಡಿದ್ದಾರೆಂದೂ, ಜುಲೈ 8 ನೇ ತಾರೀಖಿನಿಂದ ತನ್ನ ಪತ್ನಿ ನ್ಯೂಯಾರ್ಕ್‌ನಲ್ಲಿ ಪೊಲೀಸರ ವಶದಲ್ಲಿದ್ದರೂ ಆಕೆಗೆ ಯಾವುದೇ ಸಹಾಯ ಮಾಡುತ್ತಿಲ್ಲವೆಂದೂ ದೂರಿದ್ದ. ಆದರೆ ಆಶ್ಚರ್ಯದ ಸಂಗತಿ ಏನೆಂದರೆ ರಿಟ್ ಸಲ್ಲಿಸಿದ ಕೇವಲ ನಾಲ್ಕೇ ದಿನಗಳಲ್ಲಿ ಅದನ್ನು ವಾಪಸ್ ಪಡೆದಿದ್ದಾನೆ.



ದೆಹಲಿ ಹೈಕೋರ್ಟ್ ದೇವಯಾನಿಯ ಅರ್ಜಿಯನ್ನು ಪುರಸ್ಕರಿಸಿ ಸೆಪ್ಟೆಂಬರ್ 20ರಂದು ಆದೇಶ ಹೊರಡಿಸಿ, ಸಂಗೀತಾ ಮತ್ತು ಆಕೆಯ ಕುಟುಂಬ ಭಾರತದ ಹೊರಗಡೆ ಯಾವುದೇ ಕಾನೂನು ಹೋರಾಟ ನಡೆಸದಂತೆ ನಿರ್ಬಂಧ ವಿಧಿಸಿದೆ.

ಅತ್ತ ನ್ಯೂಯಾರ್ಕ್ ಪೊಲೀಸರು ಸೆಪ್ಟೆಂಬರ್ ನಾಲ್ಕನೇ ತಾರೀಖು ದೇವಯಾನಿಗೆ ನೋಟಿಸ್ ಜಾರಿ ಮಾಡಿ ಆಕೆಯ ಮೇಲಿನ ಆರೋಪಗಳಿಗೆ ಸಂಬಂಧಿಸಿದ ದಾಖಲಾತಿಗಳೊಂದಿಗೆ ಕಚೇರಿಗೆ ಹಾಜರಾಗುವಂತೆ ಸೂಚಿಸಿದರು. ಭಾರತದ ವಿದೇಶಾಂಗ ಇಲಾಖೆಯ ಅಧಿಕಾರಿಗಳು ನ್ಯೂಯಾರ್ಕ್ ಪೊಲೀಸರ ಈ ನಡೆಯನ್ನು ತೀವ್ರವಾಗಿ ಖಂಡಿಸಿದ್ದರು.



ಡಿಸೆಂಬರ್ 12ರಂದು ದೇವಯಾನಿಯನ್ನು ಬಂಧಿಸಿ, ಅವಮಾನಪಡಿಸಿದ್ದನ್ನು ಉಗ್ರ ಮಾತುಗಳಿಂದ ಖಂಡಿಸಿದ ಭಾರತ ಸರ್ಕಾರದ ಪ್ರತಿನಿಧಿಗಳು ದೇವಯಾನಿಯ ಮೇಲಿನ ಕೇಸನ್ನು ವಾಪಸ್ ಪಡೆದು, ಕ್ಷಮೆ ಯಾಚಿಸಬೇಕೆಂಬ ಬೇಡಿಕೆ ಮುಂದಿಟ್ಟರು. ಅಮೆರಿಕದ ಅಧಿಕಾರಿಗಳು ಈ ಬೇಡಿಕೆಗೆ ಸೊಕ್ಕಿನ ಪ್ರತಿಕ್ರಿಯೆ ನೀಡಿ, ತಾವು ಎಲ್ಲಾ ಆರೋಪಿತರನ್ನು ನಡೆಸಿಕೊಳ್ಳುವಂತೆಯೇ ದೇವಯಾನಿಯನ್ನು ನಡೆಸಿಕೊಂಡಿರುವುದಾಗಿಯೂ, ಕ್ಷಮಾಪಣೆ ಕೋರುವ ಪ್ರಶ್ನೆಯೇ ಇಲ್ಲವೆಂದೂ ಉತ್ತರಿಸಿದ್ದಾರೆ.

ಲೋಕಸಭಾ ಚುನಾವಣೆ ಈಗಲೋ ಆಗಲೋ ಎನ್ನುವ ಸ್ಥಿತಿಯಲ್ಲಿದ್ದಾಗ ಇಂಥಾ ವಿವಾದ ಶುರುವಾಗಿದ್ದು ಕೇಂದ್ರ ಸರ್ಕಾರಕ್ಕೆ ಬೇಕಿರಲಿಲ್ಲ. ಆದರೆ ಮಾಮೂಲಿಯಂತೆ ತಣ್ಣಗಿದ್ದುಬಿಟ್ಟರೆ ಬಿಜೆಪಿಯವರು ಇದನ್ನು ಚುನಾವಣಾ ರಾಜಕೀಯಕ್ಕೆ ಬಳಸಿಕೊಳ್ಳುವುದು ಖಚಿತ ಎಂದು ಲೆಕ್ಕಹಾಕಿದ ಕಾಂಗ್ರೆಸ್ ಪಕ್ಷ ವೀರಾವೇಶದ ಪೋಸು ನೀಡಲು ಆರಂಭಿಸಿತು.

ವಿದೇಶಾಂಗ ಮಂತ್ರಿ ಸಲ್ಮಾನ್ ಖುರ್ಷಿದ್ ಅಮೆರಿಕ ರಾಯಭಾರಿಗೆ ನೋಟಿಸ್ ಜಾರಿ ಮಾಡಿದರು. ದೇವಯಾನಿಯನ್ನು ಬಿಡುಗಡೆ ಮಾಡಿಸದೆ ಸದನಕ್ಕೆ ಕಾಲಿಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದರು. ಭಾರತ ಪ್ರವಾಸಕ್ಕೆ ಬಂದಿದ್ದ ಅಮೆರಿಕದ 5 ಸದಸ್ಯರ ನಿಯೋಗವನ್ನು ಭೇಟಿ ಮಾಡಲು ಪಾರ್ಲಿಮೆಂಟ್‌ನ ಸ್ಪೀಕರ್ ಮೀರಾ ಕುಮಾರ್ ಒಳಗೊಂಡಂತೆ ಹಲವು ಅಧಿಕಾರಿಗಳು ನಿರಾಕರಿಸಿದರು. ದೆಹಲಿಯ ಅಮೆರಿಕ ಧೂತಾವಾಸ ಕಚೇರಿಯ ಮುಂದಿದ್ದ ಪೊಲೀಸ್ ಬ್ಯಾರಿಕೇಡ್‌ಗಳನ್ನು ತೆಗೆದುಹಾಕಲಾಯ್ತು. ಭಾರತದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಮೆರಿಕ ಅಧಿಕಾರಿಗಳು ತಮ್ಮ ಗುರುತಿನ ಚೀಟಿಯನ್ನು ವಾಪಸ್ ಕೊಡುವಂತೆ ಆದೇಶಿಸಲಾಯಿತು. ಅಮೆರಿಕ ರಾಯಭಾರ ಕಚೇರಿಯ ಸಿಬ್ಬಂದಿಗಳಿಗೆ ಒದಗಿಸಲಾಗಿದ್ದ ಹಲವು ವಿಶೇಷ ಸವಲತ್ತುಗಳನ್ನು ರದ್ದುಪಡಿಸಲಾಯ್ತು.

ಎಷ್ಟೊಂದು ವೀರಾವೇಶ! ಎಂಥಾ ದೇಶಾಭಿಮಾನ!! ಸದ್ಯದಲ್ಲೇ ಪಾರ್ಲಿಮೆಂಟ್ ಚುನಾವಣೆ ಇಲ್ಲದೇ ಹೋಗಿದ್ದರೆ ಅಮೆರಿಕದ ವಿರುದ್ಧ ಇಂಥಾ ವೀರಾವೇಶ ಉಕ್ಕುತ್ತಿರಲಿಲ್ಲ ಎಂಬುದು ಚಾರಿತ್ರಿಕ ಸತ್ಯ.

ಇದು ಅಮೆರಿಕದ ದುರ್ವರ್ತನೆಯೆಂದು ಭಾರತದ ಮಾಧ್ಯಮಗಳು ಬಣ್ಣಿಸುತ್ತಿರುವುದೇನೋ ಸರಿ. ಆದರೆ ಕಾರ್ಪೊರೇಟ್ ನಿಯಂತ್ರಣದಲ್ಲಿರುವ ಮಾಧ್ಯಮಗಳು ಮುಚ್ಚಿ ಹಾಕಿರುವ ಹಲವಾರು ಹುಳುಕುಗಳು ಈ ಪ್ರಕರಣದಲ್ಲಿವೆ.

ಮೊದಲನೆಯದಾಗಿ ಭಾರತದ ಪ್ರತಿನಿಧಿಗಳಿಗೆ ಅಮೆರಿಕ ಅವಮಾನ ಮಾಡಿದ್ದು ಇದೇ ಮೊದಲೇನಲ್ಲ.

▶▶09

ಭಾರತ ಯಾರ ಪರ?

ಈ ವಿವಾದಕ್ಕೆ ಮೂಲಕಾರಣ ದೇವಯಾನಿ ಮತ್ತು ಸಂಗೀತಾ ಎಂಬ ಇಬ್ಬರು ಭಾರತೀಯ ಮಹಿಳೆಯರು. ಒಟ್ಟಾರೆ ಈ ವಿವಾದದಲ್ಲಿ ಭಾರತ ಸರ್ಕಾರ ಯಾರ ಪರ?

ಈ ಇಬ್ಬರು ಮಹಿಳೆಯರ ಹೆಸರುಗಳನ್ನಷ್ಟೆ ಹೇಳಿ ಮುಗಿಸಿದರೆ ಉತ್ತರಿಸುವುದು ಕಷ್ಟ. ಈ ಬಗ್ಗೆ ಒಂದಷ್ಟು ಮಾಹಿತಿ ಕೊಟ್ಟರೆ ಈ ಪ್ರಶ್ನೆಗೆ ಉತ್ತರ ಕೊಡುವುದು ಸುಲಭವಾಗುತ್ತದೆ.

1) ದೇವಯಾನಿ–ಅಮೆರಿಕ ರಾಯಭಾರ ಕಚೇರಿಯಲ್ಲಿ ಸೇವೆ ಸಲ್ಲಿಸುತ್ತಿರುವ ಐಎಫ್‌ಎಸ್ ದರ್ಜೆಯ ಅಧಿಕಾರಿಣಿ. ಆಕೆಯ ಕುಟುಂಬದಲ್ಲಿ ಐಎಎಸ್, ಐಪಿಎಸ್ ದರ್ಜೆಯ ಇನ್ನಿತರ ಅಧಿಕಾರಿಗಳೂ ಇದ್ದಾರೆ.
2) ಸಂಗೀತಾ– ಈಕೆ ದೇವಯಾನಿಯ ಮನೆಯಲ್ಲಿ ಕಸ ಮುಸುರೆ ಕೆಲಸದವಳು. ಆಕೆಯ ಕುಟುಂಬ ವರ್ಗದವರು ಹೀಗೆ ಕೂಲಿನಾಲಿ ಮಾಡಿ ಬದುಕುತ್ತಾರೆ.

ಇಷ್ಟು ಮಾಹಿತಿ ತಿಳಿದ ನಂತರ ನೂರಕ್ಕೆ ತೊಂಬತ್ತು ಮಂದಿ ಭಾರತೀಯರು ತಮ್ಮ ನಿತ್ಯ ಜೀವನಾನುಭವದಿಂದ ಯಾವ ಉತ್ತರ ಕೊಡುತ್ತಾರೆಂಬುದು ನಮ್ಮ ಕಾಮನ್‌ಸೆನ್ಸ್‌ನ ವಿಚಾರ!

ಭಾರತ ಸರ್ಕಾರ ನಮ್ಮ ನಿರೀಕ್ಷೆಯನ್ನು ಸುಳ್ಳು ಮಾಡಿಲ್ಲ. ಏಕಪಕ್ಷೀಯವಾಗಿ ದೇವಯಾನಿಯ ರಕ್ಷಣೆಗೆ ಧಾವಿಸಿರುವ ಸರ್ಕಾರ, ಸಂಗೀತಾ ಎಂಬ ಮನೆಗೆಲಸದಾಕೆಗೆ ಮತ್ತು ಆಕೆಯ ಕುಟುಂಬ ವರ್ಗದವರನ್ನು ಶಿಕ್ಷೆಗೆ ಗುರಿಪಡಿಸುವ ತನ್ನ ನೀತಿಯನ್ನೇ ಪಾಲಿಸಿದೆ.

ಸರ್ಕಾರ ನೀತಿ ಹಾಳಾಗಲಿ! ಈ ಸುದ್ದಿ ಮಾಧ್ಯಮಗಳಿಗೇನಾಗಿದೆ? ಈ ದೊಡ್ಡ ಪ್ರಜಾಪ್ರಭುತ್ವದ ಪ್ರಜೆಗಳಿಗೇನಾಗಿದೆ?

ದೇವಯಾನಿಯೆಂಬ 'ಉನ್ನತ' ವ್ಯಕ್ತಿಗಾದ ಅವಮಾನದ ಸುದ್ದಿಯ ಗದ್ದಲದಲ್ಲಿ ಮನೆಗೆಲಸದಾಕೆಯ ಗೋಳಿನ ಬಗ್ಗೆ ಯೋಚಿಸುವ ವ್ಯವಧಾನವೂ ಇಲ್ಲದಂತಾಗಿದೆ! ಎಲ್ಲವೂ ಜನ ಮರುಳೋ ಜಾತ್ರೆ ಮರುಳೋ ಎಂಬಂತೆ !!


ಅಮೆರಿಕ ನಾಗರಿಕತೆಯ ಸೊಕ್ಕು!!

ಜಗತ್ತಿಗೆ ಡೆಮಾಕ್ರಸಿಯ, ನಾಗರಿಕ ಸಂಸ್ಕೃತಿಯ ಪಾಠ ಬೋಧಿಸುವ ಅಮೆರಿಕ ಭಾರತದಂಥಾ ರಾಷ್ಟ್ರದ ಸಾಮಾನ್ಯ ಜನರನ್ನು ಹಾಗಿರಲಿ, ಉನ್ನತ ಪ್ರತಿನಿಧಿಗಳಿಗೂ ಕನಿಷ್ಟ ಗೌರವ ನೀಡುವ ಸಂಸ್ಕೃತಿಯನ್ನು ರೂಢಿಸಿಕೊಂಡಿಲ್ಲ. ಅಮೆರಿಕದ ಸಂಸ್ಕೃತಿಹೀನ ನಡವಳಿಕೆಗಳ ಕೆಲವು ಇತ್ತೀಚಿನ ಉದಾಹರಣೆ ನೋಡೋಣ.

- ಭಾರತದ ರಾಷ್ಟ್ರಪತಿಯಾಗಿದ್ದ ಕ್ಷಿಪಣಿ ವಿಜ್ಞಾನಿ ಅಬ್ದುಲ್ ಕಲಾಂ ಅವರ ಬಗ್ಗೆ ಅಭಿಮಾನ ಪಡದವರು ಯಾರಿದ್ದಾರೆ ಹೇಳಿ. ಜಗತ್ತಿನ ಐದನೇ ಒಂದು ಭಾಗ ಜನಸಂಖ್ಯೆಯನ್ನು ಪ್ರತಿನಿಧಿಸಿದ್ದ ಕಲಾಂ ಅವರು ಅಮೆರಿಕ ಪ್ರವಾಸ ತೆರಳಿದ್ದಾಗ ಏರ್‌ಪೋರ್ಟ್‌ನಲ್ಲಿ ಅವರ ಬಟ್ಟೆ ಬಿಚ್ಚಿಸಿ ತಪಾಸಣೆ ಮಾಡಲಾಯಿತು. ತಾನು ಭಾರತದ ಮಾಜಿ ರಾಷ್ಟ್ರಪತಿ ಎಂದರೂ ಅದಕ್ಕೆ ಕವಡೆ ಕಾಸಿನ ಕಿಮ್ಮತ್ತನ್ನೂ ನೀಡದೆ, ಹೀನಾಯವಾಗಿ ನಡೆಸಿಕೊಳ್ಳಲಾಯಿತು.
- 2010ರ ಸೆಪ್ಟೆಂಬರ್ ತಿಂಗಳಲ್ಲಿ ಭಾರತದ ವಿಮಾನಯಾನ ಸಚಿವ ಪ್ರಫುಲ್ ಪಟೇಲ್ ಚಿಕಾಗೋ ಪ್ರವಾಸದ ವೇಳೆ ಇಂಥದೇ ಅವಮಾನಕ್ಕೆ ಗುರಿಯಾಗಿದ್ದರು.
- ಜಾರ್ಜ್ ಫರ್ನಾಂಡಿಸ್ (ಮಾಜಿ ರಕ್ಷಣಾ ಸಚಿವ) : 2002 ಮತ್ತು 2003ರಲ್ಲಿ ಬ್ರೆಜಿಲ್ ಪ್ರವಾಸಕ್ಕೆ ತೆರಳಿದ್ದ ಸಂದರ್ಭದಲ್ಲಿ ಎರಡು ಬಾರಿ ಅಮೆರಿಕದ ಏರ್‌ಪೋರ್ಟ್ ಅಧಿಕಾರಿಗಳು ಅವಮಾನ ಪಡಿಸಿದ್ದರು.
- ಶಾರೂಖ್ ಖಾನ್ (ಬಾಲಿವುಡ್‌ನ ಅತ್ಯಂತ ಜನಪ್ರಿಯ ತಾರೆ) : 2009ರ ಆಗಸ್ಟ್‌ನಲ್ಲಿ, ಅಮೆರಿಕದ ಚಿಕಾಗೋ ನಗರದಲ್ಲಿ ನಡೆಯಲಿದ್ದ ಭಾರತ ಸ್ವಾತಂತ್ರ್ಯ ದಿನಾಚರಣೆಯ ಮುಖ್ಯ ಅತಿಥಿಯಾಗಿ ಹೋಗಿದ್ದರು. ಆತನನ್ನು ಅನುಮಾನಾಸ್ಪದ ವ್ಯಕ್ತಿಯೆಂಬಂತೆ ವಶಕ್ಕೆ ಪಡೆದ ಅಧಿಕಾರಿಗಳು ಅವಮಾನಕಾರಿ ವಿಚಾರಣೆಗೆ ಒಳಪಡಿಸಿದ್ದರು.
- ಹರ್‌ದೀಪ್‌ಸಿಂಗ್ ಪುರಿ ಎಂಬ ವಿಶ್ವಸಂಸ್ಥೆಯ ಭಾರತ ರಾಯಭಾರಿ 2010ರ ನವೆಂಬರ್ 13ರಂದು ಟೆಕ್ಸಾಸ್ ಯೂನಿವರ್ಸಿಟಿಯಲ್ಲಿ ಭಾಷಣ ಮುಗಿಸಿ ನ್ಯೂಯಾರ್ಕ್‌ಗೆ ವಾಪಸ್ ಬರುತ್ತಿದ್ದ ಸಂದರ್ಭದಲ್ಲಿ ವಶಕ್ಕೆ ಪಡೆದು ಅವಮಾನಪಡಿಸಿದರು.
- 2010ರ ಡಿಸೆಂಬರ್ 4 - ಅಮೆರಿಕದಲ್ಲಿ ಭಾರತದ ರಾಯಭಾರಿಯಾಗಿದ್ದ ಶ್ರೀಮತಿ ಮೀರಾ ಶಂಕರ್ ಅವರನ್ನು ಮಿಸ್ಸಿಸಿಪ್ಪಿ ವಿಮಾನ ನಿಲ್ದಾಣದಲ್ಲಿ ವಿಮಾನ ಏರುವ ಸಾಲಿನಿಂದ ಹೊರಗೆಳೆದು ತಪಾಸಣೆಯ ಹೆಸರಿನಲ್ಲಿ ಅವಮಾನ ಪಡಿಸಲಾಯಿತು.

ಹೀಗೆ ಬರೆಯುತ್ತಾ ಹೋದರೆ ಅಮೆರಿಕದ ದುರ್ವರ್ತನೆಯ ಪಟ್ಟಿಗೆ ಕೊನೆಯೇ ಇಲ್ಲ. ಆದರೆ ಆ ಎಲ್ಲ ಸಂದರ್ಭದಲ್ಲಿ ಭಾರತ ಸರ್ಕಾರ ಸದ್ದುಗದ್ದಲ ಮಾಡದೆ ಬಾಲ ಮುದುರಿ ಕೂತಿತ್ತು ಎಂಬುದನ್ನು ನಾವು ಮರೆಯಬಾರದು.

ಧನ ನಾಯಕ್ ಹತ್ಯೆ: ಎಸಿಎಫ್ ಹಿತ್ತಲಮಕ್ಕಿ ಮಗನೇ ಸುಪಾರಿದಾರ!!




ಲೇಕೇರಿ ಬಂದರಿನಲ್ಲಾದ ಅದಿರು ಕಳ್ಳ ಸಾಗಾಣಿಕೆ
ಗ ರಕ್ತಸಿಕ್ತ ಅಧ್ಯಾಯ ಆರಂಭಿಸಿ ಬಿಟ್ಟಿದೆ!
್ಯಾಂಡಲಿಂಗ್ ದೊರೆ ಆರ್.ಎನ್.ನಾಯಕ್ ಸುಪಾರಿ
ೇಲೇಕೇರಿ ಬಂದರಿನ ಕರಾಳ ಅದಿರೋದ್ಯಮದ
ಅಂತ್ಯವಲ್ಲ; ಇದು ಆರಂಭ ಎಂದೇ
ಲಾಗುತ್ತಿದೆ. ಲೋಕಾಯುಕ್ತದವರು ಬೇಲೇಕೇರಿ
ಲ್ಲಿ ಮುಟ್ಟುಗೋಲು ಹಾಕಿಕೊಂಡಿದ್ದ ಅದಿರನ್ನು
ೇಷವಾಗೇ ಕದ್ದು ವಿದೇಶಕ್ಕೆ ರವಾನಿಸಿದ
ಡದ ಕಿಂಗ್‌ಪಿನ್‌ಗಳಾದ ಅದಿರು ಅವ್ಯವಹಾರಿ
ನಾಯಕ್ ಮತ್ತು ಚೋರ ಅರಣ್ಯಾಧಿಕಾರಿ
ಹಿತ್ತಮಕ್ಕಿ ನಡುವಿನ ದಗಾಕೋರ ದೋಸ್ತಿ
ಲ್ಲಿ ಪರ್ಯಾವಸಾನ ಕಂಡಿದೆ!!
ೇ ಜಾತಿ (ನಾಡವ)ಗೆ ಸೇರಿದ ಈ ತೋಳ್ಬಲ-
ದ ಸೈತಾನರು ರಕ್ತ ಹೀರುವ ಸೇಡಿಗೆ ಬಿದ್ದ ಕತೆ
ಲಕರವಾಗಿದೆ. ದೋ ನಂಬರ್ ಅದಿರು
ಂದ ಕೋಟಿ-ಕೋಟಿ ಲೆಕ್ಕದಲ್ಲಿ ಹರಿದುಬರುತ್ತಿದ್ದ
ಈ ದೋಸ್ತಿಗಳನ್ನು ದುಷ್ಮನಿಗಳಾಗಿಸಿಬಿಟ್ಟಿತ್ತು.
ಡಿವ ಗುತ್ತಿಗೆದಾರ (ಲಾಗಿಂಗ್‌ದಾರ) ಆರೆನ್ನೆನ್
ರಣ್ಯಾಧಿಕಾರಿ ಹಿತ್ತಲಮಕ್ಕಿಯ ಪ್ರಳಯಾಂತಕ
ೂರ್‍ನಾಲ್ಕು ದಶಕದ ಹಿಂದಿನದು. ಆಗ ಆರೆನ್ನೆನ್
ದಂಧೆ ಮಾಡುತ್ತಿದ್ದರೆ, ಹಿತ್ತಲಮಕ್ಕಿ ವಲಯ
ಧಿಕಾರಿ (ಆರ್‌ಎಫ್‌ಓ) ಆಗಿ ಕಾಡು 'ಉಳಿಸುವ'
ನಿಭಾಯಿಸುತ್ತಿದ್ದರು. ಆರೆನ್ನೆನ್ ಲಾಗಿಂಗ್‌ಗೆ
ಂದ ಗುತ್ತಿಗೆಗೆ ಪಡೆಯುತ್ತಿದ್ದ ಅರಣ್ಯ ಪ್ರದೇಶಕ್ಕೆ
ಪಟ್ಟು ಹೆಚ್ಚಿಗೆ ಜಾಗದಲ್ಲಿನ ಮರ ಕಡಿದು
ಹಿತ್ತಲಮಕ್ಕಿ ಅವಕಾಶ ಕೊಡುತ್ತಿದ್ದರು.
ದಂತೆ ಬಿದ್ದ ಮತ್ತು ಒಣಮರಗಳನ್ನು
ದರೊಂದಿಗೇ ಆರೆನ್ನೆನ್ ಮಿತ್ರ ಹಿತ್ತಲಮಕ್ಕಿಯ
ವ ಬೆಲೆಬಾಳುವ ಹಸಿ-ಹಸಿರು ಮರಗಳನ್ನೇ
ಳಿಸಿ ಕಳ್ಳದಂಧೆ ಅಧಿಕೃತವಾಗೇ ನಡೆಸುತ್ತಿದ್ದರು.
ಲಫಡಾ ಲಾಗಿಂಗ್ ವ್ಯವಹಾರದಲ್ಲಿ ಆರೆನ್ನೆನ್
ಧನಿಕನಾದನೋ ಅಷ್ಟೇ ಶ್ರೀಮಂತಿಕೆ
ಕ್ಕಿಯೂ ಕಂಡ! ಆರೆನ್ನೆನ್ ಅರಣ್ಯ ಕೂಲಿಕಾರರ
ಸಕಲ ದಗಲುಬಾಜಿಗೂ ಹಿತ್ತಲಮಕ್ಕಿ ಅರಣ್ಯ
ಂದ ಅನುಕೂಲ ಕಲ್ಪಿಸುತ್ತಿದ್ದರು. ಹಿತ್ತಲಮಕ್ಕಿ
ಂದ ಆರೆನ್ನೆನ್ ದೊಡ್ಡ ಟಿಂಬರ್ ಮರ್ಚೆಂಟ್
ವರು. ಅದಕ್ಕೆ ಸರಿಯಾಗಿ ಅಂದು ಶಾಸಕನಾಗಿದ್ದ
ಭಟ್ಟನ ರಾಜಕೀಯ ಶಕ್ತಿಯೂ ಆರೆನ್ನೆನ್
ತ್ತಲಮಕ್ಕಿ ಜೋಡಿಗೆ ಪ್ರಾಪ್ತವಾಗಿತ್ತು. ಈ ಕಳ್ಳ
ರೆನ್ನೆನ್ ಅದಿರು ಹ್ಯಾಂಡಲಿಂಗ್ ಷಹಿವಾಟು-

ಜಲ್ಲಿ ವಹಿವಾಟು ಶುರು ಹಚ್ಚಿಕೊಂಡಾಗಲೂ ಅಖಂಡವಾಗೇ ಮುಂದುವರಿದಿತ್ತು. ಆ ಹೊತ್ತಿಗೆ ಹಿತ್ತಲಮಕ್ಕಿ ಸಾಹೇಬರು ಪ್ರಮೋಷನ್ ಪಡೆದು ಅಸಿಸ್ಟೆಂಟ್ ಕಾನ್‌ಸರ್‌ವೇಟರ್ ಆಫ್ ಫಾರೆಸ್ಟ್ (ಎಸಿಎಫ್) ಆಗಿದ್ದರು.


ಹಿತ್ತಲಮಕ್ಕಿ, ಬೇಲೇಕೇರಿ ಬಂದರು ಮತ್ತು ಬಳ್ಳಾರಿಯಿಂದ ಅದಿರು ಸಾಗಾಣಿಕೆಯಾಗುತ್ತಿದ್ದ ಅಂಕೋಲಾ ಒಳಗೊಂಡಿದ್ದ ಅರಣ್ಯ ಉಪ ವಲಯದಲ್ಲೇ ಎಸಿಎಫ್ ಆಗಿದ್ದು ಆರೆನ್ನೆನ್‌ರ ಕಳ್ಳಾಟವನ್ನೆಲ್ಲ ಸಲೀಸು ಮಾಡಿತ್ತು. ಕಳ್ಳ ಅದಿರನ್ನು ಹಡಗಿಗೆ ತುಂಬುವ (ಶಿಪ್‌ಮೆಂಟ್) ವ್ಯವಹಾರ ಮಾಡುತ್ತಿದ್ದ ಆರೆನ್ನೆನ್ ಆದಾನಿ, ಸೈಲ್, ಸಾಲ್ಗಾಂವ್ಕರ್... ವಗೈರೆ ಅದಿರು ರಫ್ತುದಾರರಿಗೆ ವಿವಿಧ ಇಲಾಖೆಯ ಅಧಿಕಾರಿಗಳ ಬೆಂಬಲ ಕ್ರೋಢೀಕರಿಸಿ ಕೊಡುತ್ತಿದ್ದರು. ಬೇಲೇಕೇರಿ ಮತ್ತು ಅಂಕೋಲಾ ಭಾಗದ ಕಳ್ಳ ಅದಿರು ಉದ್ಯಮದ ಪ್ರಮುಖ 'ಡಾನ್' ಆಗಿ ಆರೆನ್ನೆನ್ ಅವತರಿಸಿದ್ದರು. ಬಿಜೆಪಿ ಮಂತ್ರಿ ಆನಂದ ಅಸ್ನೋಟಿಕರ್‌ನ ಬಲಗೈ ಬಂಟನೆಂಬ ಕುಖ್ಯಾತಿಯೂ ಆತನಿಗೆ ದೋಖಾ ಅದಿರು ರಫ್ತುದಾರರು-ಸಾಗಾಟದಾರರು ಮತ್ತು ಖದೀಮ ಅಧಿಕಾರಿಗಳ ನಡುವೆ ನಂಟು ಬೆಸೆದು ಅವ್ಯವಹಾರ ನಿರಂತರ-ನಿರಾತಂಕಗೊಳಿಸಲು ನೆರವಾಗಿತ್ತು!

ಬೇಲೇಕೇರಿ ಬಂದರಿನಲ್ಲಿ ಲೋಕಾಯುಕ್ತದವರು ಸೀಜ್ ಮಾಡಿದ್ದ ಅದಿರನ್ನು ಕದ್ದು ರಫ್ತು ಮಾಡಿದ ಕರ್ಮಕಾಂಡದ ಹಿಂದಿನ ತಂತ್ರಗಾರಿಕೆ ರೂವಾರಿಯೇ ಆರೆನ್ನೆನ್! ಲೋಕಾಯುಕ್ತ ವಶಪಡಿಸಿಕೊಂಡು ಬಂದರು ಮತ್ತು ಅರಣ್ಯ ಇಲಾಖೆಯ ತಾಬಾ ಕೊಟ್ಟಿದ್ದ ಅದಿರು ವಿದೇಶಕ್ಕೆ ಸಾಗಿಸಲು ಆರೆನ್ನೆನ್ ಹಾಕಿದ ಸ್ಕೆಚ್ ಖತರ್‌ನಾಕ್ ಆಗಿದೆ. ಸೀಜಾಗಿದ್ದ ಅದಿರಿನ ಮೊತ್ತ ಲೋಕಾಯುಕ್ತದವರು ಹೇಳಿದ್ದರೇ ಹೊರತು ಅದು ಯಾವ ಗ್ರೇಡಿನದೆಂದು ಹೇಳಿರಲಿಲ್ಲ. ಆದರೆ ಅದು ಪ್ರಥಮ ದರ್ಜೆ (ಗ್ರೇಡ್ 63) ಅದಿರಾಗಿತ್ತು. ವಿದೇಶದಲ್ಲಿ ಅದಕ್ಕೆ ಅಪಾರ ಬೆಲೆ ಇತ್ತು. ಇದು ರಫ್ತುದಾರರಿಗೆ-ಹ್ಯಾಂಡಲಿಂಗ್ ಏಜೆಂಟ್ ಆರೆನ್ನೆನ್‌ಗೆ ಗೊತ್ತಿತ್ತು. ಈ ಅದಿರು ಲೋಕಾಯುಕ್ತದವರು ವಶಪಡಿಸಿಕೊಂಡಿದ್ದರಿಂದ ರಫ್ತುದಾರರಿಗೆ ಮತ್ತು ಹ್ಯಾಂಡಲಿಂಗ್‌ದಾರರಿಗೆ ಹಾನಿಯಾಗಹತ್ತಿತ್ತು.



ಪ್ರತಾಪ್ ರೆಡ್ಡಿ

ವಿದೇಶಿ ಹಡಗು ಬಂದರಿನಲ್ಲಿ ಖಾಲಿ ಉಳಿದರೆ ತಾಸಿಗೆ ಐದಾರು ಲಕ್ಷ ಲಾಸ್ ಆಗುತ್ತಿತ್ತು. ಹೀಗಾಗಿ ಆರೆನ್ನೆನ್ ಮತ್ತು ರಫ್ತುದಾರರು ಸೇರಿ ಹೇಗಾದರೂ ಮಾಡಿ ಸದ್ರಿ ಅದಿರು ವಿದೇಶಕ್ಕೆ ಸಾಗಿಸಲೇಬೇಕೆಂದು ಹಠಕ್ಕೆ ಬಿದ್ದರು. ಆಗ ಆರೆನ್ನೆನ್‌ಗೊಂದು ಉಪಾಯ ಹೊಳೆಯಿತು. ಪ್ರಥಮ ದರ್ಜೆಯ ಅದಿರು ವಿದೇಶಕ್ಕೆ ಸಾಗಿಸಿ ಆ ಸೀಜ್ ಜಾಗದಲ್ಲಿ ಕಳಪೆ ಅದಿರು ಅಥವಾ ಮಣ್ಣು-ಬೂದಿ ರಾಶಿ ಹಾಕಿ ಮುಚ್ಚಿಡುವ ಪ್ಲಾನ್ ಆರೆನ್ನೆನ್ ಎಸಿಎಫ್ ಹಿತ್ತಲಮಕ್ಕಿ ತಲೆಯಲ್ಲಿ ಬಿತ್ತಿದ್ದರು. ಗೆಳೆಯನ ಮಾತು ಮೀರಲು ಭ್ರಷ್ಟ ಅರಣ್ಯಾಧಿಕಾರಿ ಹಿತ್ತಲಮಕ್ಕಿಯಿಂದ ಆಗಲಿಲ್ಲ. ಬಂದರು ಅಧಿಕಾರಿಗಳನ್ನು ಜತೆಗೆ ಸೇರಿಸಿಕೊಂಡು ಎಸಿಎಫ್ ಹಿತ್ತಲಮಕ್ಕಿ ಹಿಕಮತ್ತುದಾರ ಆರೆನ್ನೆನ್ ನಿರ್ದೇಶನದಂತೆ ಸೀಜ್ಡ್ ಅದಿರನ್ನು ವಿದೇಶಕ್ಕೆ ರವಾನಿಸಲು ಸಹಕರಿಸಿ ಬಿಟ್ಟರು.



ಆರ್.ಎನ್.ನಾಯಕ್

ಆದರೆ ಆರೆನ್ನೆನ್-ಹಿತ್ತಲಮಕ್ಕಿ ಮಸಲತ್ತು ಕೈಕೊಟ್ಟಿತ್ತು. ಆಗ ಆದ ಸಣ್ಣದೊಂದು ಎಡವಟ್ಟು ಬೇಲೇಕೇರಿ ಬಂದರು ಕಳ್ಳತನಕ್ಕೆ ದೊಡ್ಡ ಕುಖ್ಯಾತಿ ಬರಲು ಕಾರಣವಾಯ್ತು; ಸಿಬಿಐ ತನಿಖೆಗೂ ಇದೇ ಹೇತುವಾಯ್ತು; ಅಷ್ಟೇ ಅಲ್ಲ, ಸದ್ರಿ ಮೋಸಗಾರಿಕೆ ಸಂಚೇ ಇವತ್ತು ಆರೆನ್ನೆನ್ ಬಲಿಯೂ ಪಡೆದುಬಿಟ್ಟದೆ. ಆಗಿದ್ದೇನೆಂದರೆ, ಬೆಲೆಬಾಳುವ ಸೀಜ್ಡ್ ಅದಿರನ್ನು ಕದ್ದು ಆ ಜಾಗದಲ್ಲಿ ಕಳಪೆ ಅದಿರು ರಾಶಿ ಹಾಕಿ ಮುಚ್ಚಿಡುವ ಆರೆನ್ನೆನ್-ಹಿತ್ತಲಮಕ್ಕಿ ಹರಾಮಿತನದಲ್ಲಿ ಮೊದಲನೆಯದಷ್ಟೇ ಕಾರ್ಯಗತ ಮಾಡಲಾಯ್ತಷ್ಟೇ. ಕಳಪೆ ಅದಿರು ತಂದಿಡುವ ಮೊದಲೇ ಕಡಕ್ ಅರಣ್ಯಾಧಿಕಾರಿ ಯಾಗಿದ್ದ ಗೋಕುಲ್‌ಗೆ ಬೇಲೇಕೇರಿ ಬಂದರಿನಲ್ಲಾದ ಸೀಜ್ಡ್ ಅದಿರು ಕಳ್ಳತನದ ಕತೆ ಗೊತ್ತಾಗಿತ್ತು. ಅದನ್ನಾತ ಅಂದು ಲೋಕಾಯುಕ್ತದ ನ್ಯಾಯಮೂರ್ತಿಯಾಗಿದ್ದ ಸಂತೋಷ್ ಹೆಗ್ಡೆ ಗಮನಕ್ಕೆ ತಂದರು. ಆಗದು ದೊಡ್ಡ ಹಗರಣವಾಯ್ತು.

ಕೇಸು ಸಿಬಿಐ ಕೈಗೆ ಹೋಯ್ತು. ಆಗ ಆರೆನ್ನೆನ್, ಸೈಲ್, ಹೆಬ್ಬಾರ್, ಆದಾನಿ, ಹಿತ್ತಲಮಕ್ಕಿ, ಬಂದರು ಅಧಿಕಾರಿಗಳು... ಹೀಗೆ ಸಾಲುಸಾಲಾಗಿ ಚೋರರು ಬೋನಿಗೆ ಬಿದ್ದರು. ಆರೆನ್ನೆನ್ ಮಾಫಿ ಸಾಕ್ಷಿಯಾಗಲು ತಯಾರಾಗಿ ಉಳಿದವರನ್ನು ಆಹುತಿ ಕೊಟ್ಟರು. ಹಿತ್ತಲಮಕ್ಕಿ ಎಲ್ಲರಿಗಿಂತ ಮೊದಲು ಸಿಬಿಐ ಬಲೆಗೆ ಬಿದ್ದು ಜೈಲು ಪಾಲಾದರು. ಆಗ ಶುರುವಾಯ್ತು ಆರೆನ್ನೆನ್-ಹಿತ್ತಲಮಕ್ಕಿ ಫ್ಯಾಮಿಲಿ ನಡುವೆ ದ್ವೇಷ-ಸೇಡು-ರೊಚ್ಚು!!! ಸೀಜ್ಡ್ ಅದಿರು ರಫ್ತಿಗೆ ಅವಕಾಶ ಕೊಡೆಂದು ಅಂದು ಕುಮ್ಮಕ್ಕು ಕೊಟ್ಟಿದ್ದ ಆರೆನ್ನೆನ್ ತನ್ನನ್ನು ನಡುನೀರಲ್ಲಿ ಕೈಬಿಟ್ಟಿದ್ದು ಹಿತ್ತಲಮಕ್ಕಿಯನ್ನು ಕೆರಳಿಸಿತ್ತು. ಅಂದು ಮಂತ್ರಿ ಅಸ್ನೋಟಿಕರ್ ಬಲದಲ್ಲಿದ್ದ ಆರೆನ್ನೆನ್‌ರನ್ನು ನಂಬಿದ್ದ ಹಿತ್ತಲಮಕ್ಕಿಗೆ ವಿಶ್ವಾಸಘಾತವಾಗಿತ್ತು. ತಮ್ಮನ್ನು ಕೇಸ್‌ನ ಉರುಳಲ್ಲಿ ಸಿಲುಕಿ ತಾನು ಮಾಫಿ ಸಾಕ್ಷಿಯಾಗಿ ಬಚಾವಾದ ಆರೆನ್ನೆನ್ ದ್ರೋಹ ಹಿತ್ತಲಮಕ್ಕಿ ಮತ್ತವನ ಹೆಂಡತಿ ಮಕ್ಕಳ ಹೊಟ್ಟೆಯುರಿಸಿತ್ತು!

ಆರೆನ್ನೆನ್ ಮತ್ತು ಹಿತ್ತಲಮಕ್ಕಿ ಕುಟುಂಬದ ನಡುವೆ ಶೀತಲಸಮರ ಶುರುವಾಯ್ತು. ಆರೆನ್ನೆನ್‌ನ ಕುಬೇರಾ ಎಂಟರ್‌ಪ್ರೈಸಸ್ ಎಂಬ ಅದಿರು ಹ್ಯಾಂಡಲಿಂಗ್ ಕಂಪನಿಯ ಉಸ್ತುವಾರಿ ಆತನ ಮಗ ಮಯೂರ ನೋಡಿಕೊಳ್ಳುತ್ತಿದ್ದ. ಆತ ಅಪ್ಪನ ಬದಲಿಗೆ ಕೇಸ್‌ನಲ್ಲಿ ಸಿಕ್ಕಿಬಿದ್ದಿದ್ದ. ಹೀಗಾಗಿ ಆರೆನ್ನೆನ್ ತನ್ನ ಮಗನ ಮಾಫಿ ಸಾಕ್ಷಿ ಮಾಡಿದ್ದ. ಒಮ್ಮೆ ಸಿಬಿಐ ಕಚೇರಿಗೆ ಮಯೂರ ಹೋದಾಗ ಹಿತ್ತಲಮಕ್ಕಿ ಹೆಂಡತಿ ಆತನ ಮೇಲೇರಿ ಹೋಗಿದ್ದರು. ಅದಕ್ಕೂ ಮೊದಲು ಅಂಕೋಲೆ ಪೇಟೆಯಲ್ಲಿ ಹಿತ್ತಲಮಕ್ಕಿ ಮಗ ವೇದಾಂತ್ ಮತ್ತು ಆರೆನ್ನೆನ್ ಮಗ ಮಯೂರ ಹೊಡೆದಾಡಿಕೊಂಡಿದ್ದರು. ತನ್ನಪ್ಪನ ನಂಬಿಸಿ ಕುತ್ತಿಗೆ ಕೊಯ್ದ ಆರೆನ್ನೆನ್‌ನ ಮುಗಿಸುವ ಕ್ರೂರ ನಿರ್ಧಾರಕ್ಕೆ ಬಹಳ ಹಿಂದೆಯೇ ವೇದಾಂತ್ ಬಂದುಬಿಟ್ಟಿದ್ದ.

ವೇದಾಂತ್‌ಗೆ ಹಿಂದೆ ಭೂಗತ ದೊರೆಗಳಾದ ರವಿ ಪೂಜಾರಿ ಮತ್ತು ಬನ್ನಂಜೆ ರಾಜಾ ಆರೆನ್ನೆನ್‌ಗೆ ಹಫ್ತಾಕ್ಕಾಗಿ ಬೆದರಿಸಿದ್ದು ಗೊತ್ತಿತ್ತು. ಬನ್ನಂಜೆಗೇ ಸುಪಾರಿ ಕೊಟ್ಟರೆ ತನ್ನ ಸೇಡು ತೀರಿಸಿಕೊಳ್ಳಬಹುದೆಂದು ಆತನಿಗೆ ಮನವರಿಕೆಯಾಯ್ತು. ಮಂಗಳೂರು ಮೂಲದ ಒಂದಿಷ್ಟು ಬನ್ನಂಜೆ ಕಡೆ ಹುಡುಗರನ್ನು ವೇದಾಂತ ಸಂಧಿಸಿದ. ನಿಮ್ಮ ಬಾಸ್‌ಗೆ ಹೇಳಿ ಆರೆನ್ನೆನ್ ತಲೆ ತೆಗೆಸಿದರೆ ಇನಾಮು ಕೊಡುವುದಾಗಿ ಹೇಳಿದ. ವಿದೇಶದಿಂದ ಬನ್ನಂಜೆ ರಾಜಾ ಗ್ರೀನ್‌ಸಿಗ್ನಲ್ ನೀಡಿದ. ಅದಕ್ಕೆ ವೇದಾಂತ ಕೆಲವೇ ಲಕ್ಷ ವ್ಯಯಿಸಿದ್ದನಷ್ಟೇ. ಅಪ್ಪ ಮಾಡಿಟ್ಟಿದ್ದ ಕೋಟಿ-ಕೋಟಿ ಕಳ್ಳ ಕಾಸಲ್ಲಿ ಒಂದು ಭಾಗ ಆತ ಆರೆನ್ನೆನ್ ಖತಂಗೆಂದು ತೆಗೆದಿಟ್ಟುಬಿಟ್ಟಿದ್ದ.

ಇಂಜಿನಿಯರಿಂಗ್ ಡ್ರಾಪ್‌ಔಟ್ ಹುಡುಗನಾದ ವೇದಾಂತ್ ಗೋವಾದ ಕಾಣಕೋಣ ಎಂಬಲ್ಲಿ ಬೀಚ್ ರೆಸಾರ್ಟ್ ನಡೆಸುತ್ತಾನೆ. ಅಲ್ಲಿಂದಲೇ ಆತ ಭೂಗತರೊಂದಿಗೆ ಕಾಂಟೆಕ್ಟ್ ಬೆಳೆಸಿದ್ದ. ಅದಕ್ಕವನ ತಾಯಿ ಮತ್ತು ತಂಗಿ ವಿನಂತಿಯ ಸಂಪೂರ್ಣ ಸಹಕಾರವೂ ಸಿಕ್ಕಿತ್ತು. ಮೂವರೂ ಸೇರಿ ತಮ್ಮ ಕುಟುಂಬ ಗಲ್ಲೇರಲ್ಲಿ ಕೈತೊಳೆದಂತೆ ಮಾಡಿದ್ದ ತಮ್ಮ ತಂದೆಯಿಂದ ಆರ್ಥಿಕ ಉನ್ನತಿ ಕಂಡಿದ್ದ ಆರೆನ್ನೆನ್ ರಕ್ತ ಹೀರಲು ಸಿದ್ಧರಾಗಿದ್ದರು. ಹತ್ಯೆಯ ದಿನ ಹಂತಕನೊಬ್ಬನ ಜತೆ ವೇದಾಂತ್ ಸತತ ಎರಡು ತಾಸು ಆರೆನ್ನೆನ್ ಚಲನವಲನದ ಬಗ್ಗೆ ಫೋನಲ್ಲಿ ಮಾತಾಡಿದ್ದ ಇದೆಲ್ಲ ಪೊಲೀಸರಿಗೆ ಮಾಹಿತಿ ಸಿಕ್ಕಿತ್ತು. ತಮ್ಮ ತಂದೆಯ ಸಿಬಿಐ ಬಂಧನಕ್ಕೆ ಪ್ರತೀಕಾರವಾಗಿ ವೇದಾಂತ-ವಿನಂತಿ ಮತ್ತವರ ತಾಯಿ ಆರೆನ್ನೆನ್ ಕೊಲೆಗೆ ಸುಪಾರಿ ನೀಡಿದ್ದಾರೆಂಬುದು ಪೊಲೀಸರಿಗೆ ಎರಡನೇ ಹಂತಕನನ್ನು ಹಿಡಿದಾಗಲೇ ಖಾತ್ರಿಯಾಗಿ ಹೋಗಿತ್ತು.

ಸುಪಾರಿದಾರರ ಬಂಧನಕ್ಕೆ ಪೊಲೀಸರು ಆರು ತಂಡ ರಚಿಸಿಕೊಂಡಿದ್ದರು. ಇದರಲ್ಲಿ ಒಂದು ತಂಡ ಕಳೆದ ಮಂಗಳವಾರ (31.12.2013) ತಡರಾತ್ರಿ ಬೆಂಗಳೂರಲ್ಲಿದ್ದ ವಿನಂತಿಯನ್ನು ಕಸ್ಟಡಿಗೆ ಪಡೆದರೆ, ಅಂದೇ ಹೈದರಾಬಾದ್‌ನಲ್ಲಿ ತಲೆ ಮರೆಸಿಕೊಂಡಿದ್ದ ವೇದಾಂತ್‌ನನ್ನು ಮತ್ತೊಂದು ಪೊಲೀಸ್ ತಂಡ ವಶಕ್ಕೆ ತೆಗೆದುಕೊಂಡಿದೆ. ಇವರ ತಾಯಿ (ಹಿತ್ತಲಮಕ್ಕಿ ಹೆಂಡತಿ) ಬಂಧನಕ್ಕೂ ಪೊಲೀಸರು ತಯಾರಿ ನಡೆಸಿದ್ದಾರೆ. ಆಕೆ ತಲೆ ಮರೆಸಿಕೊಂಡಿದ್ದಾರೆ. ಅಷ್ಟೇನೂ ಟ್ರೈಂಡ್ ಅಲ್ಲದ ಆರೆನ್ನೆನ್ ಹಂತಕರು ಮಾಡಿಕೊಂಡ ಅವಾಂತರದಿಂದ ಸುಪಾರಿದಾರ ಹಿತ್ತಲಮಕ್ಕಿ ಕುಟುಂಬ ಬೇಗನೇ ಸಿಕ್ಕಿಬಿದ್ದಿದೆ. ಅಂಕೋಲೆಯ ಇಕ್ಕಟ್ಟಾದ ರಸ್ತೆಯಲ್ಲಿ ಆರೆನ್ನೆನ್ ಹತ್ಯೆ ಬಳಿ ಆದ ಟ್ರಾಫಿಕ್ ಜಾಮ್‌ನಲ್ಲಿ ತಮ್ಮ ಓಮ್ನಿ ವಾರಿ ಪರಾರಿಯಾಗಲು ಹಂತಕರಿಗೆ ಸಾಧ್ಯವಾಗಿರಲಿಲ್ಲ. ಹೀಗಾಗಿ ರಸ್ತೆಯಲ್ಲಿ ಯದ್ವಾತದ್ವಾ ಓಡಿದ ಹಂತಕರಲ್ಲಿ ಒಬ್ಬನಿಗೆ ಆರೆನ್ನೆನ್ ಗನ್‌ಮ್ಯಾನೇ ಶೂಟ್‌ಔಟ್ ಮಾಡಿದ್ದ. ಇನ್ನೊಬ್ಬನನ್ನು ಸಾರ್ವಜನಿಕರೆ ಹಿಡಿದು-ಹೊಡೆದು ಪೊಲೀಸರಿಗೊಪ್ಪಿಸಿದ್ದರು. ಇನ್ನಿಬ್ಬರನ್ನು ಬಂಧಿತನ ಸಹಾಯದಿಂದ ವಶಕ್ಕೆ ಪಡೆದ ಪೊಲೀಸರ ಕೆಲಸ ಸಲೀಸಾಗಿ ಮುಗಿದಿದೆ.

ಪೊಲೀಸರು ಹಿತ್ತಲಮಕ್ಕಿ ಕುಟುಂಬದ ಬಂಧನವನ್ನು ಅಧಿಕೃತವಾಗಿನ್ನೂ ಘೋಷಿಸಿಲ್ಲ. ಆರೆನ್ನೆನ್‌ರ ವೈಕುಂಠ ಸಮಾರಾಧನೆ (4.1.2014) ಮುಗಿಯುವುದನ್ನೇ ಖಾಕಿ ಪಡೆ ಕಾಯುತ್ತಿದೆ. ಆರೋಪಿಗಳ ಬಂಧನದ ಸುದ್ದಿ ಹಬ್ಬಿದರೆ ಅಂಕೋಲೆಯಲ್ಲಿ ದಾಂಧಲೆ ಆಗಬಹುದೆಂಬ ಆತಂಕ ಪೊಲೀಸರದು. 'ಶೂರತನ'ಕ್ಕೆ ಹೆಸರಾದ ನಾಡವರಲ್ಲಿ ಗ್ಯಾಂಗ್‌ವಾರ್ ಆಗುವ ಅನುಮಾನ ಮೂಡಿದೆ. ಒಟ್ಟನಲ್ಲಿ ಅದಿರು ಅವ್ಯವಹಾರ ಕಳ್ಳರ ಬಳಗವನ್ನೇ ಒಡೆದು ಚೆಂಡಾಡುತ್ತಿದೆ. ಹಿತ್ತಲಮಕ್ಕಿ ಕುಟುಂಬದ ಅದಿರು ಆಧಾರಿತ ಸೇಡು ಆರೆನ್ನೆನ್‌ಗೆ ಸಾವಾಯ್ತು; ಭ್ರಷ್ಟಾಚಾರವೇ ವೃತ್ತಿ ಬದುಕಿನ ನೀತಿ ಮಾಡಿಕೊಂಡಿದ್ದ ದರೋಡೆ ಹಿತ್ತಲಮಕ್ಕಿಯ ದುಡ್ಡಿನ ದಾಹ ಆತನ ಇಡೀ ಕುಟುಂಬವನ್ನು ಜೈಲು ಪಾಲಾಗಿಸಿದೆ!

ಅಂಕೋಲೆಯ ಅದಿರು ಧೂಳು ಮತ್ತು ಬೇಲೇಕೇರಿ ಸಮುದ್ರದಲ್ಲಿ ಇನ್ನೆಷ್ಟು ರಕ್ತತರ್ಪಣ ಆದೀತು? ಇದೇ ಈಗ ಕರಾವಳಿಯಲ್ಲಿ ಭೀಭತ್ಸ ಚರ್ಚೆ ಸಂಗತಿ!!

■ ವರದಿಗಾರ

K

ಪಡಿಸುವುದು ಅಮೆರಿಕದ ಜನ್ಮಸಿದ್ಧ ಹಕ್ಕು
ಉದ್ದಕ್ಕೂ ಅಮೆರಿಕ ನಡೆದುಕೊಂಡಿದೆ. ಆದರೆ
ರಣದ ಒಳಸುಳಿ ಬೇರೆಯೇ ಇದೆ.
ಕದಲ್ಲಿ ಕರ್ತವ್ಯದಲ್ಲಿರುವ ತನ್ನ ಅಧಿಕಾರಿಗಳ
ದವರನ್ನು ನೇಮಿಸಿಕೊಡುವ ವಿಚಾರದಲ್ಲಿ
ಂದಲೂ ಭಾರತ ಸರ್ಕಾರವೇ ಖುದ್ದಾಗಿ
ಉಲ್ಲಂಘಿಸುತ್ತಾ ಬಂದಿದೆ ಎಂಬುದು ಇದೀಗ
ದೆ. ಸರ್ಕಾರದ ಅಧಿಕೃತ ಅಧಿಕಾರಿಗಳ
ಲ್ಲೇ ಎರಡು ಪತ್ರಗಳಿಗೆ ಸಹಿ ಮಾಡಿಸಲಾಗುತ್ತದೆ.
ದಲ್ಲಿ ವೀಸಾಗೆ ಅನ್ವಯವಾಗುವಂತೆ ಹೆಚ್ಚಿನ
ನಮೂದಿಸಿದ್ದರೆ, ಮತ್ತೊಂದರಲ್ಲಿ ವಾಸ್ತವದಲ್ಲಿ
ವ ವೇತನವನ್ನು ನಮೂದಿಸಲಾಗಿರುತ್ತದೆ. ಆದರೆ
ಪತ್ರವನ್ನೂ ಬಡಪಾಯಿ ಮನೆಗೆಲಸದವರಿಗೆ
ಲ್ಲವನ್ನೂ ಅಧಿಕಾರಿಗಳು ತಮ್ಮ ವಶದಲ್ಲೇ
ರುತ್ತಾರೆ. ಮಾತ್ರವಲ್ಲ, ಮನೆಗೆಲಸದವರನ್ನು
ಸ್ವಾತಂತ್ರ್ಯದಲ್ಲೇ ಉಳಿಸಿಕೊಳ್ಳಲು ವೀಸಾ,
ರ್ಟ್ ಮುಂತಾದ ದಾಖಲೆಗಳನ್ನೂ ತಮ್ಮ
ಟ್ಟುಕೊಂಡಿರುತ್ತಾರೆ.
ಈ ದಂಧೆಯ ಅಸಲಿ ಮುಖ. ಆದರೆ ಭಾರತ
ಈಗಿನ ವಾದ ಹೇಗಿದೆ ನೋಡಿ. 'ಸದರಿ
ಭಾರತ ದೇಶದ ರಾಯಭಾರ ಕಚೇರಿಗೆ
ದ ಇಬ್ಬರು ಸಿಬ್ಬಂದಿಗಳ ನಡುವಿನ
ರುವುದರಿಂದ ಈ ಪ್ರಕರಣವನ್ನು ಭಾರತದ
ಗೆ ಅನುಗುಣವಾಗಿ ಬಗೆಹರಿಸಬೇಕು'
ಅದರ ವಾದ. ಹಾಗಾದರೆ ಸಂಗೀತಾ ರಿಚರ್ಡ್

ಎಂಬ ಮಹಿಳೆ ಭಾರತ ಸರ್ಕಾರದ ಸಿಬ್ಬಂದಿಯೇ? ಆಕೆಯನ್ನು ಯಾವಾಗ ಅಪಾಯಿಂಟ್ ಮಾಡಿಕೊಳ್ಳಲಾಯ್ತು? ಹಾಗಿದ್ದರೆ ಎರಡೆರಡು ಖೊಟ್ಟಿ ಒಪ್ಪಂದ ಪತ್ರಗಳಿಗೆ ಸಹಿಹಾಕಿಸಿಕೊಂಡು, ಪಾಸ್‌ಪೋರ್ಟ್ ಕಸಿದು ಇಟ್ಟುಕೊಳ್ಳುವ ಪ್ರಮೇಯ ಅಧಿಕಾರಿಗಳಿಗೆ ಯಾಕಿತ್ತು? ಇಂಥಾ ಯಾವ ಪ್ರಶ್ನೆಗೂ ಸದ್ಯ ಸರ್ಕಾರದ ಬಳಿ ಉತ್ತರವಿಲ್ಲ.

ಮತ್ತೊಂದು ಪ್ರಮುಖವಾದ ಅಂಶ ಕನಿಷ್ಟ ವೇತನ ಕಾನೂನಿಗೆ ಸಂಬಂಧಿಸಿದ್ದು.


ಅಮೆರಿಕದ ಕಾನೂನಿನ ಪ್ರಕಾರ ಕನಿಷ್ಟ ವೇತನ ಪ್ರತಿ ಗಂಟೆಗೆ 9.75 ಡಾಲರ್‌ಗಳು! ಇಂದಿನ ವಿನಿಮಯ ದರದಲ್ಲಿ ಸುಮಾರು 595 ರೂಪಾಯಿಗಳು! 595x8 ಗಂಟೆ ಎಂದರೆ ದಿನಕ್ಕೆ 4760 ರೂ. ತಿಂಗಳಿಗೆ 1,42,800 ರೂಪಾಯಿ! ಈ ಹಿನ್ನೆಲೆಯಲ್ಲೇ ಮನೆಗೆಲಸದಾಕೆಗೆ ಸುಮಾರು 2,75,000 ವೇತನ ಕೊಡುತ್ತಿರುವುದಾಗಿ ದೇವಯಾನಿ ಘೋಷಿಸಿಕೊಂಡಿದ್ದರು.

ಆದರೆ ತಮಾಷೆಯ ಸಂಗತಿಯೇನೆಂದರೆ ರಾಯಭಾರಿಯಂಥ ಉನ್ನತ ಹುದ್ದೆಯಲ್ಲಿರುವ ಸ್ವತಃ ದೇವಯಾನಿಯೇ ಅಷ್ಟೊಂದು ವೇತನ ಪಡೆಯುತ್ತಿಲ್ಲ! ವಾಸ್ತವದಲ್ಲಿ ಮನೆಗೆಲಸದಾಕೆಗೆ ಕೊಡುತ್ತಿದ್ದದ್ದು ತಿಂಗಳಿಗೆ 600 ಡಾಲರ್ ಮಾತ್ರ!

ಇಂಥಾ ಹುಳುಕು ಕೇವಲ ದೇವಯಾನಿ ಮತ್ತು ಸಂಗೀತಾ ನಡುವಿನ ವಿವಾದಕ್ಕೆ ಮಾತ್ರ ಸೀಮಿತವಾಗಿ ಉಳಿದಿಲ್ಲ, ಪಾಶ್ಚಿಮಾತ್ಯ ದೇಶಗಳಲ್ಲಿ ಕೆಲಸ ಮಾಡುತ್ತಿರುವ ನೂರಾರು ಭಾರತೀಯ ಅಧಿಕಾರಿಗಳು ಕೆಲಸದ ಆಳುಗಳನ್ನು ನಡೆಸಿಕೊಳ್ಳುತ್ತಿರುವ ಅ(ನ)ಧಿಕೃತ ನೀತಿಯೇ ಆಗಿದೆ.

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ದೇಶಪಾಂಡೆ ಎಂಟ್ರಿ!



ಉತ್ತರ ಕನ್ನಡದ ಸರ್ವಶಕ್ತ ರಾಜಕೀಯ 'ಡಾನ್' ದೇಶಪಾಂಡೆ ಅಂಕೋಲೆಯ ಶೂಟೌಟ್ ತನಿಖೆಯಲ್ಲಿ ತುಂಬಾ ನಾಜೂಕಾಗಿ ಕೈಯಾಡಿಸುತ್ತಿರುವ ವಾಸನೆ ಈಗ ದಶದಿಕ್ಕಿಗೆ ಹಬ್ಬಿದೆ.

ನಾಡವ ಸಮಾಜದ ಭ್ರಷ್ಟ ಅಧಿಕಾರಿಗಳಿಗೂ-ದೇಶಪಾಂಡೆಗೂ ಲಾಗಾಯ್ತಿನಿಂದಲೂ ಗಾಢವಾದ ನಂಟದೆ. ಆ ಚೋರ ಬಚಾಯಿಸುತ್ತಾ ದೇಶಪಾಂಡೆ ಬಂದಿದ್ದಾರೆ. ಈಗಲೂ ಆತ ಅದಿರುಗಳ್ಳ ಎಸಿಎಫ್ ನರೇಂದ್ರ ಹಿತ್ತಲಮಕ್ಕಿ ಬಗ್ಗೆ ಕರುಣೆ ತೋರಿಸುತ್ತಿದ್ದಾರೆ. "ಆಗಿದ್ದು ಆಗಿಹೋಗಿದೆ... ಸ್ಥಳೀಯರನ್ನು ಆರೆನ್ನೆನ್ ಕೇಸ್‌ನಲ್ಲಿ ಫಿಕ್ಸ್ ಮಾಡಬೇಡಿ.... ಭೂಗತ ಡಾನ್-ಡಾಕೂಗಳ ಮೇಲಷ್ಟೇ ತನಿಖೆ ಕೇಂದ್ರೀಕೃತ ಆಗಿರಲಿ..." ಎಂದು ಜಿಲ್ಲಾ ಉಸ್ತುವಾರಿ ಮಂತ್ರಿ ದೇಶಪಾಂಡೆ ಪೊಲೀಸರಿಗೆ ತಾಕೀತು ಮಾಡಿದ್ದಾರಂತೆ. ಹೀಗಾಗಿ ಪೊಲೀಸರು ನಿಧಾನ ಹೆಜ್ಜೆ ಇಡುತ್ತಿದ್ದಾರೆ. ಕೈಕಟ್ಟಿ ಹಾಕಿದಂತೆ ಕೊಸರಾಡುತ್ತಿದ್ದಾರೆ.

ದೇಶಪಾಂಡೆ ಶಿಫಾರಸಿಗೆ ಎಸಿಎಫ್ ಹಿತ್ತಲಮಕ್ಕಿ ಫ್ಯಾಮಿಲಿ ಮೇಲಿನ ಸಿಂಪಥಿ ಕಾರಣವೋ? ಆರೆನ್ನೆನ್ ಮೇಲಿನ ಬೇಸರ ಕಾರಣವೋ? ಇದೀಗ ಉತ್ತರ ಕನ್ನಡದಲ್ಲಿ ಮಿಲಿಯನ್ ಡಾಲರ್ ಒಗಟಾಗಿದೆ!


ಹೆಚ್.ಡಿ. ಕೋಟೆ ತಾಲೂಕಿನ ಚಿಕ್ಕಬರಗಿ ಗ್ರಾಮದ ಸಮೀಪದ ಜಮೀನಿನಲ್ಲಿ ಮೃತಪಟ್ಟ ಹಿನ್ನೆಲೆಯಲ್ಲಿ ಸ್ಥಳದಲ್ಲಿ ಸೇರಿರುವ ಗ್ರಾಮಸ್ಥರನ್ನು ಉದ್ದೇಶಿಸಿ ಮುಖಂಡರು ಮಾತನಾಡುತ್ತಿರುವುದು


ಹೆಚ್.ಡಿ. ಕೋಟೆ ತಾಲೂಕಿನ ಚಿಕ್ಕಬರಗಿ ಗ್ರಾಮದ ಸಮೀಪದ ಜಮೀನಿನಲ್ಲಿ ಹುಲಿ ದಾಳಿಗೆ ಮೃತಪಟ್ಟ ಬಸಪ್ಪನ ಪತ್ನಿ ಸ್ಥಳಕ್ಕೆ ಆಗಮಿಸಿದಾಗ ಎಸ್‌ಪಿ ಅಭಿನವ ಖರೆ, ಕೈ ಹಿಡಿದುಕೊಂಡು ಬರುತ್ತಿರುವ ಚಿತ್ರ


ಹೆಚ್.ಡಿ. ಕೋಟೆ ತಾಲೂಕಿನ ಚಿಕ್ಕಬರಗಿ ಗ್ರಾಮದಲ್ಲಿ ಹುಲಿ ದಾಳಿಗೆ ಮೃತಪಟ್ಟ ಹಿನ್ನೆಲೆಯಲ್ಲಿ ಗ್ರಾಮಸ್ಥರು ಅರಣ್ಯ ಇಲಾಖೆ ಕಚೇರಿಗೆ ಬೆಂಕಿ ಹಾಕಿದ್ದರಿಂದ ಬೆಲೆ ಬಾಳುವ ಮರ ಮತ್ತು ದಾಖಲೆ ಪತ್ರಗಳು ಸುಟ್ಟು ಹೋಗಿರುವುದು.



ನರಭಕ್ಷಕನಾ ನರಹಂತಕನಾ?

ಹಸಿದ ಹುಲಿ ಕುಪಿತ ಭೂಮಾತೆ!

ಹುಲಿ ಹಸಿದಿದೆ, ಕೆರಳಿದೆ, ಕಂಗಾಲಾಗಿದೆ. ಮನುಷ್ಯ ಪ್ರಪಂಚದ ಕಣ್ಣಿಗದು ಅಪರಾಧಿ, ಕೊಲೆಗಡುಕ, ನರಭಕ್ಷಕ (!). ಕಾಡಿನಂಚಿನ ಅಷ್ಟೂ ಹಳ್ಳಿಹಾಡಿಗಳ ಗ್ರಾಮಸ್ಥರು ಅದರ ವಿರುದ್ಧ ರೊಚ್ಚಿಗೆದ್ದಿದ್ದಾರೆ. ಅದನ್ನು ಕಂಡಲ್ಲಿ ಗುಂಡಿಕ್ಕಿ ಕೊಲ್ಲಿ ಎಂಬುದು ಅವರ ಒಕ್ಕೊರಲ ಹಕ್ಕೊತ್ತಾಯ. ಪತ್ರಿಕೆ- ಮಾಧ್ಯಮಗಳಂತೂ ಪ್ರತಿನಿತ್ಯ ಅದರ ಹಾವಳಿ (!) ಕುರಿತೇ ಸುದ್ದಿ ಪ್ರಕಟಿಸುತ್ತಿವೆ. ಇದೆಲ್ಲದರ ಪ್ರತಿಫಲವೆಂಬಂತೆ ಅರಣ್ಯಮಂತ್ರಿ ರಮಾನಾಥ್ ರೈ ಹುಲಿಯನ್ನು ಕಂಡಲ್ಲಿ ಗುಂಡಿಕ್ಕಿ ಕೊಲ್ಲಿ ಎಂದು ಫರ್ಮಾನು ಜಾರಿಗೊಳಿಸಿದ್ದಾರೆ. ಪ್ರಶ್ನೆಯೆಂದರೆ ನರಸಾಮ್ರಾಜ್ಯದ ವಿರುದ್ಧದ ತನ್ನ ಅಳಿವುಉಳಿವಿನ ಅಂತಿಮ ಹೋರಾಟದಲ್ಲಿ ಹುಲಿ ಉಳಿಯುತ್ತಾ, ಮಡಿಯುತ್ತಾ?


ಕಳೆದೆರಡು ತಿಂಗಳುಗಳಿಂದ ಹುಲಿ ಬೇಟೆಗೆಂದು ಅರಣ್ಯ ಇಲಾಖೆ ಇನ್ನಿಲ್ಲದಂತೆ ತಲೆಕೆಡಿಸಿಕೊಂಡಿದೆ. ಬಂಡೀಪುರ ರಾಷ್ಟ್ರೀಯ ಅಭಯಾರಣ್ಯದ ಡಿಸಿಎಫ್ ಕಾಂತರಾಜ್ ನೇತೃತ್ವದ ಹುಲಿ ಶಿಕಾರಿ ತಂಡ ಹಿಂಡುಗಟ್ಟಲೆ ಆನೆಗಳ ಸಮೇತ ಕಾಡಿಗಿಳಿದಿದೆ. ಡಿಸೆಂಬರ್ 5 ರಂದು ಸೆರೆಸಿಕ್ಕ ಹುಲಿಯೇ ನರಭಕ್ಷಕನಾ ಅಥವಾ ಬೇರೆ ಯಾವುದೋ ಕಿಲಾಡಿ ಹುಲಿ ಸದ್ದಿಲ್ಲದೆ ಒಬ್ಬೊಬ್ಬರನ್ನಾಗಿ ಗ್ರಾಮಸ್ಥರನ್ನು ಮುಗಿಸುತ್ತಿದೆಯೆ ಎಂಬುದಕ್ಕೂ ಸ್ಪಷ್ಟ ಉತ್ತರವಿಲ್ಲ. ಇಲ್ಲಿಗೆ ವಾರದ ಹಿಂದೆ ಅಂದರೆ ಡಿಸೆಂಬರ್ 27 ರಂದು ಬಂಡೀಪುರ ಕಾಡಿನ ಮದ್ದೂರು ಕಾಲೋನಿಯ ಐವತ್ತೈದರ ಮುದುಕ ಜವರಯ್ಯನೂ ಸೇರಿದಂತೆ ಈತನಕ ಹುಲಿಗೆ ಬಲಿಯಾದವರ ಒಟ್ಟು ಸಂಖ್ಯೆ ಐದು!

ಬಹುಶಃ ಸ್ವಾತಂತ್ರ್ಯ ಪೂರ್ವದ ಕೆನೆತ್ ಅಂಡರ್‌ಸನ್ ಕತೆಗಳಲ್ಲಷ್ಟೇ ಓದಿ ತಿಳಿದಿದ್ದ ನರಭಕ್ಷಕ ಹುಲಿಗಳ ಭಯಾನಕ ವೀಗ ಬಂಡಿಪುರ ಕಾಡಿನಲ್ಲಿ ಪುನಾವತರಣಗೊಂಡಿದೆ. ಇತ್ತೀಚಿಗೆ ದೇಶ ಕಂಡ ಪಶು-ಮನುಷ್ಯ ಸಂಘರ್ಷಗಳ ಪೈಕಿ ಈಗ ನಾಗರಹೊಳೆ ಮತ್ತು ಬಂಡೀಪುರ ಕಾಡುಗಳಲ್ಲಿ ನಡೆಯುತ್ತಿರುವುದು ಅತ್ಯಂತ ವಿಶಿಷ್ಟ, ಬರ್ಬರ ಮತ್ತು ಅತೀ ದೊಡ್ಡ ನಾಗರಿಕ-ಪ್ರಾಕೃತಿಕ ಸಂಘರ್ಷ!

ಮೊದಲ ಬಲಿ

ಇದು ಶುರುವಾಗಿದ್ದು ಕಳೆದ ನವೆಂಬರ್‌ನಲ್ಲಿ. ಹೆಗ್ಗಡದೇವನಕೋಟೆ ಮತ್ತು ಗುಂಡ್ಲುಪೇಟೆಯನ್ನಾವರಿಸಿದ ಬಂಡೀಪುರ ಮತ್ತು ನಾಗರಹೊಳೆ ಕಾಡುಗಳ ನಡುವಿನ ಸೋಲಿಗರ ಹಾಡಿಗಳ ಕುರಿ, ಕೋಳಿಗಳನ್ನಷ್ಟೇ ಮೊದಮೊದಲು ಬೇಟೆಯಾಡುತ್ತಿದ್ದ ಹುಲಿರಾಯ ಮೊದಲ ಬಾರಿಗೆ ಮನುಷ್ಯನ ಮೇಲೆ ಕೈಹಾಕಿದ್ದು 2013ರ ನವೆಂಬರ್ 27ರಂದು. ಬಂಡೀಪುರ ಅರಣ್ಯವಲಯದ ನಡಹಾಡಿಯ ಬಸವರಾಜು ಎಂಬ ದನಗಾಹಿಯನ್ನು ಸದ್ದಿಲ್ಲದೆ ಹೊಡೆದು ಮುಗಿಸಿದ ಹುಲಿ ಆತನ ಹೆಣವನ್ನು ಎಳೆದಾಡಿತ್ತು. ಬಸವರಾಜು ಹುಲಿಗೆ ಬಲಿಯಾಗಿದ್ದೇ ತಡ, ರೊಚ್ಚಿಗೆದ್ದ ಕಾಡಿನಂಚಿನ ಹಳ್ಳಿಗಳ ಗ್ರಾಮಸ್ಥರೆಲ್ಲ ಮಾರಕಾಸ್ತ್ರಗಳನ್ನು ಹಿಡಿದು ಕಾಡಿಗೆ ನುಗ್ಗಿದರಾದರೂ ಹುಲಿ ಮಾತ್ರ ಸಿಗಲೇ ಇಲ್ಲ. ತಮ್ಮ ದಂಡು ದಾಳಿಯನ್ನು ಕಂಡೇ ಹುಲಿ ಪರಾರಿಯಾಗಿರಬೇಕೆಂಬ ಗ್ರಾಮಸ್ಥರ ಮೂರ್ಖತನಕ್ಕೆ ನಿಸರ್ಗ ತನ್ನದೇ ಶೈಲಿಯಲ್ಲಿ ಉತ್ತರ ಕೊಡುತ್ತದೆಯೆಂಬ ಕನಿಷ್ಠ ತಿಳಿವಳಿಕೆ ಕೂಡ ಅವರಿಗಿರಲಿಲ್ಲ.

ಇದಾಗಿ ಎರಡನೇ ದಿನಕ್ಕೆ ಅಂದರೆ ನವೆಂಬರ್ 28ರಂದು ಎಲ್ಲರ ನಿರೀಕ್ಷೆ ಲೆಕ್ಕಾಚಾರವನ್ನೆಲ್ಲ ಹುಲಿ ತಲೆಕೆಳಗು ಮಾಡಿತ್ತು. ನಡಹಾಡಿಯಿಂದ ಸರಿಸುಮಾರು ಐದು ಕಿ.ಮಿ. ದೂರದ ಸೀಗೆಹಾಡಿಯ ಕಾಡಿಗೆ ಹೋಗಿದ್ದ ಸೋಲಿಗರ ಚಲುವ ಎಂಬ 35ರ ಯುವಕನನ್ನು ಬಡಿದು ಕೊಂದಿತ್ತು. ಇಲ್ಲೂ ಅಷ್ಟೆ ಎಲ್ಲೋ ಒಂದೆರಡು ಕಡೆ ಹೆಣದ ಮಾಂಸ ಕಿತ್ತು ಬಂದಿತ್ತೇ ಹೊರತು ಶವ ಇಂಥವನದ್ದೇ ಎಂದು ಗುರುತಿಸುವಂತಿತ್ತು. ಇದು ಬಂಡೀಪುರ ಕಾಡಿನಲ್ಲಿ ನಡೆದ ಎರಡನೇ ಬಲಿ.


ಅರಣ್ಯಾಧಿಕಾರಿ ಕಾಂತರಾಜು

ಅಲ್ಲಿಗೆ ಹುಲಿಯೊಂದು ನರಭಕ್ಷಕವಾಗಿದೆಯೆಂದೇ ಲೆಕ್ಕ ಹಾಕಿದ ಪತ್ರಿಕೆಗಳು 'ಬಂಡೀಪುರದ ನರಭಕ್ಷಕ' ಎಂದೇ ವಿಶೇಷ ಶೀರ್ಷಿಕೆ ಕೊಟ್ಟು ಬರೆಯತೊಡಗಿದವು. ಇದನ್ನು ಸಮರ್ಥಿಸುವಂತ ಇನ್ನೂ ಭಯಾನಕ ದುರಂತವೊಂದು ಇದಾಗಿ ಕೇವಲ 24 ಗಂಟೆಗಳೊಳಗೆ ಸಂಭವಿಸಿತ್ತು. ಅದು ನವೆಂಬರ್ 29ರ ಅಪರಾಹ್ನ. ಬಲಿಯಾದವನು ಫಾರೆಸ್ಟ್ ಗಾರ್ಡ್ ಸುರೇಶ್ ಎಂಬ 27ರ ಯುವಕ. ಹೆಗ್ಗಡದೇವನಕೋಟೆಯ ಬಂಡೀಪುರ ಅರಣ್ಯದ ವ್ಯಾಪ್ತಿಯ ಬಳ್ಳೆ ಮೂರ್ಕಲ್ ಅರಣ್ಯ ಠಾಣೆಯ ಗಾರ್ಡ್ ಸುರೇಶ್ ತನ್ನಿಬ್ಬರು ಸೋಲಿಗ ಸಹಾಯಕರೊಂದಿಗೆ ಕಾಡು ಹೊಕ್ಕವನು ಏಕಾಏಕಿ ಎದುರಾದ ಹುಲಿರಾಯನಿಗೆ ಬಲಿಯಾಗಿದ್ದ.

ಬಲಿಯಾದ ಫಾರೆಸ್ಟ್ ಗಾರ್ಡ್


ಹುಲಿ ಬೇಟೆಗಿಳಿದ ಅರಣ್ಯ ಸಿಬ್ಬಂದಿ.


ಹೆಚ್.ಡಿ. ಕೋಟೆ ತಾಲೂಕಿನ ಚಿಕ್ಕಬರಗಿ ಗ್ರಾಮದಲ್ಲಿ ಹುಲಿ ದಾಳಿಗೆ ಮೃತಪಟ್ಟ ಬಸಪ್ಪನ ತಲೆಭಾಗವನ್ನು ತಿಂದಿರುವುದು ಮತ್ತು ಬಲಗಾಲಿನ ತೊಡೆಭಾಗ ತಿಂದಿರುವುದನ್ನು ಕಾಣಬಹುದು



ಜವರಯ್ಯನೆಂಬ ಲೇಟೆಸ್ಟ್ ಬಲಿಯ ನಿಗೂಢ

ಡಿಸೆಂಬರ್ ಐದರಂದು ಅರಣ್ಯಾಧಿಕಾರಿ ಕಾಂತರಾಜು ಸೆರೆ ಹಿಡಿದ ಗಾಯಾಳು ಹುಲಿಯೇ 'ನರಹಂತಕ ವ್ಯಾಘ್ರ' ಎಂಬ ವಾದವನ್ನು ತಲೆಕೆಳಗು ಮಾಡಿದ್ದು ಡಿಸೆಂಬರ್ 27ರ ದುರಂತ. ಈ ಹಿಂದೆ ಹೆಗ್ಗಡದೇವನ ಕೋಟೆ ವ್ಯಾಪ್ತಿಯ ಬಂಡೀಪುರ ಕಾಡಿನ ಹಾಡಿಗಳ ಸುತ್ತಮುತ್ತ ನಡೆದ ನಾಲ್ಕು ನರಬೇಟೆಗಳಿಗೆ ಹೋಲಿಸಿದರೆ ಇದು ಬೇರೆಯದೇ ರೀತಿಯ ನರಹತ್ಯೆ.

ಗುಂಡ್ಲುಪೇಟೆ ತಾಲ್ಲೂಕು ಮದ್ದೂರು ಕಾಲೋನಿಯ ಐವತ್ತೈದರ ಜವರಯ್ಯ ಡಿಸೆಂಬರ್ 27ರಂದು ಬಂಡೀಪುರ ಕಾಡು ಹೊಕ್ಕವನು ಮತ್ತೆ ಪತ್ತೆಯಾಗಿದ್ದು ರಕ್ತಸಿಕ್ತ ಹೆಣವಾಗಿ. ತನ್ನ ಸಹಚರರಾದ ಶಿವಪ್ಪ ಮತ್ತು ಮರಿ ಮಾದಯ್ಯ ಎಂಬಿಬ್ಬರ ಜೊತೆ ಹುಲಿ ಅಭಯಾರಣ್ಯ ಹೊಕ್ಕ ಜವರಯ್ಯನ ಮೇಲೆ ಇದ್ದಕ್ಕಿದ್ದ ಹಾಗೆ ಹುಲಿ ದಾಳಿಯಿಕ್ಕಿದೆ. ಓಡಿ ಬಂದ ಶಿವಪ್ಪ ಮತ್ತು ಮರಿಮಾದಯ್ಯ ಅರಣ್ಯ ಇಲಾಖೆಯ ತಂಡ ಕಟ್ಟಿಕೊಂಡು ವಾಪಸ್ಸು ಬಂದು ಹುಡುಕಾಡಿದರೆ ಸಿಕ್ಕಿದ್ದು ಜವರಯ್ಯನ ಹೆಣ.

ಅರ್ಧಂಬರ್ಧ ತಿಂದಂತಿದ್ದ ಜವರಯ್ಯನ ಹೆಣದ ಪಕ್ಕದಲ್ಲೇ ಆತ ಕಾಡಿಗೆ ನುಗ್ಗಿ ಕಡಿದಿದ್ದ ಬಿದಿರು ಗಳಗಳ ರಾಶಿಯಿತ್ತು, ಕಡಿಯಲು ಒಯ್ದಿದ್ದ ಮಚ್ಚು ಪಕ್ಕದಲ್ಲೇ ಬಿದ್ದಿತ್ತು. ನಾಗರಹೊಳೆ ಹುಲಿ ಅಭಯಾರಣ್ಯದ ಸರಹದ್ದಿನಿಂದ 1 ಕಿ.ಮೀ. ಒಳಕ್ಕೆ ಕಾನೂನುಬಾಹಿರವಾಗೇ ಪ್ರವೇಶಿಸಿದ್ದ ಜವರಯ್ಯನ ತಂಡ ಬಿದಿರುಗಳನ್ನು ಕಡಿದದ್ದು ಕೂಡ ಅಪರಾಧವಾಗಿತ್ತು. ಟೊಮೊಟೋ ಗಿಡಗಳನ್ನು ಎತ್ತಿಕಟ್ಟಲೆಂದು ಬಳಸುವ ಬಿದಿರು ಕಡ್ಡಿಗಳಿಗಾಗಿ ಕಾಡು ಹೊಕ್ಕ ಜವರಯ್ಯನ ಸಾವು ಹುಲಿಯಿಂದಾಗಿಯೇ ಸಂಭವಿಸಿತ್ತೆಂಬುದಕ್ಕೂ ನಿಕರ ಸಾಕ್ಷ್ಯಾಧಾರಗಳಿರಲಿಲ್ಲ. ಕಾನೂನುಪ್ರಕಾರ ರಕ್ಷಿತಾರಣ್ಯ ಹೊಕ್ಕಿದ್ದೇ ಆತನ ತಪ್ಪಾಗಿದ್ದರಿಂದ ಸರ್ಕಾರದ ಯಾವುದೇ ಪರಿಹಾರಕ್ಕೂ ಜವರಯ್ಯ ಲಾಯಕ್ಕಾಗಿರಲಿಲ್ಲ.

ಸತ್ತೋನು ಸತ್ತ ಕನಿಷ್ಠ ಪರಿಹಾರವಾದರೂ ಸಿಗಲಿ ಎಂದು ಸುತ್ತಮುತ್ತಲ ಹಾಡಿಗಳ ಸೋಲಿಗರೆಲ್ಲ ಅರಣ್ಯಾಧಿಕಾರಿಗಳಿಗೆ ದುಂಬಾಲು ಬಿದ್ದ ಫಲವಾಗಿ ಕಾಡಿನ ನಡುವೆ ಸತ್ತಿದ್ದ ಜವರಯ್ಯನ ಹೆಣವನ್ನು ಕಾಡಿನ ಸರಹದ್ದಿನಿಂದ ಹೊರಕ್ಕೆ ತಂದು ಮಹಜರ್ ನಡೆಸಲಾಯಿತು. ಹುಲಿ ದಾಳಿಗೆ ಬಲಿಯಾದಂತೆ ಕತೆ ಕಟ್ಟಿ ಎಫ್‌ಐಆರ್ ಕೂಡ ದಾಖಲಿಸಲಾಯ್ತು. ಅದು ಸತ್ತ ಜವರಯ್ಯನ ಕುಟುಂಬಕ್ಕೆ ಕನಿಷ್ಠ ಸರ್ಕಾರಿ ಪರಿಹಾರವಾದರೂ ಸಿಗಲೆಂದು ಅರಣ್ಯಾಧಿಕಾರಿಗಳು ತೋರಿಸಿದ್ದ ದಯೆಯಾಗಿತ್ತು.

ವಾಸ್ತವವಾಗಿ ಹುಲಿ ರಕ್ಷಿತಾರಣ್ಯದ ಗಡಿ ಉಲ್ಲಂಘಿಸಿದ್ದೇ ಜವರಯ್ಯನ ಅಪರಾಧವಾಗಿತ್ತು. ಅರಣ್ಯ ಇಲಾಖೆಯ ದಾಖಲೆಗಳೇ ಹೇಳುವಂತೆ ಜವರಯ್ಯ ಓರ್ವ ಪಳಗಿದ್ದ ಕಾಡುಗಳ್ಳ. ಈ ಹಿಂದೆ ಕಲ್ಲು ಪಾಚಿ ಕದ್ದು ಸಾಗಿಸಿದ್ದು ಮತ್ತೊಮ್ಮೆ ಬೊಂಬು ಕಡಿದು ಸಾಗಿಸುವಾಗಲೇ ಸಿಕ್ಕಿಬಿದ್ದು ಒಂದಲ್ಲ ಎರಡು ಬಾರಿ ಜೈಲಿಗೆ ಹೋಗಿ ಬಂದಿದ್ದ. ಈತನ ...

ತನ ಜೊತೆ ಹೊರಟಿದ್ದ ಸೋಲಿಗರಿಬ್ಬರು ಹುಲಿ ದ್ದೂ ಬಿದ್ದು ಓಡಿಬಂದಿದ್ದಾರೆ. ಅವರಿಗೆ ಕೇಳಿಸಿದ್ದು ಘರ್ಜನೆ ಮತ್ತು ಫಾರೆಸ್ಟ್ ಗಾರ್ಡ್ ಸುರೇಶನ ಮಾತ್ರ. ಕೆಲವೇ ಕ್ಷಣಗಳಲ್ಲಿ ಸುರೇಶನ ಆರ್ತನಾದ ಮೌನವಾಗಿತ್ತು. ಇದರ ಮಾರನೇ ದಿನ ಅಂದರೆ 30ರಂದು ಆನೆ ಹಿಂಡು, ತುಪಾಕಿ ದಂಡಿನ ಸುರೇಶನ ಕಳೇಬರದ ಹುಡುಕಾಟಕ್ಕಿಳಿದ ಅರಣ್ಯ ಧಿಕಾರಿ ಕಾಂತರಾಜ್ ಪಡೆಗೆ ಪೊದೆಯೊಳಗೆ ದ್ದು ಸುರೇಶನ ನಜ್ಜುಗುಜ್ಜಾದ ಅವಶೇಷ.

ತೆಯ ಮಾಂಸಖಂಡ ಮಾತ್ರವೇ ಕಿತ್ತು ಬಂದಿತ್ತು. ಕ್ತವಾಗಿತ್ತಾದರೂ ಇಡೀ ದೇಹ ಹಾಗೇ ಉಳಿದಿತ್ತು. ದೆಸಿದ ಸ್ಥಳದಿಂದ 200 ಮೀಟರ್ ದೂರದ ಳಕ್ಕೆ ಸುರೇಶನನ್ನು ಹುಲಿ ಎಳೆದೊಯ್ದಿತ್ತಾದರೂ ತಿನ್ನದೇ ಹಾಗೇಕೆ ಬಿಟ್ಟು ಹೋಗಿತ್ತೆಂಬುದೇ ವಾಗಿತ್ತು. ಅಲ್ಲಲ್ಲಿ ಕಚ್ಚಿದ, ತರಚಿದ ಳಿದ್ದವು. ತೊಡೆಯ ಖಂಡ ಮಾತ್ರವೇ ಕಿತ್ತು . ಹಾಗಾದರೆ ಹುಲಿ ದಾಳಿ ನಡೆಸಿದ್ದೇಕೆ, ಕೆ, ಪೊದೆಯೊಳಕ್ಕೆ ಎಳೆದೊಯ್ದಿದ್ದೇಕೆ ಮತ್ತು ಬಿಟ್ಟಿದ್ದಾದರೂ ಏಕೆ?

ಗಿದ್ದೇ ತಡ ದೇಶಾದ್ಯಂತ ಬಂಡೀಪುರದ ನರಭಕ್ಷಕನ ಚಿತ್ರವಿಚಿತ್ರ ಸುದ್ದಿಗಳು ಪ್ರಕಟಗೊಂಡವು. ಇಷ್ಟೆಲ್ಲಕ್ಕೂ ಇಲಾಖೆಯ ನಿರ್ಲಕ್ಷವೇ ಕಾರಣವೆಂಬಂತೆ ಜನ ದ್ದರು. ನರಭಕ್ಷಕ ಹುಲಿಯನ್ನು ಬೇಟೆಯಾಡುವಂತೆ ಚಿವ ರಮಾನಾಥ್ ರೈ ವಿಶೇಷ ಸಭೆ ಕರೆದು ಕಾರಿಗಳಿಗೆ ಆದೇಶ ಕೊಟ್ಟುಬಿಟ್ಟರು.

ತನ್ನ ಕುರಿತಾದ ಮನುಷ್ಯ ಪ್ರಪಂಚದ ಇಷ್ಟೆಲ್ಲಾ ಳು ಪಾಪ ಹುಲಿರಾಯನಿಗಾದರೂ ಹೇಗೆ ಲು ಸಾಧ್ಯ? ಅದರದ್ದು ಹೊಟ್ಟೆ ಸಂಕಟ ಮತ್ತು ವಿರುದ್ಧದ ಹೋರಾಟ. ದಟ್ಟ ಕಾಡಿನ ನಡುವಿನಿಂದ ಬಿಟ್ಟಂತೆ ಕಾಡಿನಂಚಿನ ಬುಡಕಟ್ಟು ಹಾಡಿಗಳ ತ್ತ ಓಡಾಡುತ್ತ ತನ್ನ ವಿಲಕ್ಷಣ ಬೇಟೆಯಲ್ಲಿ ಗಿದ್ದ ಹುಲಿರಾಯನಿಗೆ ಈ ಬಾರಿ ಎದುರಾಗಿದ್ದು ರಗಿಯ 56ರ ವೃದ್ಧ ಬಸವರಾಜು ವನಕೋಟೆ ತಾಲ್ಲೂಕು ಚಿಕ್ಕ ಬರಗಿ ಕೂಡ ರ ಕಾಡಿನ ನಡುವಿನ ಸೋಲಿಗರ ಹಾಡಿಯೆ. ತೆಗಾರ ಸಿದ್ದಪ್ಪನ ಜೊತೆ ದನ ಮೇಯಿಸುತ್ತ ಬಂದಿದ್ದ ಬಸವರಾಜುವನ್ನು ಕಂಡಿದ್ದೇ ಂದರಲ್ಲಿ ಅವಿತು ಕೂತಿದ್ದ ಹುಲಿ ದಾಳಿಯಿಟ್ಟಿದೆ. ದ್ದವನು ಚೀರಾಡುತ್ತಲೇ ಪರಾರಿಯಾಗಿದ್ದಾನೆ. ಆದರೆ ದ ಬಸವರಾಜು ನಿರಾಯಾಸವಾಗಿ ಹುಲಿ ಬಾಯಿಗೆ ದ್ದನೆ.

ನಾಲ್ಕನೇ ಬಲಿ

ಲ್ಲ ಅಷ್ಟೇ; ಒಂದಷ್ಟು ದೂರ ಬಸವರಾಜುವನ್ನು ದ್ದು ಹುಲಿ ಆತನನ್ನು ತಿಂದ ಲಕ್ಷಣಗಳಿರಲಿಲ್ಲ. ಮಾಂಸ ಕಿತ್ತು ಬಂದಿತ್ತು. ಕೈ, ಕಾಲುಗಳ ಮಾಂಸ ತ್ತು ಬಂದಿತ್ತಾದರೂ ಅದು ಎಳೆದೊಯ್ಯುವಾಗ ಬಂದಂತಿತ್ತೇ ಹೊರತು ತಿನ್ನುವಂತಿದ್ದರೆ ಸ್ಥಳವಷ್ಟೇ ಉಳಿಯಬೇಕಿತ್ತು. ಇದು ಹುಲಿರಾಯನ

▶▶ 12

ದ ಮೇಲೆ ಬಂಧಿತನಾಗಿದ್ದ, ಆತನದ್ದೇ ಪಾಪಕ್ಕೆ ಬಲಿಯಾಗಿದ್ದು ನಿಸರ್ಗ ಸಹಜ ನ್ಯಾಯದಂತೆಯೇ ಕೆಂದರೆ ಹೆಗ್ಗಡದೇವನಕೋಟೆಯಲ್ಲಿ ನರಹಂತಕ ಬೋನಿಗೆ ಬಿದ್ದ ನಂತರವೇ ಜವರಯ್ಯ ಬೇರೊಂದು ಬಲಿಯಾಗಿದ್ದ. ಇಲ್ಲಿಗೆ ಕೆಲ ತಿಂಗಳುಗಳ ಹಿಂದೆ ಚಲನವಲನಕ್ಕೆಂದು ಅರಣ್ಯ ಇಲಾಖೆ ಕಾಡಿನಲ್ಲಿ ದ್ದ ರಹಸ್ಯ ಕ್ಯಾಮೆರಾಗಳು ಒಂದು ಮರಿಯನ್ನೂ ಒಟ್ಟು ಮೂರು ಹುಲಿಗಳ ಹಿಂಡೊಂದನ್ನು ದ್ದವು. ಈ ಪೈಕಿ ತಾಯಿ ಹುಲಿ ತನ್ನ ಮರಿ ಬಗ್ಗೆ ಭಾವುಕತೆಯೇಡಾಗಿರುತ್ತದೆ. ಯಾರೇ ಮನುಷ್ಯರನ್ನು ತನ್ನ ಮರಿಗೆ ಆಪತ್ತೆಂದೇ ಭಾವಿಸಿ ಸುತ್ತದೆ. ಜೊತೆಗೆ ಪ್ರಣಯಕ್ಕೆಂದು ಬಂದಿದ್ದ ಹುಲಿ ಬೇರೆ.

ಬೋಳುವಿಗೆ ಬಂದಿದ್ದ ಜವರಯ್ಯನ ತಂಡದಿಂದಾಗಿ ಈ ತಾಯಿ ಹುಲಿ ತನ್ನ ಮರಿಯನ್ನು ಕಾಪಾಡಲು ಟ್ಟಿತೆ?

ಸಾಧ್ಯತೆಗಳು ಕಮ್ಮಿಯೇ. ಏಕೆಂದರೆ ಈ ಹಿಂದೆ ಬಲಿಯಾದ ಬಂಡಿಪುರ ಕಾಡಿಗೂ ಈಗ ದುರಂತ ದ ನಾಗರಹೊಳೆ ಕಾಡಿಗೂ ಅರಣ್ಯ ಮಾರ್ಗದಲ್ಲೇ 30 ಕಿ.ಮೀ. ಅಂತರವಿದೆ. ಯಾವುದೇ ಹುಲಿ ಆಚೆಗೆ ತನ್ನ ವಲಯ ವಿಸ್ತರಿಸುವುದಿಲ್ಲ. ಹಾಗೊಮ್ಮೆ ಹುಲಿಯೇ ಇಲ್ಲಿಗೂ ಬಂದಿದ್ದರೆ ಇಲ್ಲಿದ್ದ ದು ಬಿಡಬೇಕಿತ್ತು?

ಗಿ ಜವರಯ್ಯನನ್ನು ಕೊಂದಿದ್ದೇ ಬೇರೆ ಮತ್ತು ಮಂಗಿಸಿದ್ದೇ ಬೇರೆಯಾಗಿರಲೇಬೇಕು. ತನ್ನ [illegible] ಬಸವರಾಜುವನ್ನು, ಒಸರ್ಗ ಹುಲಿರೂಪ [illegible] ಎಂಬುದಕ್ಕೆ ಇದಕ್ಕಿಂತ ಬೇಕೆ?

ಲೋಕಾಯುಕ್ತದಲ್ಲೇ ಭ್ರಷ್ಟ ಇನ್ಸ್‌ಪೆಕ್ಟರ್
ಖದೀಮ ಕರಿಬಸವನಗೌಡ



ಇದು ಬೇಲಿಯೇ ಎದ್ದು ಹೊಲ ಮೇಯುತ್ತಿದ್ದ ಪ್ರಕರಣ.

ಕಳೆದ ಒಂಭತ್ತು ವರ್ಷದಿಂದ ಲೋಕಾಯುಕ್ತ ಸಂಸ್ಥೆಯಲ್ಲಿ ಇನ್ಸ್‌ಪೆಕ್ಟರ್ ಆಗಿ ಕೆಲಸ ಮಾಡಿದ್ದ ಕರಿಬಸವನಗೌಡನ ಮೇಲೇ ಈಗ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದಾರೆ.

ಅಲ್ಲಿ ಸಿಕ್ಕಿರುವ ಆಸ್ತಿಯ ಮೌಲ್ಯ ಎಷ್ಟು ಗೊತ್ತೆ? 10 ಕೋಟಿ ರೂಪಾಯಿಗಳು!

ಈ ಕರಿಬಸವನಗೌಡನ ಹೀನ, ಭ್ರಷ್ಟ ಚರಿತ್ರೆಯನ್ನು ಕೆದಕುತ್ತಾ ಹೋದರೆ ಅದೊಂದು ಮೆಗಾ ಸೀರಿಯಲ್ಲೇ ಆಗುವಂತಿದೆ. ಧರಂಸಿಂಗ್ ಸರ್ಕಾರದ ಅವಧಿಯಲ್ಲಿ ಲೋಕಾಯುಕ್ತ ಪೊಲೀಸ್ ಇನ್ಸ್‌ಪೆಕ್ಟರ್ ಆಗಿಬಂದ ಕರಿಬಸವನಗೌಡ ತನಗಿದ್ದ ಅಧಿಕಾರ ಬಲ ಬಳಸಿಕೊಂಡೇ ಭ್ರಷ್ಟ ಅಧಿಕಾರಿಗಳ ಸುಲಿಗೆ ಆರಂಭಿಸಿದ್ದ.

ಲೋಕಾಯುಕ್ತ ಪೊಲೀಸರು ನಡೆಸಲಿರುವ ದಾಳಿಯ ಬಗ್ಗೆ ಭ್ರಷ್ಟ ಅಧಿಕಾರಿಗಳಿಗೆ ಮೊದಲೇ ಮಾಹಿತಿ ನೀಡುವುದು, ದಾಳಿ ನಡೆದ ಪ್ರಕರಣಗಳಲ್ಲಿ ನಂತರ ಅಂತಹ ಭ್ರಷ್ಟರನ್ನು ರಕ್ಷಿಸಲು ಒಳದಾರಿಗಳನ್ನು ತೋರಿಸಿ ಬಚಾವು ಮಾಡುವುದು, ತನಗಾಗದವರ ವಿರುದ್ಧ 'ಲೋಕಾಯುಕ್ತ' ಎಂಬ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿ ಬಲಿ ಹಾಕುವುದು... ಹೀಗೆ ಒಂದು ದಶಕ ಕಾಲ ಲೋಕಾಯುಕ್ತ ಸಂಸ್ಥೆಗೇ ಗ್ರಹಣ ಹಿಡಿಸಿದ್ದ ಕರಿಬಸವನಗೌಡನ ಪಾಪದ ಕೊಡ ತುಂಬಿತ್ತು. ಮೊನ್ನೆ ಡಿಸೆಂಬರ್ 27 ನೇ ತಾರೀಖು ಕರ್ನಾಟಕದ ಒಂಭತ್ತು ಸ್ಥಳಗಳಲ್ಲಿ ಏಕಕಾಲಕ್ಕೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ಕರಿಬಸವನಗೌಡ ಕಟ್ಟಿಕೊಂಡಿದ್ದ ಭ್ರಷ್ಟ ಸಾಮ್ರಾಜ್ಯವನ್ನು ಪುಡಿಗಟ್ಟಿದ್ದಾರೆ. ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ, ಹಾವೇರಿ, ಗದಗ, ಬೆಳಗಾಂ, ಬಾದಾಮಿ ಮುಂತಾದೆಡೆ ನಡೆದ ಎಲ್ಲಾ ದಾಳಿಗಳೂ ಈ ಕರಿಬಸವನಗೌಡನಿಗೇ ಸಂಬಂಧಿಸಿದ್ದಾಗಿತ್ತು. ಕರ್ನಾಟಕ ಲೋಕಾಯುಕ್ತ ಇತಿಹಾಸದಲ್ಲೇ ಅದೇ ಸಂಸ್ಥೆಯಲ್ಲಿದ್ದ ನೌಕರನ ವಿರುದ್ಧ ನಡೆದಿರುವ ಬಹುದೊಡ್ಡ ದಾಳಿಯಾಗಿದೆ ಇದು.

ಮನೆಗೆ ಮಾರಿ ಭ್ರಷ್ಟರಿಗೆ ಉಪಕಾರಿ

ಲೋಕಾಯುಕ್ತ ಇನ್ಸ್‌ಪೆಕ್ಟರ್ ಆಗಿದ್ದುಕೊಂಡೇ ಲೋಕಾಯುಕ್ತ ಸಂಸ್ಥೆಗೆ ದ್ರೋಹ ಮಾಡುತ್ತಿದ್ದ ಕರಿಬಸವನಗೌಡ ಅದೆಂತಾ ಖದೀಮನೆಂದರೆ ಅದೇ ಸಂಸ್ಥೆಯೊಳಗೆ ಒಂದು ಭ್ರಷ್ಟರ ಗುಂಪನ್ನೇ ಕಟ್ಟಿಬೆಳೆಸಿದ್ದ. ಇವನು ಲೋಕಾಯುಕ್ತದಲ್ಲಿ ಕೆಲಸ ಮಾಡುತ್ತಿದ್ದ ಅವಧಿಯಲ್ಲಿ ಇವನು ಹ್ಯಾಂಡಲ್ ಮಾಡಿರುವ ಕೇಸುಗಳನ್ನೊಮ್ಮೆ ಪರಿಶೀಲಿಸಿದರೆ ಅಧಿಕಾರ ದುರುಪಯೋಗ, ಭ್ರಷ್ಟಾಚಾರ, ಸ್ವಜನಪಕ್ಷಪಾತ, ಕಾನೂನು ಉಲ್ಲಂಘನೆಯ ರಾಶಿರಾಶಿ ಮಾಹಿತಿ ಸಿಗುತ್ತದೆ.

ದಾವಣಗೆರೆಯಲ್ಲೊಮ್ಮೆ ಬೆಟಗೇರಿ ಆಸ್ಪತ್ರೆಯ ವೈದ್ಯರೊಬ್ಬರ ಮೇಲೆ ಲಂಚದ ದೂರು ಬಂದು ಲೋಕಾಯುಕ್ತ ದಾಳಿಯಾದ ನಂತರವೂ ಆತನನ್ನು ರಕ್ಷಿಸಲು ಈ ಕರಿಬಸವ ತನ್ನ ಅಧಿಕಾರ ದುರ್ಬಳಕೆ ಮಾಡಿಕೊಂಡಿದ್ದ. ಹಾವೇರಿ ಜಿಲ್ಲೆಯಲ್ಲಿ ಶಿಗ್ಗಾಂವಿಯ ಆಶ್ರಯ ಮನೆ ಹಂಚಿಕೆಯಲ್ಲಿ ಪುರಸಭಾ ಮುಖ್ಯಾಧಿಕಾರಿ ವಿನೇಕರ್, ಇಂಜಿನಿಯರ್‌ಗಳು ತಲಾ 10 ಸಾವಿರ ಲಂಚ ಪಡೆದು ಅನರ್ಹರಿಗೆ 270 ಮನೆ ಹಂಚಿಕೆ ಮಾಡಿದ್ದರು. ಈ ಪ್ರಕರಣದಲ್ಲೂ ಕರಿಬಸವ ಡೀಲ್ ಕುದುರಿಸಿದ್ದನಾದರೂ ಲೋಕಾಯುಕ್ತದ ಹಿರಿಯ ನಿಷ್ಠಾವಂತ ಅಧಿಕಾರಿಗಳ ಕಾರಣದಿಂದಾಗಿ ಐದು ಮಂದಿ ಸಸ್ಪೆಂಡಾಗಿ ಮಿರ್ಜೆ ಎಂಬಾತ ಡಿಸ್‌ಮಿಸ್ ಆದ. 'ಲಂಕೇಶ್' ವರದಿಗಾರ ವಿನಯ್ ಹುರುಳಿಕುಪ್ಪಿ ಈ ಪ್ರಕರಣ ಬೆಳಕಿಗೆ ಬರಲು ಕಾರಣರಾಗಿದ್ದರು. 'ಲಂಕೇಶ್'ನಲ್ಲೂ ಕರಿಬಸವನಗೌಡನ ಭ್ರಷ್ಟಾಚಾರದ ಬಗ್ಗೆ ಆಗಲೇ ವರದಿಯೂ ಪ್ರಕಟವಾಗಿತ್ತು. ರಾಣೆಬೆನ್ನೂರಿನಲ್ಲೇ ಇಂಜಿನಿಯರ್ ಹರಮಗಟ್ಟಿ ಎಂಬುವವ ಸಿಮೆಂಟ್ ಅವ್ಯವಹಾರದಲ್ಲಿ ಸಿಕ್ಕಿ ಬಿದ್ದಾಗ ಈ ಕರಿಬಸವನಗೌಡ ಅವರ ವಿರುದ್ಧ ಕಾನೂನು ಕ್ರಮ ಜರುಗಿಸುವ ಬದಲಾಗಿ ಕಾನೂನಿನಿಂದ ಪಾರಾಗುವ ಒಳದಾರಿಗಳನ್ನು ತೋರಿಸಿ ಲಂಚ ತಿಂದು ಬಚಾವು ಮಾಡಿದ್ದ. ಆ ಇಂಜಿನಿಯರ್‌ನನ್ನು ಆಸ್ಪತ್ರೆಗೆ ಸೇರುವಂತೆ ಸಲಹೆ ನೀಡಿ ಬೇಲ್ ಸಿಗುವಂತೆ ಮಾಡಿ ಕೊನೆಗೆ ತನಿಖೆ ನಡೆಸಿದ ನಾಟಕವನ್ನು ಆಡಿ 'ಬಿ' ರಿಪೋರ್ಟ್ ಹಾಕಿಸಿದ್ದ.

10 ಕೋಟಿ ರೂ. ರೂಪಾಯಿ ಅಕ್ರಮ ಆಸ್ತಿ

ಲೋಕಾಯುಕ್ತ ಇನ್ಸ್‌ಪೆಕ್ಟರ್ ಆಗಿ 8 ವರ್ಷ ಕೆಲಸ ಮಾಡಿದ ಕರಿಬಸವನಗೌಡ ಈಗ ಗದಗ್‌ನಲ್ಲಿ ಹೆಸ್ಕಾಂ ಜಾಗೃತದಳದಲ್ಲಿ ಇನ್ಸ್‌ಪೆಕ್ಟರ್ ಆಗಿದ್ದಾನೆ. ಕಳೆದ ಹತ್ತು ವರ್ಷಗಳಲ್ಲಿ ಇವನು ಮಾಡಿರುವ ಆಸ್ತಿಯ ಮೌಲ್ಯ ಹತ್ತು ಕೋಟಿ ರೂಪಾಯಿಗೂ ಜಾಸ್ತಿ ಇದೆ.

ಇವನ ತಾಯಿ ಶಾಂತವೀರಮ್ಮನ ಹೆಸರಿನಲ್ಲಿ ಹಡಗಲಿ ಹಾಗೂ ಹರಪನಹಳ್ಳಿ ತಾಲ್ಲೂಕಿನಲ್ಲಿ 26 ಎಕರೆ ಜಮೀನು ಖರೀದಿಸಿದ್ದಾನೆ. ಹಡಗಲಿ ತಾಲ್ಲೂಕು ದೇವಗೊಂಡನಹಳ್ಳಿ ಗ್ರಾಮದ ಸರ್ವೆ ನಂ. 40/ಬಿ ಯಲ್ಲಿ 2.38 ಎಕರೆ, ಸ.ನಂ. 137/ಬಿ ಯಲ್ಲಿ 11.10 ಎಕರೆ, ಸ.ನಂ. 42/ಬಿ ಯಲ್ಲಿ 2.10 ಎಕರೆ, ಸರ್ವೆ ನಂ. 3 ಎಕರೆ, ಸರ್ವೆ ನಂ. 270 ರಲ್ಲಿ 3 ಎಕರೆ, ಹೀಗೆ 26 ಎಕರೆ ನೀರಾವರಿ ಜಮೀನು ಖರೀದಿಸಿದ್ದಾನೆ. ಒಂದು ಎಕರೆಯ ಬೆಲೆ ತಲಾ ಎಂಟು ಲಕ್ಷ ರೂಪಾಯಿ ಇದೆ.

ಕರಿಬಸವನಗೌಡನ ಸೋದರ ವಿಶ್ವನಾಥಗೌಡ ಎಂಬುವನು ಬಿಜಾಪುರದಲ್ಲಿ ಫುಡ್ ಇನ್ಸ್‌ಪೆಕ್ಟರ್ ಆಗಿದ್ದು ಆಹಾರ ಇಲಾಖೆಯಲ್ಲಿ ಮೇಯುತ್ತಿರುವ ಹೆಗ್ಗಣವಾಗಿದ್ದಾನೆ. ಇವನ ಹೆಂಡತಿ ಕವಿತಾಳ ಹೆಸರಿನಲ್ಲೂ ಕರಿಬಸವ ಹಾಗೂ ವಿಶ್ವನಾಥಗೌಡ ಇಬ್ಬರೂ ಕಳ್ಳ ಹಣದಿಂದ ಸಾಕಷ್ಟು ಆಸ್ತಿ ಖರೀದಿಸಿದ್ದಾರೆ.

ಈ ಕವಿತಾ ಹರಪನಹಳ್ಳಿ ತಾಲ್ಲೂಕು ಕಸಬಾ ಹೋಬಳಿ ಹರಪನಹಳ್ಳಿ ಗ್ರಾಮದ ಸರ್ವೆ ನಂ. 32 ರಲ್ಲಿ 7 ಎಕರೆ ಜಮೀನು ಖರೀದಿಸಿದ್ದಾಳೆ. ಹರಪನಹಳ್ಳಿ ಟೌನ್ ವಾರ್ಡ್ ನಂಬರ್ 1 ರಲ್ಲಿ ಸೈಟ್ ನಂಬರ್ 364, 365 ರಲ್ಲಿ 80x50 ಅಡಿ ನಿವೇಶನ ಖರೀದಿಸಿ ದೊಡ್ಡ ಮನೆ ಹಾಗೂ ಬಸವೇಶ್ವರ ಟ್ರೇಡರ್ಸ್, ಮಲ್ಲಿಕಾರ್ಜುನ ಟ್ರೇಡರ್ಸ್ ಹೆಸರಲ್ಲಿ ಸಿಮೆಂಟ್ ಮಾರಾಟ ದಂಧೆ ನಡೆಸುತ್ತಿದ್ದಾರೆ.

ಕರಿಬಸವನಗೌಡ ಹಾಗೂ ವಿಶ್ವನಾಥರ ಅಕ್ರಮ ಹಣ ಸಂಪಾದನೆಯ ವೇಗ ಅದೆಷ್ಟಿತ್ತೆಂದರೆ ಹರಪನಹಳ್ಳಿಯಲ್ಲಿ ಜಮೀನು, ಸೈಟು ಖರೀದಿಸಿಯಾದ ನಂತರ ಕದ್ದ ಹಣದೊಂದಿಗೆ ಬೆಂಗಳೂರಿಗೂ ಬಂದರು. ರಾಜರಾಜೇಶ್ವರಿನಗರದಲ್ಲಿ 60x40 ಅಡಿಯ ಸೈಟು ಹಾಗೂ ವಿಶ್ವೇಶ್ವರಯ್ಯ ಲೇಔಟ್‌ನಲ್ಲಿ 80x50 ಅಳತೆಯ ಸೈಟು ತಗೊಂಡಿದ್ದಾರೆ. ಇದಲ್ಲದೆ ಶಿವಮೊಗ್ಗದ ಗಾಡಿಕೊಪ್ಪದಲ್ಲಿ 80x50 ಅಳತೆಯ ಸೈಟು ನುಂಗಿದ್ದಾರೆ. ಅಲ್ಲದೆ ಕರಿಬಸವನಗೌಡ ತಾನು ಕಮಾಯಿಸುತ್ತಿದ್ದ ಹಣದಲ್ಲಿ ನೆಂಟಕೋಗುಂಡಿ ದ್ಯಾಮಣ್ಣನೆಂಬ (ಚಿತ್ರದುರ್ಗ ಮಾಜಿ ಡಿಸಿಸಿ ಬ್ಯಾಂಕ್ ಅಧ್ಯಕ್ಷ) ಹೆಸರಲ್ಲಿ 23 ಎಕರೆ ಭೂಮಿ ಕೊಂಡಿದ್ದಾನೆ. ಕರಿಬಸವನಗೌಡನ ಹೆಂಡತಿ ಸ್ಮಿತಾ ಎಂಬುವಳ ಹೆಸರಲ್ಲೂ ಹೊಸಪೇಟೆ ತಾಲ್ಲೂಕು ನಾಗೇನಹಳ್ಳಿಯಲ್ಲಿ 20 ಎಕರೆ ಜಮೀನು ಖರೀದಿಸಿದ್ದಾನೆ.... ಹೀಗೆ ಹೇಳುತ್ತಾಹೋದರೆ ಕರಿಬಸವನಗೌಡ ಅಕ್ರಮ ಆಸ್ತಿ ಪಟ್ಟಿ ಒಂದು ಫರ್ಲಾಂಗಿನಷ್ಟಾಗುತ್ತದೆ.


ಒಂದು ಖೇದಕರ ವಿಚಾರವೇನೆಂದರೆ ಈ ಕರಿಬಸವ ಲೋಕಾಯುಕ್ತ ಇನ್ಸ್‌ಪೆಕ್ಟರ್ ಆಗಿದ್ದುಕೊಂಡೇ ಇಷ್ಟು ಅಕ್ರಮಗಳನ್ನು ನಡೆಸುತ್ತಿದ್ದಾಗಲೂ ಅವನಿಗೆ ಲಗಾಮು ಹಾಕಲು ಆಗಿರಲಿಲ್ಲ!

ಇದಕ್ಕೇನು ಕಾರಣ ಗೊತ್ತೆ?

ಲೋಕಾಯುಕ್ತರಲ್ಲೇ ಇದ್ದ ಕೆಲವು ಭ್ರಷ್ಟರು!

ಲೋಕಾಯುಕ್ತದೊಳಗೇ ಭ್ರಷ್ಟ ಮತ್ತು ನಿಷ್ಠುರ ಕಾಳಗ ಖತರ್‌ನಾಕ್ ಕರಿಬಸವನಗೌಡ ತಾನು ಲೋಕಾಯುಕ್ತದಲ್ಲಿದ್ದಷ್ಟೂ ಕಾಲ ಒಂದು ಭ್ರಷ್ಟರ ಗ್ಯಾಂಗ್ ಅನ್ನೇ ಕಟ್ಟಿಕೊಂಡಿದ್ದ. ದಾವಣಗೆರೆಯಲ್ಲಿ ಲೋಕಾಯುಕ್ತ ಸಬ್‌ಇನ್ಸ್‌ಪೆಕ್ಟರ್ ಆಗಿದ್ದ ಶ್ರೀನಿವಾಸ್ (ಇವನು ಬೆಂಗಳೂರು ಗ್ರಾಮಾಂತರದವನು), ಹಾವೇರಿಯಲ್ಲಿ ಈಗ ಇನ್ಸ್‌ಪೆಕ್ಟರ್ ಆಗಿರುವ ಜಿ. ಹರೀಶ್‌ರೆಡ್ಡಿ (ಬಳ್ಳಾರಿಯವನು) ಮುಂತಾದವರು ಕರಿಬಸವನ ಭ್ರಷ್ಟ ಟೀಂ ಸದಸ್ಯರಾಗಿದ್ದರು.

ಈ ಗುಂಪು ಬೆಂಗಳೂರು-ಮೈಸೂರು-ದಾವಣಗೆರೆ-ಬಳ್ಳಾರಿ-ಹಾವೇರಿ-ಗದಗ ಮುಂತಾದೆಡೆ ಲೋಕಾಯುಕ್ತದ



ಡಾ.ಡಿ.ಸಿ.ರಾಜಪ್ಪನವರ ವಿರುದ್ಧ ಸೇಡಿನ ದಾಳಿ

[illegible] ದಕ್ಷತೆಯಿಂದ ಕೆಲಸ ಮಾಡಿದ್ದ ಡಾ. ಡಿ.ಸಿ. ರಾಜಪ್ಪನವರ ಮೇಲೆ 2008 ರಲ್ಲಿ [illegible] ಲೋಕಾಯುಕ್ತ ದಾಳಿಯಾಗಿತ್ತು. [illegible] IPS [illegible]

[illegible] ಆಗುವಂತೆ ರದ್ದಿಗಳು [illegible] ಬಳಸಿಕೊಂಡಿದ್ದರು. [illegible]

[illegible] ಆಗಿದ್ದಾಗ ಯಾವಾಗ ದಾಳಿ, [illegible] ಕರಿಬಸವನಗೌಡ [illegible]

ನಿಷ್ಠಾವಂತ ಅಧಿಕಾರಿಗಳು ದಕ್ಷತೆಯಿಂದ ಕಾರ್ಯ ನಿರ್ವಹಿಸಲು ಬಿಡದೆ ಹೆಜ್ಜೆಹೆಜ್ಜೆಗೂ ಕಿರುಕುಳ ನೀಡುತ್ತಿತ್ತು. ದಾಳಿಯ ಬಗ್ಗೆ ಮೊದಲೇ ಮಾಹಿತಿ ನೀಡುವುದು. ದಾಳಿಯ ನಂತರ ಬಚಾವ್ ಆಗುವ ದಾರಿ ತೋರಿಸುವುದು. ತಾನೇ ತನಿಖೆ ನಡೆಸುವ ಅವಕಾಶ ಸಿಕ್ಕಾಗ ಭ್ರಷ್ಟರ ಪರವಾಗಿ ರಿಪೋರ್ಟ್ ಹಾಕುವುದು ಹಾಗೂ ಕೆಲವು ಭ್ರಷ್ಟ ರಾಜಕಾರಣಿಗಳಿಗೆ ಸಹಕರಿಸಲು ಒಪ್ಪದ ನಿಷ್ಠಾವಂತರಿಗೆ ಕಿರುಕುಳ ನೀಡುವುದೇ ಇವರ ನಿತ್ಯ ಕಾಯಕವಾಗಿತ್ತು.

ಈಗ ಇವೆಲ್ಲಕ್ಕೂ ಬ್ರೇಕ್ ಹಾಕುವ ಅವಕಾಶ ಲೋಕಾಯುಕ್ತಕ್ಕೆ ದೊರಕಿದೆ.

ಕರಿಬಸವನಗೌಡ ಲೋಕಾಯುಕ್ತ ಸಂಸ್ಥೆಗೆ [illegible] ತಂದಿದ್ದಾನೆ. ತನಗಿದ್ದ ಅಧಿಕಾರ ದುರ್ಬಳಕೆ ಮಾಡಿಕೊಂಡು ಹತ್ತು ಕೋಟಿ ರೂಪಾಯಿಗಳ ಅಕ್ರಮ ಆಸ್ತಿ ಗಳಿಸಿದ್ದಾನೆ. ಇದನ್ನು [illegible] ಮುಚ್ಚಿಗೋಲು ಹಾಕಿಕೊಳ್ಳುವುದರ ಜೊತೆಗೆ ಕರಿಬಸವನಗೌಡ ಜೈಲು ಸೇರುವಂತೆ ನೋಡಿಕೊಳ್ಳಬೇಕಾದ [illegible] ಲೋಕಾಯುಕ್ತ ಹಾಗೂ ಸರ್ಕಾರದ [illegible]

■ ವರದಿಗಾರ



ಕಸಾಪ ಮತ್ತು ಮಹಿಳೆ

ಸ್ತ್ರೀ ಭ್ರೂಣ ಹತ್ಯೆ-ಕೌಟುಂಬಿಕ ದೌರ್ಜನ್ಯ-ಅತ್ಯಾಚಾರ ದಿನನಿತ್ಯ ನಡೆಯುತ್ತಿದೆ. ಕನಿಷ್ಠ ಕೂಲಿಯಿಲ್ಲದ, ಉದ್ಯೋಗ ಪರಿಸರದಲ್ಲಿ ಸುರಕ್ಷತೆಯಿಲ್ಲದೆ, ವೇತನ ತಾರತಮ್ಯವನ್ನೆದುರಿಸುತ್ತ ಅಸಂಘಟಿತ ವಲಯದಲ್ಲಿ ಲಕ್ಷಾಂತರ ಮಹಿಳೆಯರು ದುಡಿಯುತ್ತಿದ್ದಾರೆ. ಮೀಸಲಾತಿಯ ಹೊರತಾಗಿಯೂ ರಾಜಕೀಯದಲ್ಲಿ ಕ್ರಿಯಾಶೀಲ ಮಹಿಳೆಯರ ಸಂಖ್ಯೆ ತುಂಬ ಕಡಿಮೆಯಿದೆ. ನ್ಯಾಯಾಲಯ, ಸರ್ಕಾರ, ರಕ್ಷಣಾ ವ್ಯವಸ್ಥೆ ವಿಜ್ಞಾನ-ತಂತ್ರಜ್ಞಾನಗಳು ಮಹಿಳಾ ಘನತೆಗೆ ಮುಳುವಾಗುವಂತೆ ವರ್ತಿಸುವಾಗ ಸಣ್ಣ ಆಕ್ರೋಶವೂ ಹುಟ್ಟಲಾಗದಷ್ಟು ಸಮಾಜ ಜಡಗೊಂಡಿದೆ.

ಇದರ ನಡುವೆಯೇ ಮಹಿಳಾ ಸಮುದಾಯ ಜಾಗೃತಗೊಳ್ಳತೊಡಗಿರುವ ಸ್ಪಷ್ಟ ಸೂಚನೆಗಳಿವೆ. ಸಾಮಾಜಿಕ ಮಹಿಳೆ ಕಾಣಿಸತೊಡಗಿದ್ದಾಳೆ. ಎಲ್ಲ ಕ್ಷೇತ್ರಗಳಲ್ಲಿ ಮಹಿಳೆ ತನ್ನ ಇರವನ್ನು ಸಾಬೀತುಪಡಿಸುತ್ತ, ಅನನ್ಯತೆಯನ್ನು ದಾಖಲಿಸುತ್ತ ಅಸ್ಮಿತೆಯ ಶೋಧದಲ್ಲಿದ್ದಾಳೆ. ವಿಶ್ವಾದ್ಯಂತ ಸ್ತ್ರೀವಾದಿ ದೃಷ್ಟಿಕೋನವು ಮಹಿಳಾ ಹಕ್ಕು ಜಾಗೃತಿ ಮತ್ತು ಹೋರಾಟವನ್ನು ಹುಟ್ಟುಹಾಕುತ್ತಿದೆ. ಅಷ್ಟೇ ಅಲ್ಲ, ಮಹಿಳಾ ದೃಷ್ಟಿಕೋನವು ಸಾಹಿತ್ಯ ಕ್ಷೇತ್ರವನ್ನೂ ಮರುಪೂರಣಗೊಳಿಸುತ್ತಿದೆ. ಕನ್ನಡದ ಮಟ್ಟಿಗೆ ಹೇಳುವುದಾದರೆ ಇತ್ತೀಚಿನ ದಶಕಗಳಲ್ಲಿ ಅನೇಕ ಸೂಕ್ಷ್ಮ ಬರಹಗಾರ್ತಿಯರಿಂದ ವಿಪುಲ, ವೈವಿಧ್ಯಮಯ ಹಾಗೂ ಮೌಲಿಕ ಕನ್ನಡ ಸಾಹಿತ್ಯ ರಚನೆಯಾಗಿದೆ.

ಹೀಗಿರುತ್ತ 1915ರಲ್ಲಿ ಹುಟ್ಟಿಕೊಂಡ ಕನ್ನಡ ಸಾಹಿತ್ಯ ಪರಿಷತ್ತು ಮಹಿಳೆಗೆ ಯಾವ ಸ್ಥಾನಮಾನ ನೀಡಿದೆ ಎಂದು ನೋಡಹೊರಟರೆ ಉಳಿದ ಪುರುಷಪಾರಮ್ಯದ ವ್ಯವಸ್ಥೆಗಳಿಗಿಂತ ಅದು ಏನೇನೂ ಭಿನ್ನವಾಗಿಲ್ಲ ಎನ್ನುವುದು ತಿಳಿದುಬರುತ್ತದೆ. ಕನ್ನಡ ಸಾಹಿತ್ಯವು ಮಹಿಳಾ ಭಾಗವಹಿಸುವಿಕೆಯಿಂದ ವೈವಿಧ್ಯ ಪಡೆದಿದ್ದು ಹೌದಾದರೂ ಶತಮಾನೋತ್ಸವ ಪೂರೈಸುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತು ರಾಜಕೀಯ ಕ್ಷೇತ್ರ ಹೇಗೋ ಹಾಗೆಯೇ ಮಹಿಳೆಯನ್ನು ತೀರಾ ಅವಜ್ಞೆಗೊಳಪಡಿಸಿದೆ.

ಈ ನೂರು ವರ್ಷಗಳಲ್ಲಿ ಕಸಾಪ 24 ಅಧ್ಯಕ್ಷರನ್ನು ಪಡೆದಿದ್ದು ಅದರಲ್ಲಿ ಒಬ್ಬೇ ಒಬ್ಬ ಮಹಿಳೆಯಿಲ್ಲ! ಮಹಿಳಾ ಅಧ್ಯಕ್ಷೆಯಿಲ್ಲದಿದ್ದರೇನು, ಅಖಿಲ ಭಾರತ ಸಮ್ಮೇಳನಗಳಲ್ಲಿ ಎಷ್ಟು ಮಹಿಳಾ ಅಧ್ಯಕ್ಷರಿದ್ದರು ಎಂದು ನೋಡಿದರೆ ಜಯದೇವಿ ತಾಯಿ ಲಿಗಾಡೆ ಮಂಡ್ಯದಲ್ಲಿ 1974ರಲ್ಲಿ ಅಧ್ಯಕ್ಷೆಯಾಗುವವರೆಗೆ ಮಹಿಳೆ ಕಾಯಬೇಕಾಯಿತು. ಅದಾದಮೇಲೆ ಇಲ್ಲಿಯವರೆಗೆ - ಎಂದರೆ 80 ಸಮ್ಮೇಳನಗಳಲ್ಲಿ ಒಟ್ಟು ನಾಲ್ವರು ಮಹಿಳೆಯರಷ್ಟೇ ಅಧ್ಯಕ್ಷ ಪದವಿ ಅಲಂಕರಿಸಿದ್ದಾರೆ! ಲಿಗಾಡೆಯವರಲ್ಲದೆ ಬಾಗಲಕೋಟೆಯ 68ನೇ ಸಮ್ಮೇಳನಕ್ಕೆ ಶಾಂತಾದೇವಿ ಮಾಳವಾಡ, ಮೂಡುಬಿದಿರೆಯ 71ನೇ ಸಮ್ಮೇಳನಕ್ಕೆ ಕಮಲಾ ಹಂಪನಾ ಹಾಗೂ ಗದಗಿನಲ್ಲಿ ನಡೆದ 76ನೇ ಸಮ್ಮೇಳನಕ್ಕೆ ಗೀತಾ ನಾಗಭೂಷಣ ಬಿಟ್ಟರೆ ಮತ್ತಾವ ಮಹಿಳೆಯೂ ಕಸಾಪ ಕಣ್ಣಿಗೆ ಬಿದ್ದಿಲ್ಲ. ಈಗಿನ ಕ.ಸಾ.ಪದ ಕಾರ್ಯಕಾರಿ ಸಮಿತಿ ನೋಡಿದರೆ ಅದರಲ್ಲಿರುವ 46 ಜನರಲ್ಲಿ ಕೇವಲ ಮೂವರು ಮಹಿಳೆಯರಷ್ಟೆ ಇದ್ದಾರೆ. 30 ಜಿಲ್ಲೆಗಳಲ್ಲಿ ಈಗಿನ ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಯಾದಿಯಲ್ಲಿ ಮಂಡ್ಯ ಜಿಲ್ಲೆಯಲ್ಲಿ ಮಾತ್ರ ಮಹಿಳೆಯಿದ್ದಾರೆ. ಅದೂ ಆಕೆ ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲಿ ಮೊತ್ತಮೊದಲ ಮಹಿಳಾ ಜಿಲ್ಲಾಧ್ಯಕ್ಷೆ ಎಂಬ ಮಾತೂ ಕೇಳಿಬಂದಿದೆ. ಒಂದು ಸಂಸ್ಥೆಯ ಸ್ವರೂಪದಲ್ಲಿಯೇ ಹೀಗಿದ್ದ ಮೇಲೆ ಇನ್ನು ಸಮ್ಮೇಳನಗಳು ಅದರ ಪ್ರತಿಬಿಂಬವಲ್ಲದೆ ಬೇರೇನಾಗಿರಲು ಸಾಧ್ಯ?

ಕನ್ನಡ ಸಾಹಿತ್ಯ ಪರಿಷತ್ತಿನ ವಾರ್ಷಿಕ ಸಮ್ಮೇಳನಗಳಲ್ಲೂ ಪುರುಷರದ್ದೇ ಮೇಲುಗೈ. ಮಡಿಕೇರಿ 80ನೇ ಸಮ್ಮೇಳನಕ್ಕೆ ಸಜ್ಜಾಗಿದೆ. ಸರ್ವಾನುಮತದ ಆಯ್ಕೆಯಾಗಿ ನಾ. ಡಿಸೋಜಾ ಅಧ್ಯಕ್ಷರಾಗಿದ್ದಾರೆ. ಈ ಸಲದ ಸಮ್ಮೇಳನದ ಆಮಂತ್ರಣ ಪತ್ರಿಕೆಯತ್ತ ಕಣ್ಣಾಡಿಸಿದರೆ ಮಹಿಳೆಯರು ತಮ್ಮ ಇಲ್ಲದಿರುವಿಕೆಯಿಂದಲೇ ಎದ್ದು ಕಾಣುತ್ತಾರೆ! ಉದ್ಘಾಟನಾ ಸಮಾರಂಭಕ್ಕೆ 24 ಜನ ವೇದಿಕೆಯ ಮೇಲಿರುತ್ತಾರೆ. ಅದರಲ್ಲಿ ಒಬ್ಬರೇ ಮಹಿಳೆ - ಅದೂ ಆಕೆ ಕನ್ನಡ ಸಂಸ್ಕೃತಿ ಇಲಾಖೆಯ ಸಚಿವೆ ಎಂಬ ಕಾರಣಕ್ಕೆ. ಮೂರು ದಿನದ ಸಮ್ಮೇಳನದಲ್ಲಿ ಮುಖ್ಯ ಹಾಗೂ ಸಮಾನಾಂತರ ವೇದಿಕೆಗಳಲ್ಲಿ ಒಟ್ಟು 16 ಗೋಷ್ಠಿಗಳು ನಡೆಯಲಿದ್ದು ಮಹಿಳಾ ಗೋಷ್ಠಿ ಅದರಲ್ಲಿ ಇಲ್ಲ. ಮಹಿಳಾ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಕೊಂಡ ಮಹಿಳೆಯರ ಭಾಗವಹಿಸುವಿಕೆ ನಗಣ್ಯವೆನಿಸುವಷ್ಟಿದೆ. ಯಾವುದೇ ಗೋಷ್ಠಿಯ ಅಧ್ಯಕ್ಷತೆಯನ್ನು ಮಹಿಳೆಗೆ ನೀಡಿಲ್ಲ. ಯಾವುದೇ ಗೋಷ್ಠಿಗೂ ಮಹಿಳೆ ಆಶಯ ಮಾತುಗಳನ್ನಾಡುತ್ತಿಲ್ಲ. ಎಲ್ಲೋ ಕೆಲ ಮಹಿಳೆಯರು ವಿಷಯ ಮಂಡನೆಯಲ್ಲಿ ಕಾಣುತ್ತಾರೆ. ವಿರಳವಾಗಿ ಸಭಾ ನಿರ್ವಹಣೆಯಲ್ಲಿ ಕಾಣಬರುತ್ತಾರೆ. 'ಕೊಡಗು ಜಿಲ್ಲೆಯ ಮುಂದಿನ ಸವಾಲುಗಳು', 'ಕನ್ನಡ ಸಾಹಿತ್ಯದಲ್ಲಿ ದಲಿತ ಸಂವೇದನೆ', 'ನೂರರ ಗಡಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು', 'ಕನ್ನಡ ಸಾಹಿತ್ಯ ಮತ್ತು ದೇಶೀಯತೆ' ಎಂಬ ಗೋಷ್ಠಿಗಳಲ್ಲಿ ಒಬ್ಬ ಮಹಿಳೆಯೂ ಇಲ್ಲ. ಸನ್ಮಾನ ಸಮಾರಂಭದಲ್ಲಿ 82 ಜನ ಸನ್ಮಾನ ಸ್ವೀಕರಿಸುತ್ತಿದ್ದು ಅದರಲ್ಲಿ 5 ಜನ ಮಾತ್ರ ಮಹಿಳೆಯರಿದ್ದಾರೆ. ಸಮಾರೋಪ ಸಮಾರಂಭದಲ್ಲಿ 21 ಜನರಲ್ಲಿ ಮೂವರು ಮಹಿಳೆಯರಿದ್ದಾರೆ. ಇಬ್ಬರು ಮಾಜಿ ಸಚಿವೆ ಮತ್ತು ಜಿಲ್ಲಾ ಪಂಚಾಯ್ತಿ ಸಿಇಓ ಎಂಬ ಕಾರಣಕ್ಕೆ ಇದ್ದಾರೆ. ಮುಖ್ಯ ಕವಿಗೋಷ್ಠಿಯ 28 ಕವಿಗಳಲ್ಲಿ 8 ಮಹಿಳೆಯರು, ಸಮಾನಾಂತರ ವೇದಿಕೆಯ 36 ಕವಿಗಳಲ್ಲಿ 4 ಮಹಿಳೆಯರು ಇದ್ದಾರೆ.

ಈ ಬಾರಿ ಭಾಷೆ-ಪರಿಸರ-ದಾಸ ಸಾಹಿತ್ಯ-ದೇಶೀಯತೆ-ವಿಜ್ಞಾನ ತಂತ್ರಜ್ಞಾನ-ಸಾಂಸ್ಕೃತಿಕ ಸಂಶೋಧನೆ-ಕನ್ನಡ ಸ್ಥಾನಮಾನದ ಕುರಿತು ಗೋಷ್ಠಿಗಳಿವೆ. ಆದರೆ ಮಹಿಳೆಯ ಯಾವ ಸಮಸ್ಯೆಯೂ ಗೋಷ್ಠಿಯೊಂದರಲ್ಲಿ ಚರ್ಚೆಗೊಳಪಡುವಷ್ಟು ಮಹತ್ವದ ವಿಷಯವೆನಿಸಲಿಲ್ಲವೆ? ಮಹಿಳಾ ಹೋರಾಟ, ಚಳವಳಿ, ಸಂಘಟನೆಗಳಲ್ಲಿರುವವರ ಜೊತೆ ಕನ್ನಡ ಸಾಹಿತ್ಯ-ಸಾಹಿತಿಗಳು ಗುರುತಿಸಿಕೊಳ್ಳುವುದು ಮುಖ್ಯವಲ್ಲವೆ? ಪರಕಾಯ ಪ್ರವೇಶ ಮಾಡಿ ತನ್ನದಲ್ಲದ ನೋವು, ಸಂಕಟಗಳನ್ನು ಅಕ್ಷರವಾಗಿ ಅಭಿವ್ಯಕ್ತಿಸಬಲ್ಲ ಸೂಕ್ಷ್ಮಜ್ಞ ಸಾಹಿತಿಗಳಲ್ಲೇ ಇಷ್ಟು ಲಿಂಗ ಅಸೂಕ್ಷ್ಮತೆ ಇದೆಯೆಂದಾದರೆ ಭಾರತೀಯ ಸಮಾಜ ಮಹಿಳೆಯನ್ನು 21ನೇ ಶತಮಾನದಲ್ಲಿ ಹೀಗೆ ನಡೆಸಿಕೊಳ್ಳುತ್ತಿರುವುದರಲ್ಲಿ ಏನಚ್ಚರಿಯಿದೆ?

ಇಂಥ ಪ್ರಶ್ನೆ ಎತ್ತಿದಕೂಡಲೇ ಕರ್ನಾಟಕ ಲೇಖಕಿಯರ ಸಂಘದತ್ತ ಬೊಟ್ಟುಮಾಡಿ ಅದರ ಸಮ್ಮೇಳನಗಳಲ್ಲಿ ಮಹಿಳಾ ವಿಷಯ ಕುರಿತೇ ಚರ್ಚೆ ಮಾಡಿ ಎಂಬ ಉತ್ತರ ಬರುವುದು ನಿರೀಕ್ಷಿತ. ಆದರೆ ನಮಗೆ ಬೇಕಿರುವುದು ಪ್ರತ್ಯೇಕ ಮಹಿಳಾ ಸಮ್ಮೇಳನಗಳೆಂಬ ಮಹಿಳಾ ಮೀಸಲಾತಿಯಲ್ಲ, ಬದಲಾಗಿ ಸರ್ವ ಕನ್ನಡಿಗರ ಸಮ್ಮೇಳನದಲ್ಲಿ ಕನ್ನಡತಿಯರಿಗೂ ಸಮಾನ ಅವಕಾಶ ಹಾಗೂ ಸಹಭಾಗಿತ್ವ ಸಿಗಬೇಕು. ಸರ್ವರ ಮನದಲ್ಲಿ ಮಹಿಳೆಗೆ ಸಮಾನ ಗೌರವ ದೊರೆಯಬೇಕು.

ಬಹುಶಃ 'ನೂರರ ಗಡಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು' ಗೋಷ್ಠಿಯ ಆಶಯ ಮಾತುಗಳನ್ನು ಮಹಿಳೆಯೊಬ್ಬಳು ಆಡಿದ್ದರೆ ಅರ್ಧಕ್ಕರ್ಧ ಜನಸಮುದಾಯ ಕಸಾಪವನ್ನು ಏನೆಂದು ಭಾವಿಸಿದೆ ಎಂದು ತಿಳಿಯುತ್ತಿತ್ತು. ಆದರೆ ಎಲ್ಲಿಯವರೆಗೆ ಧಾರ್ಮಿಕ ವ್ಯಕ್ತಿಗಳ ಇರುವಿಕೆಯೇ ದಿವ್ಯ ಸಾನ್ನಿಧ್ಯವೆಂದು ಕಸಾಪ ಬಗೆಯುವುದೋ ಅಲ್ಲಿಯವರೆಗೆ ಮಹಿಳೆಯನ್ನು ನಾಮಮಾತ್ರವಾಗಿ ಬಳಸಿಕೊಳ್ಳುವುದು ಮುಂದುವರೆಯುತ್ತದೆ.

ಮುಂಬರುವ ದಿನಗಳಲ್ಲಾದರೂ ಕಸಾಪ ತನ್ನ ಇಂಥ ಧೋರಣೆ ಬದಲಿಸಿಕೊಳ್ಳದೇ ಹೋದಲ್ಲಿ, ಸಮ್ಮೇಳನದ ಸ್ವರೂಪ ಬದಲಾಗದೇ ಹೋದಲ್ಲಿ ಪ್ರಸ್ತುತ ಬೀದರ ಜಿಲ್ಲೆಯ ಸೋದರಿಯರು ಹೇಗೆ ಮಹಿಳಾ ಸಾಹಿತ್ಯ ಸಮ್ಮೇಳನ ನಡೆಸುತ್ತಿದ್ದಾರೋ, ಅದೇ ಮೇಲ್ಪಂಕ್ತಿ ಅನುಸರಿಸಿ ಪ್ರತಿ ಜಿಲ್ಲೆಯ ಮಹಿಳೆಯರೂ ಕ್ರಿಯಾಶೀಲರಾಗಬಹುದು. ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ಈ ವಿಷಯದತ್ತ ಗಮನ ಹರಿಸಿ ಮಹಿಳಾ ಕನ್ನಡ ಸಾಹಿತ್ಯ ಪರಿಷತ್ತು ರಚನೆಯಾಗುವ ಒತ್ತಡವೂ ಹುಟ್ಟಿಕೊಳ್ಳಬಹುದು.

■ ಡಾ.ಎಚ್.ಎಸ್.ಅನುಪಮಾ

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಪರವಾಗಿ

ನರಭಕ್ಷಕನಾ?

11 ◀◀

ನಾಲ್ಕನೇ ಬಲಿ. ಬಸವರಾಜು ಹುಲಿಗೆ ಬಲಿಯಾಗಿದ್ದನ್ನು ಕೇಳಿ ಕೆರಳಿದ ಚಿಕ್ಕಬರಗಿ, ನಡಹಾಡಿ, ಸೀಗೇವಾಡಿ; ಇತ್ಯಾದಿ ಗ್ರಾಮಗಳ ರೈತರೆಲ್ಲಾ ರೊಚ್ಚಿಗೆದ್ದು ಅರಣ್ಯ ಇಲಾಖೆಯ ಕಚೇರಿಗೆ ದಾಳಿಯಿಟ್ಟರು. ರೈತರ ಆಕ್ರೋಶಕ್ಕೆ ಸಿಲುಕಿದ ಅರಣ್ಯ ಇಲಾಖೆಯ ಕಚೇರಿಯ ಪೀಠೋಪಕರಣಗಳೆಲ್ಲ ಪುಡಿಪುಡಿಯಾದವು. ಅರಣ್ಯ ಸಿಬ್ಬಂದಿಯ ವಾಹನಗಳಿಗೂ ಬೆಂಕಿ ಹಚ್ಚಲಾಯ್ತು.

ಇದರ ಬಿಸಿ ಯಾವ ಮಟ್ಟಗಿತ್ತೆಂದರೆ ಅರಣ್ಯ ಮಂತ್ರಿ ರಮಾನಾಥ್ ರೈ ಪತ್ರಿಕಾಗೋಷ್ಠಿ ಕರೆದಿದ್ದೇ ಹುಲಿಯನ್ನು ಕಂಡಿದ್ದೇ ಗುಂಡಿಕ್ಕಲು ಹೇಳಿದ್ದೇನೆಂದು ಡೈಲಾಗ್ ಹೊಡೆದರು. ಎಷ್ಟೆಂದರೂ ಮನುಷ್ಯ ಪ್ರಾಣ ಅಮೂಲ್ಯವಲ್ಲವೆ? ಅದರ ಮುಂದೆ ನಿಸರ್ಗ ಯಾವ ಲೆಕ್ಕ? ಮನುಷ್ಯನ ವಿರುದ್ಧ ನಿಸರ್ಗದ ಸಿಟ್ಟು ಹುಲಿ ರೂಪದಲ್ಲಿ ತನ್ನ ಪ್ರತಿಭಟನೆ ವ್ಯಕ್ತಪಡಿಸುತ್ತಿದೆಯೆಂಬ ಕಟುಸತ್ಯ ತಾನೇ ಯಾರಿಗೆ ಅರ್ಥವಾಗಲು ಸಾಧ್ಯ?

ಇಷ್ಟಾಗಿದ್ದೇ ಇಡೀ ಅರಣ್ಯ ಸಿಬ್ಬಂದಿಗಳೆಲ್ಲ ತುಪಾಕಿ ಸಮೇತ ಅಂತಿಮ ಸುತ್ತಿನ ಹುಲಿಬೇಟೆಗಿಳಿದರು. ಬಂಡೀಪುರ ಕಾಡಿನ ನಾಲ್ಕೂ ದಿಕ್ಕಿನಿಂದ ಕೋಂಬಿಂಗ್ ಆರಂಭಿಸಿದ ಅರಣ್ಯಾಧಿಕಾರಿ ಕಾಂತರಾಜು ಈ ಬಾರಿ ವಿಶಿಷ್ಟ ತಂತ್ರವೊಂದನ್ನು ಬಳಸಿದ್ದರು. ಅದು ಆ ಕಾಲದಲ್ಲಿ ಕೆನೆತ್ ಅಂಡರ್‌ಸನ್ ನರಭಕ್ಷಕನ ಬೇಟೆಗೆ ನಡೆಸಿದ ತಂತ್ರ. ಮೇಕೆಯೊಂದನ್ನು ಬೋನಿಗೆ ಕೂಡಿ ಕಾಡಿನಲ್ಲಿಟ್ಟು ಹೊಂಚಿ ಕೂತ ಅರಣ್ಯಾಧಿಕಾರಿ ಕಾಂತರಾಜು ತಂತ್ರ ಫಲಿಸಿದ್ದು 2013ರ ಡಿಸೆಂಬರ್ ಐದರಂದು. ಹುಲಿ ಬೋನಿಗೆ ಬಿದ್ದಿತ್ತು. ಸಿಕ್ಕ ಹುಲಿಯಾದರೂ ಎಂಥಾದ್ದು?

ಎಷ್ಟೋ ದಿನಗಳಿಂದ ಆಹಾರವನ್ನೇ ಕಾಣದೆ ಕೃಶವಾಗಿದ್ದ ಮುದಿ ಹುಲಿಯದು. ಮೂಳೆ ಬಿಟ್ಟುಕೊಂಡು ನಿತ್ರಾಣಗೊಂಡಂತಿದ್ದ ಆ ಹುಲಿಯ ಬಾಯಿ, ತಲೆ, ಕಾಲುಗಳಿಗೆಲ್ಲ ಮುಳ್ಳು ಹಂದಿಯ ಮುಳ್ಳುಗಳು ನಾಟಿದ್ದವು. ಅದರರ್ಥ ಅದು ಗಾಯಗೊಂಡ ಹುಲಿ!

ಬಹಿಷ್ಕೃತ

ಬಹುಶಃ ತಾನಾಡಿದ ಬೇಟೆಯನ್ನು ತಿನ್ನುವುದಕ್ಕೂ ಆಗದಷ್ಟು ಅದು ಗಾಯಗೊಂಡಿತ್ತೆ ಅಥವಾ ಹಂದಿಯ ಮುಳ್ಳು ಬಾಯಿಗೆ ನಾಟಿದ್ದರಿಂದಾಗಿ ತಿನ್ನಲಾಗದೆ ನರಳುತ್ತಿತ್ತೆ ಗೊತ್ತಿಲ್ಲ. ಈತನಕ ಬಲಿಯಾದ ನಾಲ್ವರನ್ನೂ ಕೊಂದಿದ್ದು ಇದೇ ಹುಲಿಯಾ ಎಂಬುದಕ್ಕೂ ಯಾವುದೇ ಪುರಾವೆಯಿಲ್ಲ. ಸಾಮಾನ್ಯವಾಗಿ ದಟ್ಟ ಕಾಡಿನ ಹುಲಿ ಹಿಂಡಿನಲ್ಲಿ ಕಾಲಕ್ರಮೇಣ ಕೆಲ ದುರಂತಗಳಾಗುತ್ತವೆ. ಯಾವ ಹುಲಿ ವಯಸ್ಸಾದಂತೆಲ್ಲ ತನ್ನ ಬೇಟೆಯಾಡುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತವೋ ಅಲ್ಲಿಗೆ ಅವುಗಳ ದುರ್ಗತಿಯ ದಾರುಣ ಅಂತ್ಯವೂ ಸಮೀಪಿಸಿದಂತೆಯೆ.

ಸಣ್ಣ ಪ್ರಾಯದ ಅಗಾಧಶಕ್ತಿಯ ಹುಲಿಗಳು ಬೇಟೆಯಾಡಲು ವಿಫಲವಾದ ತಮ್ಮದೇ ಕುಟುಂಬದ ಹಿರೀಕನನ್ನು ನಿರ್ದಯವಾಗಿ ಗುಂಪಿನಿಂದ ಹೊರಗಟ್ಟುತ್ತವೆ. ಬೇಟೆಯ ಪಾಲಿಗೆ ಬಾಯಿಕ್ಕಲು ಬಂದ ಹಿರೀಕನ ಮೇಲೆ ಅತ್ಯಂತ ಕ್ರೂರವಾಗಿ ಮುಗಿಬೀಳುತ್ತವೆ. ಅಲ್ಲಿ ಕಾದಾಡುವ ಶಕ್ತಿ ಮತ್ತು ಬೇಟೆಯಾಡುವ ಮುಕ್ತಿ ಮಾತ್ರವೇ ಅಸ್ತಿತ್ವದ ಮಾನದಂಡ. ವಯಸ್ಸಾಯಿತೆಂದರೆ ಒಂದೋ ಹಸಿದು ಸಾಯಬೇಕು ಅಥವಾ ಕಾದಾಟದಲ್ಲಿ ಮಡಿಯಬೇಕು!



ಇಂಥ ದಾರುಣವೊಂದಕ್ಕೆ ಸಿಲುಕಿಯೇ ತನ್ನದೇ ಮಕ್ಕಳು ಮೊಮ್ಮಕ್ಕಳಿಂದ ಬಹಿಷ್ಕೃತನಾದ ಈ ಹುಲಿರಾಯ ಹಾಗೆ ಹಿಂಡಿನಿಂದ ಹೊರಬಿದ್ದವನು ಅಷ್ಟು ಸುಲಭಕ್ಕೆ ಸೋಲೊಪ್ಪಿಕೊಳ್ಳುವವನಾಗಿರಲಿಲ್ಲ. ತನ್ನ ಶೌರ್ಯ ಪರಾಕ್ರಮದ ಗತ ವೈಭವದ ಗುಂಗು ಬಿಡಲಿಲ್ಲ. ಮೊದಮೊದಲು ಹಳ್ಳಿಗಳ ಕುರಿ, ಕೋಳಿಗಳ ಬೇಟೆಗಿಳಿದವನು ಮುಳ್ಳುಹಂದಿಯನ್ನು ಮುಕ್ಕಲು ಹೋಗಿ ಗಾಯಗೊಂಡ. ಸುಲಭಕ್ಕೆ ಸಿಕ್ಕ ಮನುಷ್ಯರ ಮೇಲೆ ತನ್ನ ಸಿಟ್ಟು ತೀರಿಸಿಕೊಳ್ಳುತ್ತಿದ್ದ!

ಬಹುಶಃ ಆಯುಸ್ಸಿನ್ನೂ ಗಟ್ಟಿಯಿತ್ತೇನೊ, ಆಚಾನಕ್ಕಾಗಿ ಅರಣ್ಯ ಇಲಾಖೆಯ ವ್ಯೂಹದೊಳಕ್ಕೆ ಸಿಕ್ಕಿಬಿದ್ದ, ವಯಸ್ಸಾದ, ನಿತ್ರಾಣಗೊಂಡಿದ್ದ ಗಾಯಗೊಂಡ ಹುಲಿ ಬೋನಿಗೆ ಬಿದ್ದಿದ್ದೇ ತಡ ಅರಣ್ಯಾಧಿಕಾರಿ ಕಾಂತರಾಜು ತಮ್ಮ ಬಂದೂಕಿಗೆ ಅರಿವಳಿಕೆ ಇಂಜೆಕ್ಷನ್ ಅಳವಡಿಸಿದ್ದೇ ಶೂಟ್ ಮಾಡಿಬಿಟ್ಟರು. ಐದೇ ನಿಮಿಷಕ್ಕೆ ಅಂಗಾತ ಬೋನಿಗೆ ಬಿದ್ದ ಹುಲಿರಾಯನನ್ನು ಕಂಡಿದ್ದೇ ಗ್ರಾಮಸ್ಥರ ಪೌರುಷ ಭುಗಿಲೆದ್ದಿದೆ. ಹುಲಿಯನ್ನು ಕೊಂದು ಬರುವಂತೆ ಒತ್ತಾಯಿಸಿದ ಕ್ರುದ್ಧ ಗ್ರಾಮಸ್ಥರ ದಂಡು ಅದನ್ನು ತಮ್ಮ ವಶಕ್ಕೊಪ್ಪಿಸುವಂತೆ ತಾವೇ ಅದನ್ನು ಕೊಂದು ಹಾಕುತ್ತೇವೆಂದು ಹಠಕ್ಕೆ ಬಿದ್ದಿದ್ದಾರೆ. ಕೊನೆಗೆ ಪೊಲೀಸರನ್ನು ಕರೆಸಿ ಮುತ್ತಿಗೆ ಹಾಕಿದ ರೈತರನ್ನು ಲಾಠಿ ಚಾರ್ಜ್ ಮಾಡಿಸಿ ಚದುರಿಸಿದ ನಂತರವೇ ಅರಣ್ಯಾಧಿಕಾರಿಗಳು ಹುಲಿಯನ್ನು ಸಾಗಿಸಲು ಸಾಧ್ಯವಾಗಿದ್ದು.

ಬಂಧನದ ಬದುಕಿಗೆ

ಅಲ್ಲಿಗೆ ಒಂದು ಅಧ್ಯಾಯವೇನೋ ಮುಗಿದಿತ್ತು. ಆದರೆ ಪ್ರಶ್ನೆಯೊಂದು ಬಾಕಿಯಿತ್ತು, ನಾಲ್ವರನ್ನು ಕೊಂದಿದ್ದು ಇದೇ ಹುಲಿಯಾ? ಅಥವಾ ಅದು ಬೇರೆಯದೇ ಹುಲಿಯ ಕೃತ್ಯವಾ? ಹಾಗೆ ನಾಲ್ವರನ್ನು ಅಟ್ಟಾಡಿಸಿ ಕೊಂದ ಹುಲಿ ಅವರನ್ನು ತಿನ್ನದೇ ಬಿಟ್ಟಿದ್ದೇಕೆ? ತಿನ್ನಲಾಗದು ಎಂದರೆ ಕೊಂದಿದ್ದಾದರೂ ಏಕೆ? ಇಂಥ ಅನೇಕ ಪ್ರಶ್ನೆಗಳಿಗೆ ಯಾರಲ್ಲೂ ಉತ್ತರವಿರಲಿಲ್ಲ. ಸೆರೆ ಸಿಕ್ಕ ಹುಲಿಯನ್ನು ಮೈಸೂರು ಮೃಗಾಲಯಕ್ಕೆ ತಂದು ಚಿಕಿತ್ಸೆ ನೀಡಲಾಯಿತು. ಅಲ್ಲಿಗೆ ಹುಲಿರಾಯನ ಸಾವುಬದುಕಿನ ಹೋರಾಟದ ಒಂದು ಅಧ್ಯಾಯ ಮುಗಿದಿತ್ತಾದರೂ ಸ್ವಾತಂತ್ರ್ಯಹೀನನಾಗಿ ಮನುಷ್ಯ ಪಂಜರದ ಬಂಧಿಯಾಗಿ ಬದುಕಲೇಬೇಕಾದ ಹೊಸ ಅಧ್ಯಾಯ ಕೂಡ ಆರಂಭಗೊಂಡಿತ್ತು. ಇದೇ ನರಭಕ್ಷಕನಾ ಎಂದು ನಿರ್ಧರಿಸುವುದೂ ಕಷ್ಟವೆ. ಏಕೆಂದರೆ ಸೆರೆಸಿಕ್ಕ ಹುಲಿಯ ಮಲ-ಮೂತ್ರವನ್ನು ಪರೀಕ್ಷಿಸಿದ ಪ್ರಾಣಿ ಶಾಸ್ತ್ರ ತಜ್ಞರಿಗೆ ಅದರಲ್ಲಿ ಮನುಷ್ಯನ ಡಿಎನ್‌ಎ ಅಂಶಗಳೇ ಪತ್ತೆಯಾಗಲಿಲ್ಲ.

ಇದರರ್ಥ ಕೊಂದಿದ್ದು ಇದೇ ಹುಲಿಯಾದರೂ ಅದು ನರಹಂತಕನೇ ಹೊರತು ನರಭಕ್ಷಕನಲ್ಲ!

ವಯಸ್ಸಾಗಿ ಬೇಟೆಯಾಡುವ ಸಾಮರ್ಥ್ಯ ಕಳಕೊಂಡು ತನ್ನದೇ ಹಿಂಡಿನಿಂದ ಬಹಿಷ್ಕೃತನಾಗಿ ಹೊರಬಿದ್ದ ಹುಲಿರಾಯನೇ ನರಬೇಟೆಗಿಳಿದನೆ? ತಿನ್ನಲಾರ ಎಂದಮೇಲೆ ಕೊಂದಿದ್ದಾದರೂ ಏಕೆ?

ಅರಣ್ಯಾಧಿಕಾರಿ ಕಾಂತರಾಜು ಪ್ರಕಾರ ಇದೇ ಹುಲಿ ನಾಲ್ವರನ್ನು ಕೊಂದೂ ನರಭಕ್ಷಕನಲ್ಲ ಎಂಬ ವಾದವೇ ನಿಜವಾದರೆ ಅದು ಅಲೌಕಿಕ ಆಧ್ಯಾತ್ಮವೊಂದರ ಪ್ರತೀಕವಷ್ಟೆ. ಅಂದರೆ ಪ್ರಕೃತಿ ತನ್ನ ಮನುಷ್ಯ ಕ್ರೌರ್ಯದ ವಿರುದ್ಧದ ಆಕ್ರೋಶವನ್ನು ಹುಲಿಯಾಗಿ ಬಂದು ತೀರಿಸಿಕೊಂಡಿತೆ? ಪ್ರತಿನಿತ್ಯ ಕಾಡು ಕಡಿಯುತ್ತಲೇ ಕಾಡು ಪ್ರಾಣಿಗಳ ಆಹಾರವನ್ನೂ ಬೇಟೆಯಾಡಿ ಭಕ್ಷಿಸುತ್ತಿರುವ ಮನುಷ್ಯನಿಗೆ ವನ್ಯ ಮೃಗಗಳ ಹಸಿವಿನ ಪಾಠವನ್ನು ಈ ಮೂಲಕ ಭೂಮಾತೆ ಕಲಿಸ ಹೊರಟಿದ್ದಾಳೆಯೇ?

ಇಲ್ಲದಿದ್ದರೆ ನರಹಂತಕ ಹುಲಿ ಬೋನಿಗೆ ಬಿದ್ದ ನಂತರವೂ ಗುಂಡ್ಲುಪೇಟೆ ತಾಲ್ಲೂಕಿನ ಕಾಡಿನಂಚಿನ ಮದ್ದೂರು ಕಾಲೋನಿಯ ಜವರಯ್ಯ ಎಂಬ ಮತ್ತೊಬ್ಬ ಕಾಡುಗಳ್ಳನನ್ನು ಇನ್ನಾವುದೋ ಹುಲಿ ಹಿಂಡು ಕೊಂದಿದ್ದಾದರೂ ಏಕೆ? (ಬಾಕ್ಸ್ ನೋಡಿ) ಡಿಸೆಂಬರ್ 27ರಂದು ಬಲಿಯಾದ ಜವರಯ್ಯ ಗುಂಡ್ಲುಪೇಟೆಯ ಕಾಡಿನಲ್ಲಿ ಅನಾಥ ಹೆಣವಾಗಿ ಪತ್ತೆಯಾಗುವ ಮೂಲಕ ಹುಲಿ ಬಾಯಿಗೆ ಸಿಲುಕಿದವರ ಸಂಖ್ಯೆ ಐದಕ್ಕೇರಿದೆ. ಯಾವ ಹುಲಿಯನ್ನೆಂದು ಸರ್ಕಾರ ಕೊಲ್ಲುತ್ತದೆ?

ಭೂಮಾತೆಯ ಆಕ್ರೋಶ ಮಾತ್ರ ಯಾರಿಗೂ ಅರ್ಥವಾಗುತ್ತಿಲ್ಲವೆಂದರೆ ಇದಕ್ಕಿಂತ ದುರಂತವುಂಟೆ? ಹುಲಿಯನ್ನೇನೋ ಕೊಲ್ಲಬಹುದು. ನಿಸರ್ಗವನ್ನು....?

■ ರಾ.ಸೋಮನಾಥ್


...ನುಷ್ಯ, ಮನುಷ್ಯನನ್ನು ಹೊರುವುದು ತಪ್ಪು

...ಮಾರು ಮೂರು ಬಾರಿ ಚಿಕ್ಕಮಗಳೂರಿಗೆ ಬೆಂಕಿ ...ಸಂಚು ರೂಪಿಸಿದ ಸಿ.ಟಿ. ರವಿ ಎಂಬ ಸೀಮೆಣ್ಣೆ ... ಪಡೆ ಕಡೆಗೂ ಆ ಕೆಲಸದಲ್ಲಿ ಯಶಸ್ಸು ...ಂತಲ್ಲಾ. ಈಚೆಗೆ ಬಾಬಾಬುಡನ್‌ಗಿರಿ ಬೆಟ್ಟದಲ್ಲಿ ...ತ್ತಮಾಲೆ ಉತ್ಸವದಲ್ಲಿ "ಈ ದತ್ತಪೀಠ ನಮ್ಮದು. ...ೀಮಿಗೆ ಬಿಟ್ಟು ಕೊಡುವ ಪ್ರಶ್ನೆಯೇ ಇಲ್ಲ" ...ಸಂವಿಧಾನ ವಿರೋಧಿ ಭಾಷಣ ಬಿಗಿದನಂತಲ್ಲಾ. ... ಬೋರ್ಡುಗಳಿಗೆ ಮಸಿ ಬಳಿದರೂ ಕೂಡ ...ರು ಸುಮ್ಮನಿದ್ದುದನ್ನು ಗ್ರಹಿಸಿದ ತೀಟೆ ರವಿ ...ಾಶಗೊಂಡು, ಹಂದಿ ಚಿನ್ನತ್ತಿದವಂತಲ್ಲಾ.

...ುಂದೆ ಎಂ.ಪಿ. ಚುನಾವಣೆ ಬರ್ತಾಯಿದೆ. ... ಮತೀಯ ಗಲಭೆಯ ಅಜೆಂಡಾ ಬಿಟ್ಟರೆ ಬೇರೆ ...ೇ ಇಲ್ಲ" ಎಂದು ಚರ್ಚಿಸಿದ ಚೆಡ್ಡಿ ಪಡೆ, ...ಕ ಹಂದಿ ಹಿಡಿದುಕೊಂಡು, ಅದರ ಕತ್ತು-ಕುಯ್ದು ...ಗವನ್ನು ದರ್ಗಾದ ಮುಂದೆ ಇಟ್ಟು ಹಿಂಭಾಗವನ್ನು ... ಹಿಂದೆ ಮಡಗಿ ಪರಾರಿಯಾದವಂತಲ್ಲಾ. ...ಕ್ತೈಯಿಲ್ಲದಿದ್ದರೂ ಸರಕಾರವನ್ನ ಕೇಳದ, ...ದ್ದರೂ ಸುಮ್ಮನಿರುವ ಆದರೆ ಮಸೀದಿ ಮತ್ತು ...ದ ವಿಷಯದಲ್ಲಿ ಜೀವ ಕೊಡಲು ತಯಾರಾಗಿರುವ ... ಜನ ದರ್ಗಾದಲ್ಲಿನ ಹೇಸಿಗೆ ಕಂಡು ...ರಲಾರರು ಎಂದು ಗ್ರಹಿಸಿದ್ದ ಚೆಡ್ಡಿ ಪಡೆಯ ...ನಗಳು ನಿಜವಾಗುವಂತೆ ಮುಸ್ಲಿಮರು ಬೀದಿಗಿಳಿದು ...ಸಿದರಂತಲ್ಲಾ. ಈಗಾಗಲೇ ಗುಂಪಿನಲ್ಲಿ ನಡೆದ ...ಶಿಕ್ಷೆಯಿಲ್ಲ ಎಂದು ಭಾವಿಸಿರುವ ಚೆಡ್ಡಿ ಪಡೆ ...ರಿಗೆ ಎದುರಾಗಲು ಅಮಾಯಕರನ್ನು ಮುಂದೆ ... ಕೂಡ ಯಾವ ಅನಾಹುತ ಜರುಗದೆ ಕೇವಲ ...ಸಿಗಷ್ಟೇ ತಣ್ಣಗಾದ ಘಟನೆಯಿಂದ ಶಾನೆ ಕೆರಳಿರುವ ...ೆ, ಮತ್ತೆ ಕೋಮು ಬಲಿಗೆ ಕಾಯುತ್ತಿವೆಯಂತಲ್ಲಾ ...!

* * * *

...ದು ಕೆಜೆಪಿಯ ಕಡೆಯ ಸಭೆ. ಮುಂದೆ ಎಲ್ಲರೂ ...ಅಂಗಳದಲ್ಲಿ ಭೇಟಿ ಆಗೋಣ" ಎಂಬ ಕೆಜೆಪಿ ... ಏರ್ಪಡಿಸಿ ಅವುಗಳನ್ನು ಬರಕಾಸ್ತುಗೊಳಿಸುತ್ತಿರುವ ...ಪ್ಪನನ್ನು ಆಹ್ವಾನಿಸಿ ಅಪ್ಪಿಕೊಳ್ಳಲು ಯಾವ ಬಿಜೆಪಿ ...ನೂ ಉತ್ಸುಕವಾಗಿಲ್ಲವಂತಲ್ಲಾ. ಈಗಾಗಲೇ ...ಯಲ್ಲಿ ಮೂರು ಸಿಹಿ ಸುದ್ದಿಯಿದೆ" ಎಂದು ಹೇಳುತ್ತಿದ್ದ ಈಶ್ವರಪ್ಪನತ್ತ ತರಾತುರಿ ನೋಡದ ಚೆಟ್ಟಿಗಳು "ಎಡೂರಪ್ಪನ ಕೆಂಗಣ್ಣಿಗೆ ಬಿದ್ದ ಈಶ್ವರಿ ಮೂರನೇ ಸ್ಥಾನಕ್ಕೆ ಹೋಗಿನಿಂತ. ಆದ್ದರಿಂದ ಮತ್ತೆ ಏನಾದರೂ ಮಾಡಿ ಗೆಲ್ಲಬೇಕಾದರೆ ಎಡೂರಪ್ಪನ ಕೃಪೆಯಿಂದ ಮಾತ್ರ ಸಾಧ್ಯವೆಂದು ತಿಳಿದಿರುವ ಈಶ್ವರಪ್ಪ ಎಡೂರಪ್ಪನಿಗಿಂತಲೂ ಉತ್ಸಾಹ ತೋರುತ್ತಿರುವುದನ್ನು ಗಮನಿಸಿದ ಬಿಜೆಪಿಗಳು "ಎಡೂರಪ್ಪ



ಯಾವ ಷರತ್ತುಗಳಿಗೂ ಮನ್ನಣೆ ಕೊಡುವುದಿಲ್ಲ" ಎಂದಿವೆಯಂತಲ್ಲಾ. ಇದನ್ನು ಕೇಳಿಸಿಕೊಂಡ ಎಡೂರಪ್ಪ "ನಾನು ಯಾವ ಶರತ್ತುಗಳನ್ನು ಹಾಕುವ ಸ್ಥಿತಿಯಲ್ಲಿಲ್ಲ. ಆರು ಜನರೊಟ್ಟಿಗೆ ಈಗ ಅನುಭವಿಸುತ್ತಿರುವ ಅಲೆಮಾರಿ ಬದುಕು ಸಾಕಾಗಿದೆ. ಆದ್ದರಿಂದ ಬಿಜೆಪಿ ಜಗಲಿ ಸಾಕು" ಎಂದಿರುವಾಗಲೇ ಅತ್ತ ಕಾಂಗ್ರೆ ಪಾಳಯದಲ್ಲಿ, ಭ್ರಷ್ಟಾತಿಭ್ರಷ್ಟರ ಪ್ರತಿನಿಧಿ ಮತ್ತು ಭೂಗತಲೋಕದ ಪ್ರತಿನಿಧಿಯೊಬ್ಬನನ್ನು, ಮಂತ್ರಿ ಮಾಡಿರುವ ಸಿದ್ದರಾಮಯ್ಯ ತೊಂದರೆಗೆ ಸಿಕ್ಕಿಕೊಂಡಿದ್ದಾರಂತಲ್ಲಾ. ಈ ಬಗ್ಗೆ ಪ್ರತಿಭಟನೆಗಿಳಿಯಲಿರುವ ಬಿಜೆಪಿ ಜನರಿಗೆ ಉತ್ತರ ಕೊಡಲು ತಯಾರಾಗಿರುವ ಸಿದ್ದರಾಮಯ್ಯ "ನಮ್ಮ ಡಿ.ಕೆ. ಶಿವಕುಮಾರ್ ಆಗಲಿ, ರೋಷನ್‌ಬೇಗ್ ಆಗಲಿ ಜೈಲಿಗೆ ಹೋಗಿಬಂದವರಲ್ಲ. ಆದರೆ ನಿಮ್ಮ ಎಡೂರಪ್ಪ ಜೈಲಿಗೆ ಹೋಗಿಬಂದಿದ್ದಾರೆ. ಅಂತವನನ್ನ ಪಾರ್ಟಿಗೆ ಸೇರಿಸಿಕೊಂಡ ನಿಮಗೆ ನಮ್ಮನ್ನು ಟೀಕಿಸಲು ನಾಚಿಕೆಯಾಗಬೇಕು" ಎನ್ನಲಿದ್ದಾರಂತಲ್ಲಾ, ಥೂತ್ತೇರಿ!

* * * *

ನಮ್ಮ ಪೇಜಾವರ ಶ್ರೀಪಾದಂಗಳವರು ಬದುಕಿನ ಕಡೇ ಗಳಿಗೆಯಲ್ಲಿ ದಿವ್ಯ ಜ್ಞಾನೋದಯಕ್ಕೆ ತುತ್ತಾಗಿ ಪಲ್ಲಕ್ಕಿ ಎಂಬ ಚಟವನ್ನು ತಿರಸ್ಕರಿಸಿ ಲಕ್ಷಾಂತರ ಮಂದಮತಿಗಳ ಕಡು ದುಃಖಕ್ಕೆ ಕಾರಣರಾಗಿದ್ದಾರಲ್ಲಾ. ಈ ಬಗ್ಗೆ ಅವರನ್ನ ಮಾತನಾಡಿಸಿ ಅಭಿನಂದಿಸಬೇಕಾದ್ದು ನಮ್ಮ ಕರ್ತವ್ಯವೆಂದು ಭಾವಿಸಿ ಫೋನು ಮಾಡಿದರೆ ರಿಂಗಾಯ್ತು.

ರಿಂಗ್‌ಟೋನ್: "ಕೃಷ್ಣಾ ಎನಬಾರದೆ, ಶ್ರೀ ಕೃಷ್ಣಾ ಎನಬಾರದೆ, ಕೃಷ್ಣನ ನೆನೆದರೆ ಪಲ್ಲಕ್ಕಿ ಏತಕ್ಕೆ ಕೃಷ್ಣಾ...."

"ಏನು ಹೇಳಿ ಯಾಹು ಅವರೆ."

"ನಮಸ್ತೆ ಸ್ವಾಮೀಜಿ ನಾನು ಅಂತ ಹ್ಯಂಗೊತ್ತಾಯ್ತು?"

"ನಿಮ್ಮ ನಂಬರ್ರು ನಮ್ಮಲ್ಲುಂಟು."

"ತಮಗೆ ಅಭಿನಂದನೆ ಸ್ವಾಮೀಜಿ. ಹೊಸ ವರುಷಕ್ಕೆ ಒಳ್ಳೆ ಕ್ರಾಂತಿಕಾರಕವಾದ ತೀರ್ಮಾನ ತಗೊಂಡಿದ್ದೀರಿ."

"ಹೌದು. ಇದಂತೂ ಸಾಧಾರಣವಾದ ತೀರ್ಮಾನ ಅಲ್ಲ, ಕ್ರಾಂತಿಕಾರಕ ತೀರ್ಮಾನ."

"ಈ ತೀರ್ಮಾನದ ಹಿಂದಿನ ಆಲೋಚನೆ ಬಗ್ಗೆ ಹೇಳ್ತಿರಾ?"

"ಮನುಷ್ಯ ಮನುಷ್ಯನನ್ನ ಹೊರುವುದು ತಪ್ಪು ಅಂತ ಅನ್ನಿಸಿತು."

"ಎಲೆಕ್ಷನ್ನಲ್ಲಿ ಓಟು ಮಾಡಕ್ಕೆ ಕೆಲವರು ಅಪ್ಪ ಅವ್ವ ಅಜ್ಜಿಗಳನ್ನ ಹೊತಗಂಡು ಬರ್‍ತಾರಲ್ಲ, ಅದು ತಪ್ಪಲ್ಲವೆ."

"ಅದು ತಪ್ಪಲ್ಲ. ಡೆಮಾಕ್ರಸಿಯಲ್ಲಿ ಓಟು ಮಾಡಲಿಕ್ಕೆ ಇಚ್ಛೆ ಪಟ್ಟ ವಯೋವೃದ್ಧರನ್ನು ಹೊತ್ತು ತರುವುದು ತಪ್ಪಲ್ಲ."

"ತಾವೂ ವಯೋವೃದ್ಧರು. ನಿಮ್ಮ ತೀರ್ಮಾನದಿಂದ ಲಕ್ಷಾಂತರ ಭಕ್ತರಿಗೆ ನೋವಾಗಿದೆ ಅಂತ ನಮ್ಮ ಭಟ್ಟರು ಅಳತಾಯಿದಾರೆ."

"ನೋಡಿ ನಾನು ಇಷ್ಟು ಸಮಯ ಪಲ್ಲಕ್ಕಿಯಲ್ಲಿ ಕುಳಿತು ಭಕ್ತಾದಿಗಳಿಂದ ಉತ್ಸವ ಮಾಡಿಸಿಕೊಂಡಾಯ್ತು. ಈಗಿನ ವಾರ್ಧಕ್ಯದ ಸಮಯದಲ್ಲಿ ಪಲ್ಲಕ್ಕಿ ಏರುವುದು ಸಮಂಜಸವಲ್ಲ."

"ವಯಸ್ಸಾಗಿರೋದ್ರಿಂದ ತೀರಿಕೊಂಡ ಭಾವನೆ ಬರತ್ತ ಹೇಗೆ?"

"ಇಲ್ಲ, ತೀರಿಕೊಂಡ ಭಾವನೆ ಬರಲಿಕ್ಕೆ ಸಾಧ್ಯವಿಲ್ಲ. ಸಾಮಾನ್ಯವಾಗಿ ಪಲ್ಲಕ್ಕಿಯಲ್ಲಿ ಕುಳಿತಾಗ ಸಾಮಾನ್ಯರನ್ನು ಉದ್ಧರಿಸುವ ದೇವಮಾನವನ ಮನಸ್ಥಿತಿಗೆ ಬರುವುದುಂಟು."

ಥೂತ್ತೇರಿ!

▸ ಯಾಹು

"ದೇವಮಾನವ ಅಂದ್ರೆ?"

"ದೇವ ಮಾನವ ಅಂದ್ರೆ, ಸಾಮಾನ್ಯನ ನಿತ್ಯ ಬದುಕಿನ ನರಕದಿಂದ ಮುಕ್ತಿ ಪಡೆದವ. ದೇಹ ಸುಖವನ್ನು ವರ್ಜಿಸಿದವ. ದ್ವೇಷ, ಅಸೂಯೆ, ಅಹಂಕಾರ ಮತ್ತು ವೈಭವದ ಜೀವನವನ್ನು ಬಿಟ್ಟವ. ದೇವರಿಗೆ ಪ್ರಿಯನಾದವ ದೇವಮಾನವ."

"ಅಂತ ಸ್ವಾಮಿ ಈ ಭೂಮಂಡಲದಲ್ಲಿ ಎಲ್ಲಾದ್ರು ಇದ್ದಾರ ಸ್ವಾಮಿ?"

"ಇದ್ದಾರೆ. ಹೇಳಿಕೊಳ್ಳಲು ಸಂಕೋಚ ಆಗ್ತವುಂಟು."

"ಮನುಷ್ಯರೆಲ್ಲ ಸಮಾನರು, ಅವರ ಭುಜದ ಮೇಲೆ ಮತ್ತೊಬ್ಬ ಮಾನವ ಕುಳಿತು ಸವಾರಿ ಮಾಡಬಾರದು ಅನ್ನೋ ಜ್ಞಾನೋದಯಕ್ಕೆ ಇಷ್ಟು ವರ್ಷ ಬೇಕಾಯ್ತಲ್ಲ ಸ್ವಾಮೀಜಿ. ಇನ್ನ ಮಡೆಸ್ನಾನ, ಪಂಕ್ತಿಭೇದ ತೆಗೆದಾಕಕ್ಕೆ ಇನ್ನೆಷ್ಟು ವರ್ಷ ಬೇಕಾಗಬಹುದು?"

"ನೋಡಿ, ನಾನು ಅಡ್ಡ ಪಲ್ಲಕ್ಕಿಯಲ್ಲಿ ಕುಳಿತು ಮೆರವಣಿಗೆಯಲ್ಲಿ ಹೋದವ. ಈಗ ಬಿಟ್ಟಿದ್ದೇನೆ. ಹಾಗೆಯೇ ಮಡೆಸ್ನಾನ ಮಾಡಬಾರದು ಅನ್ನುವ ಮನೋಭಾವನೆ ಸಂಬಂಧಪಟ್ಟವರಲ್ಲಿ ಬರಬೇಕು. ಹಾಗೆಯೇ ಬ್ರಾಹ್ಮಣರ ಜೊತೆ ಊಟ ಮಾಡುವ ಹಟವನ್ನು ಬಿಡಬೇಕು."

"ಹಾಗಾದ್ರೆ ಪಂಕ್ತಿ ಭೇದ ಇರಲಿ ಅಂತಿರಾ?"

"ಹಾಗಲ್ಲ. ಪ್ರಜಾಪ್ರಭುತ್ವದಲ್ಲಿ ನಮ್ಮ ಆಚರಣೆಗಳಿಗೆ ಅಡೆತಡೆ ಇರಬಾರದು. ನಮ್ಮ ಇಷ್ಟದ ಆಚರಣೆಗಳಿಗೆ ಅಡ್ಡಿ ಮಾಡಬಾರದು."

"ನಾವು ನಿಮ್ಮ ಒಟ್ಟಿಗೆ ಕುಳಿತು ಊಟ ಮಾಡಬೇಕು ಅಂತ ಹಟ ಮಾಡಿದ್ದೇವ? ಹಾಗೆ ನೀವೂ ಮಾಡಬಾರದು."

"ನಮ್ಮನಮ್ಮೊಳಗೆ ಊಟದ ವಿಷಯದಲ್ಲಿ ಜಗಳ ಆಗಬಾರದು. ಒಂದು ದಿವಸ ನಾವು ನೀವು ಜೊತೆಯಲ್ಲಿ ಕುಳಿತು ಊಟ ಮಾಡಿಬಿಟ್ಟರೆ ಏನು ಬಂದ ಹಾಗಾಯ್ತು? ಒಂದೇ ಪಂಕ್ತಿಯಲ್ಲಿ ಸೊಪ್ಪು, ಸಾರು, ಮುದ್ದೆ ಹುಳಿ, ಅನ್ನ, ಪತ್ರೊಡೆ, ವಡೆ, ಕಡ್ಲೆ ಪಾಯಸ, ಪೂರಿ, ಜಿಲೇಬಿ, ಮಜ್ಜಿಗೆ, ಪಲ್ಯ ಸರಿ ಹೋಗುವುದಿಲ್ಲ."

ಥೂತ್ತೇರಿ!! ■

...ಚ್ಚಗಿನ ಒಂದು ...ರಾತ್ರಿಗಾಗಿ

...ಯಾರ್ಕಿನ 26ನೇ ಮುಖ್ಯ ರಸ್ತೆ
...ನೇಗೆ ಹೋಗುವ ಮಾರ್ಗವನ್ನು ಕೂಡುವಲ್ಲಿ
...ದ ಪ್ರತಿ ಸಂಜೆ
...ಕರ ರಾತ್ರಿ ವಸತಿಯ ವ್ಯವಸ್ಥೆಗಾಗಿ
...ೀಡುತ್ತಾ ಒಬ್ಬ ನಿಂತಿರುತ್ತಾನೆ ಎಂದು-
...ನೆ.

...ರ್ಗದಿಂದ:
... ಬದಲಾಗದು.
...ರ ನಡುವಿನ ವಿಷಮ ಸಂಬಂಧ ಸುಧಾರಿಸದು,
...ೆದು ಯುಗ ಮೊಟಕಾಗದು.

...:
...ದರೂ ರಾತ್ರಿ ಬೆಚ್ಚಗೆ ಮಲಗುತ್ತಾರೆ,
...ಯಿಂದ, ಸುರಿವ ಹಿಮದಿಂದ ಪಾರಾಗುತ್ತಾರೆ.

... ಕೇಳಿ, ಪುಸ್ತಕ ಮುಚ್ಚಿಡಬೇಡಿ.

...ದರೂ ರಾತ್ರಿ ಬೆಚ್ಚಗೆ ಮಲಗುತ್ತಾರೆ,
...ಯಿಂದ, ಸುರಿವ ಹಿಮದಿಂದ ಪಾರಾಗುತ್ತಾರೆ.

...ಬದಲಾಗದು.
... ನಡುವಿನ ವಿಷಮ ಸಂಬಂಧ ಸುಧಾರಿಸದು,
...ದು ಯುಗ ಮೊಟಕಾಗದು.

ಮೂಲ: ಬ್ರೆಕ್ಟ್
ಕನ್ನಡಕ್ಕೆ: ಕೆ.ಫಣಿರಾಜ್




ಎಡತೊರೆ ರಾಜಣ್ಣ ಇನ್ನಿಲ್ಲ

ಭದ್ರಾವತಿಯ ಕಬ್ಬಿಣದ ಕಾರ್ಖಾನೆಯಲ್ಲಿ ಫೋರ್ ಮನ್ ಆಗಿ ಕೆಲಸ ಮಾಡುತ್ತಿದ್ದ ಬಿ. ರಾಜಣ್ಣನನ್ನು ಮಾತನಾಡಿಸಿ ಬಂದರೆ ಸಾಕು, ನಮ್ಮ ಊರಿಗೆ ಹೋಗಿ ನಿಂಗಣ್ಣನನ್ನೋ, ಭೈರಣ್ಣನನ್ನೋ ಮಾತನಾಡಿಸಿ ಬಂದಂತಾಗುತ್ತಿತ್ತು. ಕಾರ್ಖಾನೆಯ ಕ್ವಾರ್ಟರ್ಸ್‌ನ ಜಗಲಿ ಮೇಲೆ ಬೀಡಿ ಎಳೆಯುತ್ತ ಕುಳಿತ ರಾಜಣ್ಣನನ್ನು ನೋಡಿದರೆ ಇದೀಗ ತಾನೆ ಉಕ್ಕೆ ಹೊಡೆದು ಬಂದ ರೈತನಂತೆ ಕಾಣುತ್ತಿದ್ದ. ಆದರೆ ಆತನ ಮನೆಯೊಳಕ್ಕೆ ಇಣುಕಿದರೆ ನೂರಾರು ಪುಸ್ತಕ ತುಂಬಿದ್ದ ಅಲ್ಮೇರಾ ಕಾಣುತ್ತಿತ್ತು. ಕನ್ನಡದ ಎಲ್ಲಾ ತಲೆಮಾರಿನ ವಿದ್ವಾಂಸರನ್ನೆಲ್ಲಾ ಓದಿಕೊಂಡು ಮಳೆ ಬೆಳೆಯ ಸಂಗತಿಯಷ್ಟು ಸಲೀಸಾಗಿ ಬೆಲೆ ಕಟ್ಟಿ ಮಾತನಾಡುತ್ತಿದ್ದ ರಾಜಣ್ಣ ಅಪ್ಪಟ ಸಮಾಜವಾದಿಯಾಗಿದ್ದ. ನಾವು ಯಾರ್‍ಯಾರ ಜೊತೆ ಬೆರೆಯ ಬೇಕು, ಮಾತನಾಡಬೇಕು ಎಂಬುದನ್ನು ಹೇಳಿ ಎಚ್ಚರಿಕೆ ಕೊಡುತ್ತಿದ್ದ. ನಾನು ಒಂದೆರಡು ಬಾರಿ ಚುಂಚನಗಿರಿ ಮಠಕ್ಕೆ ಹೋಗಿಬಂದ ಸುದ್ದಿ ತಿಳಿದು "ಲ್ರೈ ಅಲ್ಯಲ್ಲ ಹೋಗಬ್ಯಾಡ ಕನಯ್ಯ" ಎಂದು ಎಚ್ಚರಿಸಿದ್ದ. ಆಗ ನಾನು "ಅಂಗನ್ನ ಕಂಡು ನಾವು ದೂರ ಇದ್ರೆ ಚೆಡ್ಡಿಗಳು ಬಂದು ಹಾವು ಸೇರಿದಂಗೆ ಸೇರಿ ಕತ್ತರೆ. ಆಗೇನು ಮಾಡ್ತಿ" ಎಂದಿದ್ದೆ. "ಅಂಗರಾ ಬಡ್ಡಿ ಹೈಕಳ ಮಠದತ್ರ ಸೇರಸಬಾರ್ದು ಕನಯ್ಯ, ಮನಿಯಾಳ ನನ್ನ ಮಕ್ಕಳವುರು" ಎಂದಿದ್ದ.

ರಾಜಣ್ಣ ಕವಿ ಮತ್ತು ಕತೆಗಾರ. ಅವನ ಬದುಕಿನಲ್ಲಿ ಬರೆದದ್ದು ಎರಡು ಕವನ ಸಂಕಲನ ಮತ್ತು ಒಂದು ಕಥಾಸಂಕಲನ. ಈ ಪೈಕಿ ಕೆಂಬಾರೆ ಎಂಬ ಕವನ ಸಂಕಲನ ವಿಮರ್ಶಕರ ಮೆಚ್ಚುಗೆಗೆ ಪಾತ್ರವಾಗಿ ಚರ್ಚೆಯಾಗುತ್ತಿತ್ತು. ಅದರಲ್ಲಿನ ನೆಲದ ಭಾಷೆಗಾಗಿ ನಾನು ಆಗಾಗ್ಗೆ ಓದಿ ಕೊಳ್ಳುತ್ತಿದ್ದೆ. ಅವನ ಕವನ ಕುರಿತು ಯಾರಾದರೂ ಮೆಚ್ಚಿ ಮಾತನಾಡಿದರೆ ಸಾಕು ನನಗೆ ಫೋನು ಮಾಡಿ ಹಂಚಿಕೊಳ್ಳುತ್ತಿದ್ದ.


ಸುಖೀ ಕುಟುಂಬವಾಗಿದ್ದ ಆತನ ಬದುಕಿನಲ್ಲಿ ಒಮ್ಮೆಲೇ ಬಿರುಗಾಳಿ ಬೀಸಿದಂತೆ ಆತನ ಸರ್ವಸ್ವವಾಗಿದ್ದ ಹೆಂಡತಿ ತೀರಿಕೊಂಡರು. ಮಕ್ಕಳನ್ನು ಹೇಗೊ ದಡ ಮುಟ್ಟಿಸಿದ ರಾಜಣ್ಣನಿಗೆ ತಾನೀಗ ಎಲ್ಲಿಗೆ ಹೋಗಬೇಕೆಂದು ಗೊಂದಲವಾಯಿತು. ಫ್ಯಾಕ್ಟರಿಯಿಂದ ವಿ.ಆರ್.ಎಸ್ ತೆಗೆದುಕೊಂಡು ತನ್ನ ಊರಿಗೆ ಹೋದ. ಹೋಗುವ ಮುನ್ನ ಕಣ್ಣೀರು ಹಾಕಿದ್ದ! ಆದರೆ ಆತ ಒಂದು ಕಾಲದಲ್ಲಿ ಬಿಟ್ಟು ಬಂದಿದ್ದ ಊರು ಮಾಯವಾಗಿ ಅಲ್ಲಿ ಬದುಕಲು ಸಾಧ್ಯವೇ ಇಲ್ಲದಂತಹ ಕೊಚ್ಚೆಗುಂಡಿ ನಿರ್ಮಾಣವಾಗಿತ್ತು. ಊರನ...



ಜಮೀನನ್ನ ತಮಗೇ ಬಿಟ್ಟು ಹೋಗುತ್ತಾನೆಂದು ಭಾವಿಸಿದ್ದವರು ರಾಜಣ್ಣನನ್ನು ಮಾತನಾಡಿಸದಂತಾದರು. ಕುಡಿಸಿದರೆ ಮಾತ್ರ ಹತ್ತಿರ ಬರುವ ಜನರಿಂದ ರೋಸಿಹೋದ ರಾಜಣ್ಣ ಅವರಿವರ ಮನೆಯಲ್ಲಿ ಉಂಡು ಕಡೆಗೆ ಬೆಂಗಳೂರಿಗೆ ಹೋಗಿ ಮಗನ ಬಳಿ ಸೇರಿಕೊಂಡ. ಆದರೆ ಬೆಂಗಳೂರಲ್ಲೂ ಬದುಕಲು ಸಾಧ್ಯವಿಲ್ಲ ಎಂಬುದು ಅರಿವಾಗತೊಡಗಿತು. ಜೊತೆಗೆ ಆರೋಗ್ಯವೂ ಕೈಕೊಡ ತೊಡಗಿತು. ಕಣ್ಣಿನ ಸಮಸ್ಯೆಯೂ ಶುರುವಾಯ್ತು, ಆಗ ಲಂಕೇಶ್ ಬಳಗದ ಡಾ. ಎಂ.ಬಿ. ರಾಮಮೂರ್ತಿ ಯವರಿಗೆ ರಾಜಣ್ಣನನ್ನು ಪರಿಚಯಿಸಿ ಕಣ್ಣು ತೋರಿಸಲು ಹೇಳಿದೆ. ಡಾ. ರಾಮಮೂರ್ತಿ ತೆಗೆದುಕೊಂಡ ಕಾಳಜಿಯಿಂದ ಪರವಾಗಿಲ್ಲ ಬೆಂಗಳೂರಲ್ಲೂ ಒಳ್ಳೆ ಜನ ಇನ್ನೂ ಬದುಕಿದ್ದಾರೆ ಎಂಬ ವಿಶ್ವಾಸ ಮೂಡತೊಡಗಿತು. ಈ ನಡುವೆ ಹಾವೇರಿಯ ಜಾನಪದ ವಿಶ್ವವಿದ್ಯಾನಿಲಯದವರು ಜಾನಪದ ನಿಘಂಟಿನ ಕೆಲಸ ಪ್ರಾರಂಭಿಸಿದರು. ಅದರ ಸಂಪಾದಕ ಮಂಡಳಿಯನ್ನು ಸೇರಿಸಿಕೊಂಡ ರಾಜಣ್ಣ ಹೊಸ ಜವಾಬ್ದಾರಿ ಕೊಟ್ಟ ಕಾರಣಕ್ಕೆ ತುಂಬಾ ಹುರುಪಿನಿಂದ ಕೆಲಸ ಮಾಡತೊಡಗಿದ್ದ.

ಎಲ್ಲ ಸರಿಹೋಯ್ತು, ಇನ್ನು ಪರವಾಗಿಲ್ಲ ಎನ್ನುವಷ್ಟರಲ್ಲಿ ರಾಜಣ್ಣ ಹೃದಯಾಘಾತದಿಂದ ಹೊರಟುಹೋಗಿದ್ದಾನೆ. ಈ ರಾಜಣ್ಣನ ಸಾವು ನಮ್ಮನ್ನ ಬೆಚ್ಚಿ ಬೀಳಿಸಿದ್ದೇಕೆಂದರೆ, ಹಳ್ಳಿಯಿಂದ ಬಂದ ನಾವು ಅತ್ತ ಹಳ್ಳಿಗೆ ವಾಪಸ್ ಹೋಗಿ ಇರಲಾಗಲ್ಲ, ಇತ್ತ ಪಟ್ಟಣದಲ್ಲೂ ಇರಲಾಗುವುದಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಹೆಂಡತಿ ತೀರಿಕೊಂಡ ... [illegible]

■ ಬಿ.ಚಂದ್ರೇಗೌಡ



ಸೂಲಗಿತ್ತಿ

ಕತೆ

ಸೆಬರಿವಂತಿ ನದಿಗೆ ಹಾಕಿರುವ ಒಡ್ಡಿನ ಒಳದಾರಿಯೊಳಗೆ ನುಸುಳುತ್ತಿದ್ದ ಕಡುಹಸಿರಿನ ವೃಕ್ಷಗಳು ಕಣ್ತುಂಬಿದ್ದವು. ಸೂರ್ಯ ಆಗತಾನೆ ನೀಲಾಕಾಶದಲ್ಲಿ ಟೆಂಕಿಯ ಚೆಂಡಾಗಲು ಮೇಲೆದ್ದಿದ್ದ. ಒಡ್ಡಿನ ಮೇಲಿನಿಂದ ಸುಮ್ಮನೆ ಹಳ್ಳಿಯ ಕಡೆ ಕಣ್ಣು ಹಾಯಿಸಿದರೆ ಸಾಕಿತ್ತು ಆನಂದೋತ್ಸಾಹ ಉಕ್ಕುತ್ತಿತ್ತು. ದಿನದ ಕೆಲಸದ ಮೇಲೆ ಅಂಬೇಡ್ಕರ್ ಕಾಲೋನಿಯಿಂದ ಮಂದಿ ಸಣ್ಣ ಸಣ್ಣ ಗುಂಪುಗಳಲ್ಲಿ ಕೃಷಿ ಕೆಲಸದ ಮೇಲೆ ತೆರಳಿದ್ದುದರಿಂದ ಹಳ್ಳಿಯ ಎಲ್ಲೆಡೆ ಪ್ರಶಾಂತ ನಿರಾಕುಲತೆ ಆವರಿಸಿತ್ತು. ಶಾಲೆಗೆ ಹೋಗುವ ಮಕ್ಕಳು, ವೃದ್ಧ ಸ್ತ್ರೀ-ಪುರುಷರು ಮಾತ್ರವೇ ಮನೆಯಲ್ಲಿ ಉಳಿದಿದ್ದರು. ಮತ್ತುತಃ ಕಾಲೋನಿ ಶಾಂತಿಯ ಬೀಡೆನಿಸಿತ್ತು.

ಬೆನಿಮಾ ಅಟ್ಟದ ಮೇಲೆ ಸಂಗ್ರಹಿಸಿದ್ದ ಅಳ್ಳಕ ಮಾವುಗಳನ್ನು ಬೇರ್ಪಡಿಸುತ್ತ ಇಡೀದಿನ ಕತ್ತಲೆಯಲ್ಲಿ ಸವೆಸಿದ್ದಳು. ಆಕೆ ಅವುಗಳನ್ನು ಪ್ರತ್ಯೇಕವಾಗಿ ಗುಡ್ಡೆ ಮಾಡಿದಳು: ಒಳ್ಳೆ ಹಣ್ಣುಗಳು ಗುಡ್ಡೆ ಒಂದು ಕಡೆ, ಪಕ್ಷಿಗಳು ಕಚ್ಚಿದ ಹಣ್ಣುಗಳ ಗುಡ್ಡೆ ಮತ್ತೊಂದು ಕಡೆ. ಪಕ್ಷಿಗಳು ಕಚ್ಚಿದ ಹಣ್ಣು ಸಹಜವಾಗಿ, ಸೋವಿ ಇದ್ದು ಹಳ್ಳಿಯ ದಲಿತ ಮಕ್ಕಳು ಅವನ್ನು ಸಾಮಾನ್ಯವಾಗಿ ಖರೀದಿಸುತ್ತಿದ್ದರು. ಮಾರಾಟ ಮಾಡಲು ಸಾಧ್ಯವೇ ಇಲ್ಲವೆನ್ನುವ ಹಣ್ಣುಗಳನ್ನು ಬೆನಿಮಾ ಪುಟಾಣಿ ಮಕ್ಕಳಿಗೆ ಉಚಿತವಾಗಿ ಹಂಚಬಿಡುತ್ತಿದ್ದಳು. ಬೆನಿಮಾ ಹಣ್ಣುಗಳನ್ನು ವಿಂಗಡಿಸುವ ಕೌಶಲಕ್ಕೆ ಸರಿಸಾಟಿಯಾಗಿತ್ತು ಅವಳ ಸೂಲಗಿತ್ತಿಯ ಪರಿಣತಿ. ಈ ನಿಟ್ಟಿನಲ್ಲಿ ಅವಳ ಕೈಗುಣ ಕುರಿತಂತೆ ಹಳ್ಳಿಯ ತಾಯಂದಿರು ಎಷ್ಟು ಹೊಗಳಿದರೂ ಅವರಿಗೆ ದಣಿವಾಗುತ್ತಿರಲಿಲ್ಲ.

ಕಲಭ ವಿಧಿವಶನಾಗಿ ಎರಡು ದಶಕಗಳು ಉರುಳಿದ್ದವು. ಅಲ್ಲಿಂದೀಚೆಗೆ, ಆ ಕತ್ತಲೆಯ ಅಟ್ಟದ ಮೇಲೆ ಕುಳಿತು ಬೆನಿಮಾಳ ಜೀವನ ಬಂಜರಾಗಿತ್ತು. ಆ ಅಟ್ಟಕ್ಕೆ ಅದರ ಮೇಲ್ಛಾವಣಿಯ ತೂತಿನಿಂದ ಮಾತ್ರ ಸೂರ್ಯನ ಕಿರಣಗಳು ತೂರಿ ಬರುತ್ತಿದ್ದವು. ಮಾವಿನ ಹಣ್ಣಿನ ಕಾಲದಲ್ಲಿ ಅವಳ ಇಡೀ ಸಮಯ ಮಾವನ್ನು ವಿಂಗಡಿಸುವುದರಲ್ಲೇ ಕಳೆದುಹೋಗಿತ್ತು. ಮಾವಿನ ಕಾಯಿ; ಬಲಿತದ್ದು ಮಾಗಿದ್ದು ಹುಳಿ, ಪಕ್ಷಿಗಳು ಕಚ್ಚಿದ್ದು... ಇತ್ಯಾದಿ, ಇತ್ಯಾದಿ... ತನ್ನ ಕೈಯಲ್ಲಿನ ಕಾಯಿಗಳನ್ನು ತಿರುಗಿಸುತ್ತಿದ್ದಂತೆ ಅವಳಿಗೆ ತನ್ನ ಬಾಲ್ಯದ ಹಾಗೂ ಹರೆಯದ ಬಾಳು ನೆನಪಿಗೆ ಬಂದಿತು. ಪಕ್ಷಿಗಳು ಕಚ್ಚಿದ ಹಣ್ಣುಗಳು ಅವಳ ಕುಂದಿದ ವಯಸ್ಸನ್ನು ನೆನಪಿಗೆ ಥಟ್ಟನೆ ತಂದವು, ಪಕ್ಷಿಗಳು ಕಚ್ಚಿದ ಹಣ್ಣಿನ ಸಿಪ್ಪೆಯಂತೆ ಅವಳ ಚರ್ಮ ಕೂಡ ಈಗ ಕಪ್ಪನೆಯ ಬಣ್ಣಕ್ಕೆ ತಿರುಗಿ, ಒರಟಾಗಿ ಸುಕ್ಕುಗಟ್ಟಿತ್ತು.

ಒಂದು ದಿನ ಅಟ್ಟದ ಮೇಲೆ ಮಾವುಗಳನ್ನು ವಿಂಗಡಿಸುತ್ತಿದ್ದಳು ಬೆನಿಮಾ. ಆಗ ದಲಿ ಪಟ್ನಾನಿ ದಡದಡನೆ ಓಡಿಬಂದವಳೆ ಬೆನಿಮಾಳ ಮನೆ ಮುಂದೆ ನಿಂತು; "ಬೆನಿಮಾ, ಬೆನಿಮಾ!" ಎಂದು ಕೂಗಿದಳು. ಅವಳು ಏದುಸಿರು ಬಿಡುತ್ತಿದ್ದಳು.

"ಹೋ, ದಾಲಿ ನೀನ್ಯಾ! ಏನಾಯ್ತೇ!" ಎನ್ನುತ್ತಾ ಒಂದು ಚಣದಲ್ಲಿ ಬೆನಿಮಾ ಹೊರಗೆಬಂದಳು.

"ಬೆನಿಮಾ... ನನ್ನ ನಾದಿನಿ ಪಶಿಮಾಗೆ ಹೆರಿಗೆ ನೋವು ಕಾಣಿಸಿಕೊಂಡಿದೆ. ಡಾ. ಪರೇಶ್ ಪಟೇಲರನ್ನು ಕರೆಸಿದ್ದೆವು. ಒಂದು ಇನ್‌ಜಂಕ್ಷನ್ ಕೊಟ್ಟು ಹೋದರು. ಹೋಗುವಾಗ, ಯೋಚ್ನೆ ಮಾಡ್ಬೇಡಿ, ಇನ್ನೆರಡು ಗಂಟೆಯೊಳಗೆ ಹೆರಿಗೆ ಆಗುತ್ತೆ ಅಂತ ಅಂದರು. ಆದರೆ ಈಗಾಗಲೇ ನಾಲ್ಕು ಗಂಟೆ ಉರುಳೋಯ್ತು. ಹೆರಿಗೆ ಇನ್ನು ಆಗಲಿಲ್ಲ, ನೋವೂ ಕಡಿಮೆ ಆಗಲಿಲ್ಲ, ಬೇಗ, ಬಾರವ್ವ, ಬೆನಿಮಾ, ನಿನ್ನ ಕೈ ಮುಗಿತೀನಿ!"

ಎಂದಿನಂತೆ ಬೆನಿಮಾ ಒಂದರೆಕ್ಷಣವೂ ತಡಮಾಡದೆ ದಡಬಡಿಸಿ ಓಡಿಬಂದಳು. ಸೀರೆಯ ನೆರಿಗೆ ಸರಿಪಡಿಸಿಕೊಳ್ಳುತ್ತಾ ದಾಲಿಯ ಜೊತೆ ಹೆಜ್ಜೆ ಹಾಕಿದಳು.

ಪಾಶಿ ಮಲಗಿದ್ದ ಮಂಚದ ಸುತ್ತ ಉಸಿರು ಬಿಗಿ ಹಿಡಿದು, ಅವುಡುಗಚ್ಚಿ ಅರ್ಧ ಡಜನ್‌ಗೂ ಹೆಚ್ಚು ಮಂದಿ ಹೆಂಗಳೆಯರು ನಿಂತಿದ್ದರು. ಪಾಶಿಯ ಅತ್ತೆ ಮನೇಕ್ ದೋಶಿ ಏನೇನು ಆಯಿತೆಂದು ವಿವರಿಸಿದಳು. ಪಾಶಿಯ ನಾಡಿ ಹಿಡಿದ ಬೆನಿಮಾ ಕಣ್ಣಲ್ಲಿ ಬೆಂಕಿಯನ್ನುಗುಳುತ್ತಾ ಮನೇಕ್ ದೋಶಿಯ ಕಡೆ ಕತ್ತು ಹೊರಳಿಸಿ,

"ನಿಮಗೆ ಪ್ಲೇಗು ತಗಲಾ, ಹಾದರಗಿತ್ತೀರಾ! ಇವಳು ಇಂಗವಳೆ, ನೀವು ಅದೆಂಗೇ ಒಳ್ಳೆ ಹೆಡ್ಡಿರ ತರಾ ನೋಡ್ಕೊಂಡು ನಿಂತಿದ್ರಿ, ಇಷ್ಟೊತ್ತು? ಇಷ್ಟು ವರ್ಷ ಅದೆಂಗೇ ಬಾಳ್ಕೊಂಡು ಬಂದ್ರೇ ಬಡ್ಡೀರಾ! ನಂಗಂತೂ ತಿಳೀವಲ್ದು! ಇವಳ ಕೈ ತಣ್ಣಗೆ ಕೊರೀತಿವೆ! ಏನಾಗದೆ ಅಂತ್ಲೂ ತಿಳಿಲಿಲ್ಲವೇನ್ರೆ ಮೂದೇವಿಗಳಾ! ನೋಡ್ರೆ ಇಂತಹ ಸುಂದರಿ ಸೊಸೆನಾ ಮಸಣಕ್ಕೆ ಕಳಿಸಕ್ಕೆ ನಿಮಗೆ ನಾಚಿಕೆ ಆಗಲ್ವಾ?"

ಬೆನಿಮಾ ಒಳ್ಳೆ ಚುರುಕು ಹಸ್ತದವಳು ಅಲ್ಲದೆ ಚತುರೆ, ಅವಳ ಮುಂದೆ ಉದ್ದುದ್ದದ ಪದವಿಗಳನ್ನು ನೇತಾಕಿಕೊಂಡಿರುವ ವೈದ್ಯರನ್ನು ನೀಗಿ ನಿವ್ವಾಳಿಸಬಹುದಿತ್ತು. ಅವಳೇನೂ ಎಂ.ಎಸ್., ಎಂ.ಡಿ ಪದವಿ ಹೊತ್ತವಳಲ್ಲ, ಆದರೆ ಅವಳು ಅನುಭವದ ಕಣಜ. ಅವಳೊಬ್ಬಳಿಗೆ ಅಲ್ಲ, ರೋಗಿಯ ಸಂಬಂಧಿಕರಿಗೂ ವೈದ್ಯರು ಗೀಚಿಕೊಡುವ ಉದ್ದುದ್ದನೆಯ ಔಷಧಿಯ ಚೀಟಿ ನೆಮ್ಮದಿಗೆಡಿಸುತ್ತಿತ್ತು. ಹೆರಿಗೆ ಮಾಡಿಸುವ ಸಂದರ್ಭದಲ್ಲಿ ಬೆನಿಮಾ ಬಸುರಿ ಹೆಂಗಸಿನ ಹಾಸಿಗೆ ಪಕ್ಕ ಹಗಲಿರುಳು ಇರುತ್ತಿದ್ದಳು, ಅವಳ ಪೀಜು ಕೇವಲ ಒಂದು ತೆಂಗಿನಕಾಯಿ ಮಾತ್ರ!

"ಹೋಗ್ರೇ ಆ ಕಡೆ ಮೂದೇವಿಗಳ!" ಎಂದವಳೆ ಮಾನೇಕ ದೋಶಿಯೋರ್ವಳನ್ನು ಬಿಟ್ಟು ಇತರೆ ಹೆಂಗಸರನ್ನು ಆಚೆಗೆ ಅಟ್ಟಿ ಕಿಟಕಿಗಳನ್ನೆಲ್ಲ ಮುಚ್ಚಿದಳು. ಪಾಶಿಗೆ ಹೆರಿಗೆನೋವು ವಿಪರೀತವಿತ್ತು. ಬೆನಿಮಾ ಅವಳನ್ನು ಮಂಚದ ಮೇಲಿಂದ ಮೆಲ್ಲನೆ ಎತ್ತಿ ನೆಲದ ಮೇಲೆ ಮಲಗಿಸಿದಳು. ಪಾಶಿ ತೀವ್ರವಾಗಿ ನರಳಿದಳು ಹೆಣಗುತ್ತ, ಅವಳ ಪಾಲಿಗೆ ನೋವು ಸಹಿಸಲಾರದೆ ಪ್ರತಿ ಕ್ಷಣಕ್ಷಣವೂ, ಯಮಭಾರವಾಯಿತು. ಹೊರಗಡೆ ಬಾಗಿಲಲ್ಲಿ ನಿಂತಿದ್ದ ಅವಳ ಪತಿ ಬಲದೇವ್‌ನ ಬಾಯಿಗೆ ಜೀವ ಬಂದು ಸಿಕ್ಕಿಹಾಕಿಕೊಂಡಿತ್ತು. ತೀವ್ರಾಭಿಲಾಷೆಯ ಆಸೆಯೊತ್ತ ಕಂಗಳಿಂದ, ಕೊಠಡಿಯ ಗಾಳಿಕಿಂಡಿಯ ಕಡೆ ಎವೆಯಿಕ್ಕದೆ ನೆಟ್ಟ ನೋಟ ಹರಿಸಿದ್ದ. ಒಳಗಿನಿಂದ ಬರುವ ಸದ್ದಿಗೆ ಕಿವಿ ಆನಿಸಿ, ಅವುಗಳಿಗೂ ನೋವು ತಂದಿಕ್ಕಿಕೊಂಡಿದ್ದ.

ದಿಗಿಲುಗೊಂಡ ಮಾನೇಕ ದೋಶಿ ಸೆರಗೊಡ್ಡಿ ಅಂಗಲಾಚುತ್ತಾ "ಬೆನಿಮಾ, ನೀನೇ ನಮ್ಮ ಪಶ್ಲೀಲಿನ ಉಳಿಸೋಕ್ಯಾಗೋದು. ಹೋದ ಸಾರಿನೂ ಮೈಯಿಳಿದ್ದಿತ್ತು. ಈ ಸಲವೂ ಅಂಗೇ ಆಗ್ಬಿಟ್ಟರೇ..." ಮಾನೇಕ ದೋಶಿ ಬಿಕ್ಕಿಬಿಕ್ಕಿ ಅತ್ತಳು.

"ಯೋಚ್ನೆ ಮಾಡ್ಬೇಡ ಕಣವ್ವ, ಆ ದರವೇಶಿ ಡಾಕ್ಟ್ರ ಏನು ಹೇಳ್ದ?" ಎಂದು ಕೇಳಿದಳು ಬೇಕೆಂದೇ ವಿಷಯಾಂತರ ಮಾಡಲು.

"ಏನಾಗಿದೆ ಅವಳಿಗ ಅಂತ ನನ್ನೇ ಕೇಳ್ದ ಡಾಕ್ಟ್ರು?"

"ಅದ್ನಾ ಕೇಳಕ್ಕೆ ಡಾಕ್ಟ್ರೇ ಆಗ್ಬೇಕಾ?" ಎಂದ ಅವಳ ಮಾತಿನಲ್ಲಿ ಡಾಕ್ಟ್ರ ಬಗ್ಗೆ ತನಗಿರುವ ಅಸಮಾಧಾನವನ್ನು ಮುಚ್ಚಿಡುವ ಯಾವ ಯತ್ನಗಳು ಇರಲಿಲ್ಲ.

"ಆನೆ ಸೊಂಡಿಲಂಗಿರೊ ಉದ್ದನೆಯ ಟ್ಯೂಬನ್ನು ತಗೊಂಡು ಅದರೆಡರ ಕವಲುತುದಿಗಳನ್ನು ಕಿವಿಗೆ ಸಿಕ್ಕಿಸಿಕೊಂಡ, ಅದರ ಒಂದು ತುದಿಯನ್ನು ಅವಳ ಎದೆ ಮೇಲಿಟ್ಟು ಅದುಮಿದ ಅಷ್ಟೆ" ಎಂದ ಮಾನೇಕ ದೋಶಿ ಅಸಂಬದ್ಧವಾಗಿ ಪ್ರಲಾಪಿಸುತ್ತಾ, "ಗರ್ಭದೊಳಗೆ ಮಗು ಸಿಕ್ಕಿಕೊಂಡಿದೆ" ಎಂದವನು "ಇಂಜೆಕ್ಷನ್ ಕೊಡುತ್ತೇನೆ ಸುಲಭವಾಗಿ ಹೆರಿಗೆ ಆಗೋ ಅಂಗೆ ಮಾಡುತ್ತೆ ಅಂತ ನಮಗೆ ಸಮಾಧಾನದ ಮಾತನಾಡಿದ. ಆಮೇಲೆ ಐವತ್ತು ರೂಪಾಯಿ ವಸೂಲಿ ಮಾಡಿಕೊಂಡು ಜಾಗ ಖಾಲಿ ಮಾಡ್ದ" ಎಂದೇಳಿದ ಮಾನೇಕ "ದೇವರು ನಿನ್ಗೆ ಒಳ್ಳೆದು ಮಾಡ್ಲಿ ಬೆನಿಮಾ, ಹೆಂಗೋ ಅವಳ ಜೀವ ಉಳಿಸು ನನ್ನ ತಾಯಿ!"

"ಏನೂ ಯೋಚ್ನೆ ಮಾಡ್ಬೇಡ ಮಾನೇಕ. ಎಲ್ಲ ಸರಿಹೋಗುತ್ತೆ" ಎಂದ ಬೆನಿಮಾ ಆತ್ಮವಿಶ್ವಾಸದಿಂದ ತನ್ನ ಕರ್ತವ್ಯದಲ್ಲಿ ತಲ್ಲೀನಳಾದಳು ತದೇಕಚಿತ್ತಳಾಗಿ. ಇನ್ನೂ ಹೊರಗಡೆ ನಿಂತು ನಿರೀಕ್ಷಿಸುತ್ತಿದ್ದವರಿಗೆ ಪ್ರಾಣ ಅಸ್ಥಿರತೆಯ ಆತಂಕದ ಎಳೆಯಲ್ಲಿ ನೇತಾಡುತ್ತಿದ್ದಂತೆ ತೋಚಿತು. ಬಲದೇವನ ಕಣ್ಣುಗಳು ಬಾಗಿದ ಮೇಲ್ಛಾವಣಿಯ ಕಡೆ ಥಟ್ಟನೆ ಹರಿದವು. ಯಾತನಾಮಯ ನೆನಪುಗಳು ಈಗ ನೆನಪಿಗೆ ಬಂದವು. ಮೊದಲನೆ ಹೆರಿಗೆ ಸುಲಲಿತವಾಗಿ ಜರುಗಿದ್ದರೆ, ಆ ಮಗು ಇಷ್ಟೊತ್ತಿಗಾಗಲೇ ದೊಡ್ಡದಿರುತ್ತಿತ್ತು ಅಷ್ಟಿಷ್ಟು. ಪಶ್ಲಿ ಈ ಚಿತ್ರಹಿಂಸೆ ಹಾಗೂ ಉದ್ವೇಗಗಳನ್ನೆಲ್ಲಾ ಅನುಭವಿಸಬೇಕಾಗುತ್ತಿರಲಿಲ್ಲ.

ದೀರ್ಘ ಸಮಯದ ನಿರೀಕ್ಷೆ ಭವ್ಯ ಆನಂದೋತ್ಸಾಹದಲ್ಲಿ ಕೊನೆ ಮುಟ್ಟುವುದೇ? ಅಥವಾ ನಾಳೆ ಎಂಬ ಅನಿಶ್ಚಿತತೆಯ ಸೆಳೆಬಲೆಯಲ್ಲಿ ಸಿಕ್ಕಿಕೊಳ್ಳುವುದೇ? ಸೂರ್ಯನ ತೆಳು ಕಿರಣಗಳು ಮೇಲ್ಛಾವಣಿಯ ಸದುವಿನ ಮೂಲಕ ನಿರಾಸಕ್ತಿಯಿಂದ ಹರಿದು ಬರುತ್ತಿದ್ದವಷ್ಟೆ. ಇಡೀ ವಾತಾವರಣ ಯಾವ ಕ್ಷಣದ ನಿರೀಕ್ಷೆಯಲ್ಲಿತ್ತೋ ಆ ಕ್ಷಣ ಈಗ ಲಯಬದ್ಧವಾದ ಸ್ವರಗತಿಯ ನೃತ್ಯದಲ್ಲಿ ದಿಢೀರನೆ ಮಿಂದೆದ್ದಿತು. ಊಹ್ವಾ... ಊಹ್ವಾ.... ಮಗುವಿನ ಪ್ರಪ್ರಥಮ ಅಳು, ನೃತ್ಯಕ್ಕೆ ಗಂಟೆ ಬಾರಿಸಿತು.

ಗಂಡು ಮಗು...! ಬೆನಿಮಾಳ ಕೋಮಲ, ಪ್ರೇಮಜನ್ಯ ಕರಗಳು, ಅದನ್ನು ಹೊರ ಜಗತ್ತಿಗೆ ತಂದಿಟ್ಟವು.

ಪಶಿಗೆ ಇನ್ನೂ ಪ್ರಜ್ಞೆ ಬಂದಿರಲಿಲ್ಲ.

ಕೃತಜ್ಞತೆಯ ಕಣ್ಣೀರು ಮಾನೇಕ ದೋಶಿಯ ಕೆನ್ನೆಗಳಿಂದ ಉರುಳಿ ಬೆನಿಮಾಳ ಪಾದಗಳ ಮೇಲೆ ತೊಟ್ಟಿಕ್ಕಿದವು.

ಚಟೇರ್ ಎಂದು ಕಿಟಕಿ ತೆರೆಯುತ್ತಾ, ಸಂತೋಷ ಸುದ್ದಿಯನ್ನು ಬೆನಿಮಾ ಎಲ್ಲರಿಗೂ ಹೇಳಿದಳು. ಬ ಬಲದೇವನೆಡೆ ತಿರುಗಿ "ಎಲ್ಲಿ ಕೊಡಪ್ಪ ತೆಂಗಿನಕಾಯಿ ಎಂದು ಕೇಳಿದಳು. ಕೊಠಡಿಯೊಳಕ್ಕೆ ಹೋಗ ಕಾತುರರಾಗಿ ತುದಿಗಾಲ ಮೇಲೆ ನಿಂತಿದ್ದ ಹೆಂಗಳೆ ಕಡೆ ಹೊರಳಿದ್ದ ಬೆನಿಮಾ ತೀಕ್ಷ್ಣವಾಗಿ ಹಾದರಗಿತ್ತೀರಾ! ಈ ತರಹ ಇನ್ನು ಮೇಲೆ ಮಾಡ್ಬೇ ನನ್ನ ಮನೇಲಿ ಬೇಕಾದರೆ ಮಕ್ಕಳು ಸತ್ತರೂ ಪರವಾಗಿ ನನಗೇನೂ ಬೇಸರವಿಲ್ಲ, ನಿಮ್ಮಲ್ಲಿ ಯಾವಳಿಗಾದ ಏನಾದ್ರೂ ಕೆಡುಕಾದ್ರೆ ನನ್ನ ಕರೀರಿ, ಅಂಜಿಕೆ ಮಾಡ್ಕೊಳ್ಳ

ಆದಾದ ಎಷ್ಟೋ ದಿನಗಳ ತರುವಾಯ ಒಂ ದಿನ ದಾರಿಯಲ್ಲಿ ಹೀಗೆ ಬೆನಿಮಾ ಮಾವಿನ ಹಣ್ಣುಗಳ ಮಾರುತ್ತ ಕುಳಿತಿದ್ದಳು. ಪಶಿ ಮತ್ತವಳ ಮಗು ಅ ದಾರಿಯಲ್ಲಿ ಬರುತ್ತಿದ್ದುದನ್ನು ನೋಡಿದಳು. "ಪ ಪಶಿಯನ್ನು ಪ್ರೀತಿಯಿಂದ ಅವಳು ಹಾಗೆ ಕರೆದಳ ಪಶಿಯೂ ಗೌರವ ಸೂಚಿಸಿದಳು ಅವಳ ವಾತ್ಸ ಪ್ರತಿಯಾಗಿ. ಮಗ ಹೇಗಿದ್ದಾನೆಂದು ಪಶಿಯನ್ನು ಬೆನಿಮ ಕೇಳಿದಳು. ಮಗುಗೆ ಈಗ ಒಂದು-ಒಂದೂ ವರ್ಷವೆಂದಳು. "ಲೇ... ಲೇ... ಲೇ..." ಅವನನ್ನು ಬೆನಿ ಹತ್ತಿರಕ್ಕೆ ಕರೆದಳು. ಮಗು ನಡಿಗೆಯ ಪ್ರದರ್ಶನ ಈಗಷ್ಟೇ ತಕ್ಕೆಗೆ ತೆಗೆದುಕೊಳ್ಳಲಾರಂಭಿಸಿದ್ದುದರಿಂದ ಅ ಬೆನಿಮಾಳೆಡೆ ಹೆಜ್ಜೆ ಹಾಕುವ ಖುಷಿಯಲ್ಲಿ ಮುಗ್ಗರಿಸಿ ದಿಢೀರನೆ ಪಶಿ ಅದರೆಡೆ ಆತುರದಿಂದ ಹೋಗಿ ಅ ಸಾಹಸವನ್ನು ತಡೆಯುತ್ತಾ "ಪಾಪು, ಬೆನಿಮಾಳ ಮುಟ್ಟಿಸಿಕೊಬಾರದಪ್ಪ!"

ಮಗುವಿನೆಡೆ ಚಾಚಿದ್ದ ಬೆನಿಮಾಳ ಕೈಗಳು ಇದ್ದಕ್ಕಿದ್ದ ಗಾಳಿಯಲ್ಲಿ ನಿರ್ಜೀವವಾದಂತೆ ನೇತಾಡಲಾರಂಭಿಸಿದ ಅವುಗಳಿಗೆ ಬರಸಿಡಿಲು ಬಡಿಯಿತೇನೋ ಎಂಬಂತೆ ನೆ ಮೇಲಿನ ಪಶಿಯ ಅಂಗಾತ ಭಂಗಿ, ನೋವಿನಿ ಯಮಯಾತನೆ ಅನುಭವಿಸುತ್ತಿದ್ದ ಅವಳ ಮುಖ ಬೆನಿಮಾಳ ಮನಸ್ಸಿಗೆ ನುಗ್ಗಿಬಂದವು ಆ ಕ್ಷಣದಲ್ಲಿ.

"ಆಯ್ತು ಬಿಡೇ ಹುಡ್ಗಿ, ಚೆನ್ನಾಗವ್ನೆ, ನೋ ಎಂದವಳೇ ಎದ್ದು ಸೀದಾ ಹೋಗಿ ದನದ ಕೊಟ್ಟಿಗೆಯ ಸ್ಟೌವ್ ಮೇಲಿದ್ದ ಕೆಟಲ್‌ನಿಂದ ಲೋಟಕ್ಕೆ ಬಗ್ಗಿಸಿಕೊಂಡಳು.

ದಾಲಿ, ರೂಭಿ ಹಾಗೂ ಮಂಜು, ನೆರೆಮನೆ ಹುಡುಗಿಯರು, ಅವರ ಕುತೂಹಲವೂ ಕೆರಳಿತ್ತು. ದೃಶ್ಯ ಅವರ ಕಣ್ಕಟ್ಟಿತ್ತು. "ನೋಡೊ ಅಲ್ಲಿ ಬೆನಿ ಹೋಯ್ತಾವಳೆ. ಪಶಿಯೊ ಅದೃಷ್ಟಿ ಚೆನ್ನಾಗಿತ್ತು. ಸಾ ಗೆದ್ದಳು. ಪಶಿನೇ ಖುದ್ದು ಹೇಳ್ತಾ ಅವಳೇ, ರಾಮಕಬೀರ ನಾನು ಕಟ್ಟಿಕ್ಕೊಂಡ ಹರಕೆಯ ಫಲ ಇದೆಲ್ಲ ಅಂತ."

'ಅದೃಷ್ಟ' ಎಂಬ ನಂಜು ಹಾಗೂ 'ರಾಮಕಬೀರ ಕಟ್ಟಿಕೊಂಡ ಹರಕೆ' ಮುಗ್ಧ ಮನಸ್ಸಿನ ಹಳ್ಳಿ ಅನುರೂಪವಾದ ಪತ್ನಿಯರನ್ನು ಮಲೀನಗೊಳಿಸಿಬಿಟ್ಟಿ

'ಅದೃಷ್ಟ' ಹಾಗೂ 'ರಾಮಕಬೀರರಿಗೆ ಕಟ್ಟಿಕೊ ಹರಕೆ' ಸುತ್ತೆಲ್ಲ ದೆವ್ವದಂತೆ ವ್ಯಾಪಿಸಿ, ಹಳ್ಳಿಗರ ಮನದ ಚಿರಸ್ಮರಣೀಯವಾಗುಳಿದು ಬೆನಿಮಾಳ ನೈಪುಣ್ಯತೆ ಮ ಕೌಶಲದ ಕೈಗಳ ಮೇಲೆ ಭಾರಿ ದ್ರೋಹವೆಸಗಿತ್ತು.

ಬೆನಿಮಾ ಮಾವಿನ ಹಣ್ಣಿನ ಬುಟ್ಟಿ ಹೊತ್ತು ಊರ ಸುತ್ತ ಹೋಗುತ್ತಿದ್ದಳು. ದಾರಿಯಲ್ಲಿ ಬೇವಿನಮರದ ನೆರ ಕೆಲವು ಪುಟಾಣಿಗಳು ಆಡುತ್ತಿದ್ದರು. ಆಕೆಯನ್ನು ಕ ಅವು "ಹೇ! ಜಾಡಮಾಲಿ, ದೂರ ಹೋಗೆ, ನಮ್ಮನ್ನು ಮಲಿನಗೊಳಿಸಬೇಡ. ಗೊತ್ತಾಗಲ್ವಾ ನಿನಗೆ ಹೋಗ್ಬೇಕು ಅಂತ?"

"ಮಕ್ಕಳೆ ದೂರಾನೇ ಇದ್ದೀನಲ್ಲಪ್ಪಾ" ಎಂದ ತಾಳ್ಮೆಯಿಂದ.

ಬೆನಿಮಾಳ ಮಸಕು ಕಣ್ಣುಗಳಿಗೆ ಈಗ ಅಲ್ಲಿ ಅ ಚಿತ್ರ ಕಾಣಿಸಿತು. ಈಗಾಕೆ ಅವರನ್ನು ಬಿಸಿಲಿನಿಂದ ನೆರ ಕರೆದು ಪ್ರಶ್ನಿಸಲಾಗಿ, ದಯಾಲೊ ಗುರುತು ಸಿಕ್ಕಿತು, ದಾಲಿ ಮಗ. ಬೆನಿಮಾ ತನ್ನಷ್ಟಕ್ಕೆ ತಾನೇ, ವಟಗುಟ್ಟಿಕೊಂಡ "ಸಾವು ಹೆಚ್ಚು ಕಡಿಮೆ ಅವನನ್ನು ನುಂಗಿತ್ತು... ನಾ ವರುಷಗಳ ಹಿಂದೆ... ನಾನು ಉಳಿಸಿದೆ ಇವರ ಪ್ರಾಣನಾ


ಆ ಕ್ಷಣದಲ್ಲಿ ಜಗತ್ತಿನ ಎಲ್ಲ ಸಂಕಟಗಳು ಬೆನಿಮಾ ಮೇಲೆ ಕವಿದವು. ಆದರೆ ಸಡೆದು ಬಳಲಿದ ಪಾದ ಮೇಲೆ ಮುಗ್ಗರಿಸಿದ ಅವಳ ಮೇಲೆ ವಯಸ್ಸಿನ ಭಾರ ಮಗುಚಿಕೊಂಡಿತು. ದಿಗಂತದೆಡೆ ನೋಡಿದಳು. ದಿನ ಇನ್ನೂ ಉಜ್ವಲ ಬೆಳಕಿನ ಚೆಂಡಾಗಿ ಉಳಿದಿರಲಿಲ್ಲ, ಕ ಭಯಂಕರ ಮೋಡಗಳು ಮುತ್ತಿದ್ದವು. ಬೆನಿಮಾ ನಿಟ್ಟು ಬಿಟ್ಟಳು. ಅಲ್ಲಿಂದ ಮೇಲೇಳುತ್ತಿದ್ದಂತೆ ಬೇವಿನ ಮ ಮೇಲಿಂದ ಕಾಯೊಂದು ಉದುರಿದ ಸದ್ದು ಕೇಳಿ ಬೆನಿಮಾಳಿಗೆ ದಯಾಲೋನ ಹೊಕ್ಕುಳ ಬಳ್ಳಿಯನ್ನು ಆ ಮುರಿದ ಸದ್ದು ಈಗ ನೆನಪಿಗೆ ಬಂದಿತು!


ಮೂಲ: ಇಂಡಿಯನ್ ಲಿಟರೇಚರ್‌ನಿಂದ ಆಯ್ದ


ಗುಜರಾತಿ ಮೂಲ: ಹರೀಶ್ ಮಂಗ


ಕನ್ನಡಕ್ಕೆ : ಸೊಂದಲಗೆರೆ ಲಕ್ಷ್ಮೀಪ

ಸಮಾಜವಾದದ ಮಗ್ಗಲುಗಳನ್ನು ತೋರುವ ಕೃತಿಗಳು









...ಟಕ ಸಮಾಜವಾದದ ಬಹುರೂಪಿ ನೆಲೆಗಳು
ಸಮಾಜವಾದಿಗಳ ಸಂದರ್ಶನ ಸಂಪುಟ-2
ಬಿ.ಪೀರ್‌ಬಾಷಾ
ಪುಟ: 320,
ಬೆಲೆ: 200 ರೂ.

ಸಮಾಜವಾದಿಗಳ ನೆನಪಿನ ಸಂಪುಟ
ಸಂ: ವಡ್ಡಗೆರೆ ನಾಗರಾಜಯ್ಯ
ಪುಟ: 445,
ಬೆಲೆ: 200 ರೂ.

ಲೋಹಿಯಾ: ವರ್ತಮಾನದ ಮುಖಾಮುಖಿ
ಸಂ: ಡಾ.ಎ.ಎಸ್.ಪ್ರಭಾಕರ
ಡಾ.ಶ್ರೀಪಾದ ಶೆಟ್ಟಿ
ಪು :616, ಬೆಲೆ: 300 ರೂ

ರಾಮಮನೋಹರ ಲೋಹಿಯಾ ಚಿಂತನೆ
ಸಂ: ನಟರಾಜ ಹುಳಿಯಾರ್
ಪು: 360 ಬೆಲೆ: 200 ರೂ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ, ವಿದ್ಯಾರಣ್ಯ-583276

...ನ್ನಡ ವಿಶ್ವವಿದ್ಯಾಲಯ ಹಂಪಿ, ಡಾ. ...ಮನೋಹರ ಲೋಹಿಯಾ ಜನ್ಮಶತಮಾನೋತ್ಸವದ ...ಲ್ಲಿ ನಾಲ್ಕು ಸಂಪುಟಗಳನ್ನು ಪ್ರಕಟಿಸಿದೆ. ...ವಾದಿಗಳ ಸಂದರ್ಶನ - ಸಂಪುಟ-2', ...ವಾದಿಗಳ ನೆನಪಿನ ಸಂಪುಟ' 'ಲೋಹಿಯಾ: ...ನದ ಮುಖಾಮುಖಿ', 'ರಾಮಮನೋಹರ ...ಯಾ ಚಿಂತನೆ' ಎಂಬ ಈ ಕೃತಿಗಳು ಕರ್ನಾಟಕದ ...ವಾದವನ್ನು ಅರ್ಥಮಾಡಿಕೊಳ್ಳಲು ಮತ್ತು ...ಯಾ ಚಿಂತನೆಯ ವರ್ತಮಾನದ ಜೀವಂತಿಕೆಯನ್ನು ... ಗಮನಾರ್ಹವಾಗಿವೆ.

...ವಿವಿಯ ಲೋಹಿಯಾ ಅಧ್ಯಯನ ಪೀಠ ...ಉತ್ತಮ ಕೆಲಸಗಳನ್ನು ಮಾಡಿದೆ. ರಹಮತ್ ...ಅವರು ಸಂಚಾಲಕರಾಗಿದ್ದಾಗ 'ಸಮಾಜವಾದಿಗಳ ... ಸಂಪುಟ-1', 'ಸಂಡೂರು ಭೂಹೋರಾಟ', ...ಭೂಹೋರಾಟ' ಕೃತಿಗಳನ್ನು ಪ್ರಕಟಿಸುವ ಮೂಲಕ ...ದ ಸಮಾಜವಾದಿ ಹೋರಾಟದ ಪುನರ್ ...ಶನಕ್ಕೆ ಒಂದು ಪ್ರವೇಶ ಒದಗಿಸಿದ್ದರು. ನಂತರ ... ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ...ಸ್.ಪ್ರಭಾಕರ್ ಅವರ ಸಂಚಾಲಕತ್ವದಲ್ಲಿ ಈ ...ನಾಲ್ಕು ಕೃತಿಗಳು ಪ್ರಕಟವಾಗಿವೆ. ಇವು ಕರ್ನಾಟಕ ...ವಾದದ ಭೂತ ವರ್ತಮಾನ ಭವಿಷ್ಯದ ...ಗಳನ್ನು ಕಾಣಿಸುವ ಕಾರಣಕ್ಕೆ ಚಾರಿತ್ರಿಕವಾಗಿಯೂ ...ವಾಗಿದೆ.

...ಮಾಜವಾದಿ ಹೋರಾಟಗಾರರ ಸಂದರ್ಶನ ...2' ನ್ನು ಸಿದ್ಧಪಡಿಸಿದವರು ಬಿ.ಪೀರ್‌ಬಾಷಾ. ...ಲ್ಲಿ ಯು.ಆರ್.ಅನಂತಮೂರ್ತಿ, ಎಂ.ಪಿ.ಪ್ರಕಾಶ್, ... ತಿಮ್ಮಪ್ಪ, ರವಿವರ್ಮಕುಮಾರ್, ಚಂಪಾ, ...ನಾಗವಾರ, ಎಂ.ನಾಗಪ್ಪ ಬಾಬುರೆಡ್ಡಿ ತುಂಬಲ್, ...ರ್ ಕೋಳಿ ಇವರುಗಳ ದೀರ್ಘ ಮಾತುಕತೆಗಳಿವೆ.

...ಹಿಂದೆ ಪೀರ್‌ಭಾಷಾ 'ಸಮಾಜವಾದಿ ...ಗಾರರ ಸಂದರ್ಶನ ಸಂಪುಟ-1'ರಲ್ಲಿ ಮೊದಲ ... ಹಿರಿಯ ಸಮಾಜವಾದಿಗಳಾದ ಪೊನ್ನಮ್ಮಾಳ್, ...ಸ್ವರಪ್ಪ ಹಿರಿಗುಂಗುಯ್ಯ ಪೂಜಾರ್, ಅಮ್ಮೆಂಬಳ ...ಸದಾಶಿವ ಕಾರಂತ, ಕಾಶೀನಾಥ ಬೇಲೂರೆ, ...ರೂಪಾಕ್ಷಪ್ಪ ಅಮ್ಮೆಂಬಳ ಬಾಳಪ್ಪ ಇವರುಗಳನ್ನು ...ದರು. ಈ ಎರಡೂ ಕೃತಿಗಳು ಕರ್ನಾಟಕದ ...ದವನ್ನು ಅದರೆಲ್ಲಾ ವೈರುಧ್ಯ ಮತ್ತು ಮಿತಿಗಳ ... ಅರ್ಥ ಮಾಡಿಕೊಳ್ಳಲು ದೊಡ್ಡ ಆಕರಗಳಾಗಿವೆ.

...ಮಾತುಕತೆಗಳಲ್ಲಿ ಕರ್ನಾಟಕದ ಸಮಾಜವಾದ ...ದು ರೂಪು ಪಡೆಯುತ್ತಾ ಹೋಗುತ್ತದೆ. ... ಚಳವಳಿಗಳ ಕುರಿತ ತಿಳುವಳಿಕೆ ಮತ್ತು ... ಒಳ್ಳೆಯ ಕಾರಣಕ್ಕೆ, ಬಿ.ಪೀರ್‌ಭಾಷಾ ... ಪ್ರಶ್ನೆಗಳ ಮೂಲಕ ಸಮಾಜವಾದವನ್ನು ಪರೀಕ್ಷೆಗೂ ಒಡ್ಡಿದ್ದಾರೆ. ಕೆಲವು ನಿಷ್ಠುರ ಪ್ರಶ್ನೆಗಳಿಗೆ ಸಮಾಜವಾದಿಗಳು ಉತ್ತರಿಸಲು ತಡವರಿಸಿರುವುದೂ, ವಿಷಯಾಂತರಗೊಳಿಸಿರುವುದು ಕಾಣುತ್ತಿದೆ. ಕಾಲಾನಂತರದಲ್ಲಿ ಸಮಾಜವಾದಿ ತಾತ್ವಿಕತೆಗೆ ವಿಮುಖರಾಗಿ ವ್ಯವಸ್ಥೆಯೊಂದಿಗೆ ರಾಜಿಯಾದ ಕೆಲವರ ತಪ್ಪೊಪ್ಪಿಗೆಯೂ ಇಲ್ಲಿದೆ. ಈ ಮಾತುಕತೆಗಳಲ್ಲಿ ಗತದ ಮೆಲುಕಷ್ಟೇ ಅಲ್ಲದೆ, ವರ್ತಮಾನದ ರಾಜಕೀಯಾರ್ಥಿಕ ವಿದ್ಯಮಾನಗಳ ಬಗ್ಗೆ ಸಮಾಜವಾದಿಗಳ ಗ್ರಹಿಕೆ ಮತ್ತು ಮುಖಾಮುಖಿ ವಿಶಿಷ್ಟವಾಗಿ ದಾಖಲಾಗಿದೆ.

ಈ ಸಂದರ್ಶನಗಳನ್ನು ಓದುತ್ತಿದ್ದರೆ 'ಸಂದರ್ಶನಕ್ಕೊಳಪಡುವ ಮತ್ತು ಪೂರ್ವ ಸಿದ್ಧತೆಗಳೊಂದಿಗೆ ಸಂದರ್ಶನ ಮಾಡುವ ಇಬ್ಬರು ವ್ಯಕ್ತಿಗಳು ಹೊಸ ಶೋಧಕ್ಕಾಗಿ ನಡೆಸುವ ರಚನಾತ್ಮಕ ಪ್ರಯತ್ನಗಳು' ಎನ್ನುವ ಎಡ್ವರ್ಡ್ ಸೈದ್ ಅವರ ಮಾತು ನೆನಪಾಗುತ್ತದೆ. ಈ ಸಂಪುಟದ ಪೀರ್‌ಭಾಷಾ ಅವರ ಪ್ರಸ್ತಾವನೆ ಕೂಡ ಸಮಾಜವಾದಿ ಹೋರಾಟವನ್ನು ವಿಮರ್ಶಾತ್ಮಕವಾಗಿ ಕಟ್ಟಿಕೊಡುತ್ತದೆ.


ಸಮಾಜವಾದಿಗಳ ನೆನಪಿನ ಸಂಪುಟವನ್ನು ವಡ್ಡಗೆರೆ ನಾಗರಾಜಯ್ಯ ಅವರು ಸಂಪಾದಿಸಿದ್ದಾರೆ. 33 ಜನ ತೀರಿಹೋದ ಹಿರಿಯ ಸಮಾಜವಾದಿಗಳ ವ್ಯಕ್ತಿ ಮತ್ತು ಹೋರಾಟದ ಚಿತ್ರಗಳನ್ನು ರಾಜ್ಯದ ಬೇರೆ ಬೇರೆ ಲೇಖಕರುಗಳು ಇಲ್ಲಿ ಕಟ್ಟಿಕೊಟ್ಟಿದ್ದಾರೆ. ಇದರಲ್ಲಿ ಮೂರು ತಲೆಮಾರಿನ ಸಮಾಜವಾದಿಗಳ ಹೋರಾಟದ ಬದ್ಧತೆ ಮತ್ತು ಕ್ರಿಯಾಶೀಲತೆಯ ಭಿನ್ನ ನೆಲೆಗಳನ್ನು ನೋಡಬಹುದು. ಈ ಸಂಪುಟದಲ್ಲಿ ದಾಖಲಾದ ಕೆಲವರಂತೂ ಕಾಲದ ಮರೆವಿಗೆ ಸರಿದವರು.

ಗರುಡಶರ್ಮ, ಪೊನ್ನಮ್ಮಾಳ್, ಎಸ್.ವೆಂಕಟರಾಮ್, ಎಸ್.ಎಸ್.ಕುಮುಟಾ, ಖಾದ್ರಿ ಶಾಮಣ್ಣ, ದಾಸನ್ ಸಾಲೊಮನ್, ಜಿ.ಎನ್.ಪದಕಿ, ಬಾ.ಸು.ಕೃಷ್ಣಮೂರ್ತಿ, ಸದಾಶಿವರಾಯ, ಮೆಳವರಿಗೆ ಮೈಲಪ್ಪ, ದಯಾನಂದ ನಾಡಕರ್ಣಿ, ಎಂ.ಎಂ.ಜಾತಿಸತ್ತಿ, ಸಿ.ಜಿ.ಕೆ ರೆಡ್ಡಿ, ಚನ್ನಬಸವ ನಾಯಕ ಸಂಗಾಪುರ, ಕುಪ್ಪಗಡ್ಡೆ, ಜಿ.ಆರ್.ಜಿ.ನಗರ್, ಯಜಮಾನ ಶಾಂತರುದ್ರಪ್ಪ, ಕಮಲಾದೇವಿ ಚಟ್ಟೋಪಧ್ಯಾಯ, ವಡ್ಡರ್ಸೆ, ವಿರೂಪಾಕ್ಷಪ್ಪ ಅಬ್ಬೀಗೇರಿ, ಗೋಪಾಲಗೌಡರು, ಎಮ್.ಡಿ.ನಂಜುಂಡಸ್ವಾಮಿ, ಎನ್.ಡಿ.ಸುಂದರೇಶ್, ಬಿ.ಕೃಷ್ಣಪ್ಪ ರಾಮದಾಸ್, ಲಂಕೇಶ್, ತೇಜಸ್ವಿ, ದಿನಕರ ದೇಸಾಯಿ, ಕೆ.ವಿ.ಸುಬ್ಬಣ್ಣ ಜೆ.ಹೆಚ್.ಪಾಟೀಲ್ ಮೊದಲಾದವರ ವ್ಯಕ್ತಿ ಚಿತ್ರಗಳು ಏಕಕಾಲಕ್ಕೆ ಕರ್ನಾಟಕದ ರಾಜಕೀಯ ಚರಿತ್ರೆಯ ಭಿನ್ನ ಆಯಾಮಗಳನ್ನು ಒದಗಿಸುತ್ತದೆ.

ಇಲ್ಲಿನ ಬಹುತೇಕ ವ್ಯಕ್ತಿತ್ವಗಳು ಸಮಾಜವಾದದ ಅಚ್ಚಿನಲ್ಲಿ ತೆಗೆದ ಪ್ರತಿಮೆಗಳಂತಿವೆ. ಅಂತೆಯೇ ಬಿಜಜೀವನದಲ್ಲೂ ಸಮಾಜವಾದವನ್ನು ಅನುಸರಿಸಿ ಕೊನೆದಿನಗಳಲ್ಲಿ ಕಡುಕಷ್ಟದ ಬಾಳುವೆ ನಡೆಸಿದವರೂ, ಚುನಾವಣಾ ರಾಜಕಾರಣಕ್ಕೆ ಧುಮುಕಿ ಸಮಾಜವಾದಿ ಆಶಯಗಳಿಗೆ ಬೆನ್ನು ತೋರಿದವರೂ ಒಟ್ಟೊಟ್ಟಿಗೆ ಇದ್ದಾರೆ. ಇಲ್ಲಿನ ವ್ಯಕ್ತಿ ಚಿತ್ರಗಳನ್ನು ಓದುತ್ತಿದ್ದರೆ, ಮೊದಲ ತಲೆಮಾರಿನ ಬದ್ಧತೆ ಎರಡು ಮತ್ತು ಮೂರನೆ ತಲೆಮಾರಿನ ಹೊತ್ತಿಗೆ ತೆಳುವಾಗುತ್ತಿರುವುದು ತಿಳಿಯುತ್ತದೆ. ಅಂತೆಯೇ ಲಂಕೇಶ್, ತೇಜಸ್ವಿ, ದಿನಕರ ದೇಸಾಯಿ, ಕೆ.ವಿ.ಸುಬ್ಬಣ್ಣ ಅವರುಗಳ ವ್ಯಕ್ತಿಚಿತ್ರಗಳನ್ನು ನೋಡುತ್ತಿದ್ದರೆ, ಕನ್ನಡ ಸಾಹಿತ್ಯದೊಳಗಣ ಸಮಾಜವಾದದ ಸ್ವರೂಪವನ್ನೂ ಅರಿಯುವಂತಿದೆ.

'ಲೋಹಿಯಾ ವರ್ತಮಾನದ ಮುಖಾಮುಖಿ' ಕೃತಿಯನ್ನು ಡಾ.ಎ.ಎಸ್.ಪ್ರಭಾಕರ್ ಮತ್ತು ಡಾ.ಶ್ರೀಪಾದ ಶೆಟ್ಟಿ ಅವರು ಸಂಪಾದಿಸಿದ್ದಾರೆ. ಈ ಕೃತಿಯಲ್ಲಿ ಲೋಹಿಯಾ ವ್ಯಕ್ತಿತ್ವ, ಲೋಹಿಯಾವಾದದ ಮೀಮಾಂಸೆ, ಕರ್ನಾಟಕ ಮತ್ತು ಲೋಹಿಯಾವಾದ ಎಂಬ ಮೂರು ಭಾಗಗಳಲ್ಲಿ 30 ಲೇಖನಗಳನ್ನು ಒಟ್ಟಾಗಿಸಲಾಗಿದೆ. ಇದರಲ್ಲಿ ಜೋಕಿಮ್ ಓಯೆಸ್ತರ್‌ಹೆಲ್ಡ್, ಕಿಷನ್ ಪಟ್ನಾಯಕ್, ಸುನಿಲ್, ಅಮಿತ್ ಬಸೋಲೆ, ಪ್ರೊ.ಆನಂದ್ ಕುಮಾರ್, ಡಾ. ಕುಂಕುಮ್ ಯಾದವ್, ಯೋಗೇಂದ್ರ ಯಾದವ್,

ಪುಸ್ತಕ ವಿಮರ್ಶೆ



• ಅರುಣ್ ಜೋಳದಕೂಡ್ಲಿಗಿ

ಚಂದನ್ ಗೌಡ ಮೊದಲಾದವರ ಲೋಹಿಯಾ ಚಿಂತನೆ ಕುರಿತು ಬಂದ ವಿಮರ್ಶಾತ್ಮಕ ಇಂಗ್ಲಿಷಿನ ಲೇಖನಗಳನ್ನು ಕನ್ನಡಕ್ಕೆ ತರಲಾಗಿದೆ. ಈ ಮೂಲಕ ಇಂಡಿಯಾದ ವ್ಯಾಪ್ತಿಯಲ್ಲಿ ಲೋಹಿಯಾ ಚಿಂತನೆಯ ಪ್ರಸ್ತುತತೆಯ ಬಗ್ಗೆ ಒಳನೋಟದ ಬರಹಗಳಿವೆ.

ಅಂತೆಯೇ ಅನಂತಮೂರ್ತಿ, ಕೆ.ವಿ.ನಾರಾಯಣ, ಲಂಕೇಶ್, ಚಂಪಾ, ಹುಳಿಯಾರ್, ಶಿವಸುಂದರ್, ರಹಮತ್ ತರೀಕೆರೆ, ರಾಜೇಂದ್ರ ಚೆನ್ನಿ, ಪೀರ್‌ಬಾಷಾ, ಹಿ.ಚಿ.ಬೋರಲಿಂಗಯ್ಯ ಮೊದಲಾದವರು ಕರ್ನಾಟಕದಲ್ಲಿ ಲೋಹಿಯಾವಾದದ ಪ್ರಸ್ತುತತೆ ಮತ್ತು ಕರ್ನಾಟಕ ಸಂದರ್ಭದ ಪ್ರಭಾವ ಪ್ರೇರಣೆಯನ್ನು ಬೇರೆ ಬೇರೆ ನೆಲೆಗಳಲ್ಲಿ ಗುರುತಿಸಲು ಪ್ರಯತ್ನಿಸಿದ್ದಾರೆ. ತಾರಿಣಿ ಶುಭದಾಯಿನಿ, ಎಂ.ಎಸ್.ಆಶಾದೇವಿ ಅವರು ಲೋಹಿಯಾ ಅವರು ಗ್ರಹಿಕೆಯ ಮಹಿಳಾ ನೆಲೆಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದ್ದಾರೆ. ಈ ಕೃತಿಗೆ ಸಂಪಾದಕರು ಬರೆದ ಪ್ರಸ್ತಾವನೆ ಕೂಡ ಗಂಭೀರ ಪ್ರಶ್ನೆಗಳಿಗೆ ಮುಖಾಮುಖಿಯಾದಂತಿದೆ.

ರಾಮಮನೋಹರ ಲೋಹಿಯಾ ಚಿಂತನೆ ಕೃತಿಯನ್ನು ನಟರಾಜ ಹುಳಿಯಾರ್ ಅವರು ಸಂಪಾದಿಸಿದ್ದಾರೆ. ಈ ಕೃತಿ ವಿವಿ ಪ್ರಸಾರಾಂಗದ ಮರುಮುದ್ರಣ. ಇಲ್ಲಿ ಲೋಹಿಯಾ ಅವರ ಪ್ರಮುಖ ಪ್ರಖರ ಚಿಂತನೆಗಳನ್ನು ಒಟ್ಟಾಗಿಸಿದ್ದಾರೆ. ಇದು ಹೊಸ ತಲೆಮಾರು ಲೋಹಿಯಾ ಅವರನ್ನು ಗ್ರಹಿಸಲು ಉತ್ತಮ ಸಂಕಲನವಾಗಿದೆ. ಈ ಕೃತಿಗೆ ಬರೆದ ಹುಳಿಯಾರರ ಪ್ರಸ್ತಾವನೆ ಲೋಹಿಯಾ ಚಿಂತನೆಗೆ ಪರಿಣಾಮಕಾರಿ ಪ್ರವೇಶಿಕೆಯನ್ನು ಒದಗಿಸುತ್ತದೆ.

ರಾಮಮನೋಹರ ಲೋಹಿಯಾ ಅವರು ಭಾರತಕ್ಕೆ ವಿಶಿಷ್ಟವಾದ ಸಮಾಜವಾದಿ ಆಲೋಚನಕ್ರಮವನ್ನು ರೂಪಿಸಿದವರು. ಭಾರತದ ಎಲ್ಲ ಮುಖ್ಯ ಸವಾಲುಗಳ ಬಗ್ಗೆ ಆಳವಾಗಿ ಚಿಂತಿಸಿದವರು. ಇದರ ಪರಿಣಾಮ ಕರ್ನಾಟಕದ ಆಲೋಚನಾ ಕ್ರಮವನ್ನೂ ಗಾಢವಾಗಿ ಪ್ರಭಾವಿಸಿದೆ. ಅದು ಭೂಹೋರಾಟ, ರೈತ ಚಳವಳಿಗಳ ಸ್ವರೂಪದಲ್ಲಿಯೂ, ಕರ್ನಾಟಕದ ರಾಜಕೀಯ ಚಿಂತನೆಯಲ್ಲಿಯೂ, ಈ ನಾಡು ಕಂಡ ಎಲ್ಲಾ ಪ್ರಗತಿಪರ ಚಳವಳಿಗಳ ತಾತ್ವಿಕತೆಯಲ್ಲಿಯೂ, ಸಾಹಿತ್ಯದ ಸೃಜನಶೀಲತೆಯಲ್ಲಿಯೂ ತನ್ನ ಸ್ವರೂಪದ ಮೈಪಡೆದು ಹೊಮ್ಮಿದೆ. ಹಾಗಾಗಿ ಈ ಕೃತಿಗಳಲ್ಲಿ ಲೋಹಿಯಾ ಮತ್ತು ಕರ್ನಾಟಕ ಸಮಾಜವಾದದ ಬಹುರೂಪಿ ನೆಲೆಗಳು ಎದುರುಬದುರಾದಂತಿವೆ.

ಪೀರ್‌ಭಾಷಾ ಉಲ್ಲೇಖಿಸಿದಂತೆ ಅನಂತಮೂರ್ತಿಯವರ ಸಂದರ್ಶನ ಮೊಟಕುಗೊಂಡಂತಿರುವುದು, ಜಾರ್ಜ್ ಫರ್ನಾಂಡಿಸ್, ದೇವನೂರು ಮಹಾದೇವ ಅವರ ಸಂದರ್ಶನ ಸಾಧ್ಯವಾಗಿಲ್ಲದಿರುವುದು ಸಂದರ್ಶನ ಸಂಪುಟದ ಮಿತಿಯಾಗಿದೆ. ಅಂತೆಯೇ ವಡ್ಡಗೆರೆ ನಾಗರಾಜಯ್ಯ ಅವರು ನೆನಪಿನ ಸಂಪುಟದ ವ್ಯಕ್ತಿತ್ವಗಳನ್ನು ಆಧರಿಸಿಯೇ ಕರ್ನಾಟಕ ಸಮಾಜವಾದದ ಮೂರು ತಲೆಮಾರಿನ ಭಿನ್ನ ನೆಲೆಗಳನ್ನು ಗುರುತಿಸಿ ಗಂಭೀರ ಪ್ರಸ್ತಾವನೆ ಬರೆಯಬಹುದಿತ್ತು; ಅದಿಲ್ಲಿ ಅವರಿಗೆ ಸಾಧ್ಯವಾಗಿಲ್ಲ. ಇಂತಹ ಮಿತಿಗಳ ಮಧ್ಯೆ ಕರ್ನಾಟಕ ಸಮಾಜವಾದದ ವಿವಿಧ ಮಗ್ಗಲುಗಳನ್ನು ಈ ಕೃತಿಗಳು ಕೈಹಿಡಿದು ತೋರುತ್ತವೆ. ವಿಮರ್ಶಾತ್ಮಕ ನೆಲೆಗಿಂತ, ಆರಾಧನಾ ನೆಲೆಯಲ್ಲಿಯೇ ವಿಶ್ವವಿದ್ಯಾಲಯಗಳ ಬಹುತೇಕ ಅಧ್ಯಯನ ಪೀಠಗಳು ಜಡವಾಗುತ್ತಿರುವಾಗ, ಲೋಹಿಯಾ ಪೀಠ ಈ ನೆಲೆಯಲ್ಲಿ ಮಾದರಿಯಾಗಿದೆ.

ಲೋಹಿಯಾ ಪೀಠದ ಮುಂದಿನ ಯೋಜನೆಗಳ ಬಗ್ಗೆ ಈ ಕೃತಿಗಳಲ್ಲಿ ಉಲ್ಲೇಖವಿದೆ. ಅದನ್ನು ಪೀಠದ ಸದ್ಯದ ಸಂಚಾಲಕರಾದ ಡಾ.ಎ.ಶ್ರೀಧರ್ ಅವರು ಮುತುವರ್ಜಿಯಿಂದ ನಿರ್ವಹಿಸಬೇಕಿದೆ. ಅಂತೆಯೇ ಲೋಹಿಯಾ ಪೀಠವನ್ನು ಇನ್ನಷ್ಟು ಕ್ರಿಯಾಶೀಲಗೊಳಿಸುವ ಜವಾಬ್ದಾರಿ ಸಮಾಜವಾದಿ ಆಶಯದ ಕುಲಪತಿಗಳಾದ ಪ್ರೊ.ಹಿ.ಚಿ. ಬೋರಲಿಂಗಯ್ಯ ಅವರ ಮೇಲೂ ಇದೆ. ಇಂದು ಎಲೆಕ್ಟ್ರಾನಿಕ್ ಓದುಗರ ಸಂಖ್ಯೆ ಹೆಚ್ಚುತ್ತಿರುವುದರಿಂದ ಪುಸ್ತಕಗಳ ಜತೆ ಇ-ಆವೃತ್ತಿಯ ಸಿಡಿ ಕೊಡುವ ಯೋಚನೆಯನ್ನೂ ವಿವಿ ಮಾಡಬೇಕಿದೆ. ಆಸಕ್ತರು ಅಂತರ್ಜಾಲದಲ್ಲಿ ಕನ್ನಡ ವಿಶ್ವವಿದ್ಯಾಲಯದ ಪುಸ್ತಕಗಳನ್ನು [illegible] ಬಗ್ಗೆಯೂ ಯೋಚಿಸಬೇಕಿದೆ. ●

ಕೋರೇಗಾಂವ್ ಎಂಬ ಶೋಷಿತರು ನಡೆಸಿದ ಶ್ರೇಷ್ಠ ಯುದ್ಧ...



ಭಾರತದ ಇತಿಹಾಸದಲ್ಲಿ ನಡೆದಿರುವ ವಿವಿಧ ಯುದ್ಧಗಳಲ್ಲಿ, ಬರೀ ಆ ರಾಜರು ಈ ರಾಜರ ವಿರುದ್ಧ ಮಹಮ್ಮದೀಯರು ಬ್ರಿಟಿಷರ ವಿರುದ್ಧ ಬ್ರಿಟಿಷರು ಫ್ರೆಂಚರ ವಿರುದ್ಧ, ಫ್ರೆಂಚರು ಡಚ್ಚರ ವಿರುದ್ಧ... ಹೀಗೆ ಸಾಮ್ರಾಜ್ಯಶಾಹಿಗಳು ನಡೆಸಿದ ಯುದ್ಧಗಳ ಬಗ್ಗೆಯಷ್ಟೆ ಚರಿತ್ರೆ ದಾಖಲಿಸಲಾಗಿದೆ. ಆದರೆ ಶೋಷಿತರು ಮೇಲ್ಜಾತಿ ಶೋಷಕರ ವಿರುದ್ಧ ಅವರ ಶೋಷಣೆಯ ನಡವಳಿಕೆಯ ವಿರುದ್ಧ ಯುದ್ಧ ಘೋಷಿಸಿದ, ನಡೆಸಿ ಗೆಲುವು ದಾಖಲಿಸಿದ ಬಗ್ಗೆ ಎಲ್ಲಿಯೂ ದಾಖಲಾಗಿಲ್ಲ! ಇತಿಹಾಸ ಕೃತಿಯ ಯಾವ ಪುಟದಲ್ಲೂ ಅಂತಹದ್ದೊಂದು ಯುದ್ಧದ ಬಗ್ಗೆ ಉಲ್ಲೇಖವಿಲ್ಲ. ಯಾಕೆ? ಖಂಡಿತ ಅದು ಶೋಷಿತ ಸಮುದಾಯದ ಬಗೆಗಿನ ಇತಿಹಾಸಕಾರರ ತಾತ್ಸಾರವಷ್ಟೆ!

ಈ ನಿಟ್ಟಿನಲ್ಲಿ ಶೋಷಿತರು ಶೋಷಕ ಶಕ್ತಿಗಳ ವಿರುದ್ಧ ಸಾರಿದ ಯುದ್ಧದ ಬಗ್ಗೆ ಹೇಳಲೇಬೇಕಾಗುತ್ತದೆ. ಖಂಡಿತ, ಆ ಯುದ್ಧ ಕೋರೇಗಾಂವ್ ಯುದ್ಧ. ಭೀಮಾ ತೀರದಲ್ಲಿ ನಡೆದಿದ್ದರಿಂದ ಅದು ಇತಿಹಾಸದಲ್ಲಿ 'ಭೀಮಾ ಕೋರೇಗಾಂವ್ ಯುದ್ಧ'ವೆಂದೇ ಪ್ರಸಿದ್ಧವಾಗಿದೆ. ಹಾಗಿದ್ದರೆ ಆ ಯುದ್ಧ ಯಾರ ವಿರುದ್ಧ ನಡೆಯಿತು? ಯಾರು ನಡೆಸಿದರು? ಎಂಬ ಪ್ರಶ್ನೆ ಮೂಡುತ್ತದೆ. 1818ರ ಹೊಸ ವರ್ಷದ ಸಂದರ್ಭದಲ್ಲಿ ನಡೆದ ಆ ಯುದ್ಧದ ವಿವರಗಳನ್ನು ಹೇಳುವುದಕ್ಕೂ ಮುನ್ನ ಆ ಸಮಯದಲ್ಲಿ ಇದ್ದ ಸಾಮಾಜಿಕ ಸ್ಥಿತಿಗತಿಯನ್ನು ದಾಖಲಿಸುವುದು ಸೂಕ್ತವೆನಿಸುತ್ತದೆ. ಹೌದು, 1818 ಅದು ಮಹಾರಾಷ್ಟ್ರದಲ್ಲಿ ಪೇಶ್ವೆಗಳ ಆಡಳಿತದ ಕಾಲ. ಆಗಿನ ಪೇಶ್ವೆ ಅಥವಾ ಬ್ರಾಹ್ಮಣ ಮಂತ್ರಿ 2ನೇ ಬಾಜೀರಾಯ. ಪೇಶ್ವೆಗಳ ಆ ಕಾಲದಲ್ಲಿ ಸಾಮಾಜಿಕ ಪರಿಸ್ಥಿತಿ ಹೇಗಿತ್ತು? ಅಂಬೇಡ್ಕರರ ಪ್ರಕಾರವೇ ಹೇಳುವುದಾದರೆ "ಮರಾಠರ ರಾಜ್ಯದಲ್ಲಿ ಪೇಶ್ವೆಗಳ ಆಡಳಿತದಲ್ಲಿ, ಅಸ್ಪೃಶ್ಯರ ನೆರಳು ಹಿಂದೂವೊಬ್ಬನ ಮೇಲೆ ಬಿದ್ದು ಆತ ಮಲಿನವಾಗುವುದನ್ನು ತಪ್ಪಿಸಲು ಸಾರ್ವಜನಿಕ ಬೀದಿಗಳಲ್ಲಿ ಅಸ್ಪೃಶ್ಯರಿಗೆ ಪ್ರವೇಶವನ್ನು ನಿರಾಕರಿಸಲಾಗಿತ್ತು. ಒಂದು ವೇಳೆ ಅಸ್ಪೃಶ್ಯನೊಬ್ಬನನ್ನು ಹಿಂದೂವೊಬ್ಬ ಮುಟ್ಟಿ ಆತ ಮಲಿನಗೊಳ್ಳುವುದನ್ನು ತಪ್ಪಿಸಲು ಅಸ್ಪೃಶ್ಯನು ತನ್ನ ಕುತ್ತಿಗೆಗೆ ಅಥವಾ ಮುಂಗೈಗೆ ಕಪ್ಪು ದಾರವೊಂದನ್ನು ಕಟ್ಟಿಕೊಳ್ಳುವುದು ಆ ದಿನಗಳಲ್ಲಿ ಕಡ್ಡಾಯವಾಗಿತ್ತು. ಅಲ್ಲದೆ ಪೇಶ್ವೆಗಳ ರಾಜಧಾನಿಯಾದ ಪೂನಾದಲ್ಲಿ ಹಿಂದೂಗಳು ಅಸ್ಪೃಶ್ಯನೋರ್ವ ನಡೆದ ದಾರಿಯಲ್ಲಿ ನಡೆದು ಮಲಿನಗೊಳ್ಳುವುದನ್ನು ತಡೆಯಲು ಅಸ್ಪೃಶ್ಯನು ತನ್ನ ನಡುವಿಗೆ ಹಗ್ಗವೊಂದನ್ನು ಬಿಗಿದು ಅದಕ್ಕೆ ಕಸಪೊರಕೆಯೊಂದನ್ನು ಕಟ್ಟಿ ತಾನು ನಡೆದ ದಾರಿಯನ್ನು ಆತ ಗುಡಿಸಬೇಕಾಗಿತ್ತು! ಅದಲ್ಲದೆ ಅದೇ ಪೂನಾ ನಗರದಲ್ಲಿ ಅಕಸ್ಮಾತ್ ಅಸ್ಪೃಶ್ಯನೊಬ್ಬ ದಾರಿಯಲ್ಲಿ ಉಗಿದು, ಆ ಉಗುಳನ್ನು ಹಿಂದೂವೊಬ್ಬ ತುಳಿದು ಆತ ಮಲಿನವಾಗುವುದನ್ನು ತಪ್ಪಿಸಲು ಅಸ್ಪೃಶ್ಯ ತನ್ನ ಕೊರಳಿಗೆ ಮಣ್ಣಿನ ಮಡಕೆಯೊಂದನ್ನು ನೇತುಹಾಕಿಕೊಳ್ಳಬೇಕಾಗುತ್ತಿತ್ತು ಮತ್ತು ಉಗಿಯಬೇಕೆಂದಾಗ ಆತ ಆ ಮಡಕೆಯಲ್ಲಿ ಉಗಿಯಬೇಕಾಗಿತ್ತು"!

ಇಂತಹ ಸಾಮಾಜಿಕ ದುಸ್ಥಿತಿಯ ಸಂದರ್ಭದಲ್ಲಿ ಮಹಾರಾಷ್ಟ್ರದ ಅಸ್ಪೃಶ್ಯರಾದ ಮಹಾರರಿಗೆ ದೌರ್ಜನ್ಯಕೋರ ಪೇಶ್ವೆಗಳ ಮತ್ತವರ ಸಾಮ್ರಾಜ್ಯದ ವಿರುದ್ಧ ಹೋರಾಡುವ ಅದ್ಭುತ ಅವಕಾಶವೊಂದು ಬಂತು. ಅದೇ ಕೋರೇಗಾಂವ್ ಯುದ್ಧ! ಇದೇನು ಅಸ್ಪೃಶ್ಯರು ಮೇಲ್ಜಾತಿಗಳ ವಿರುದ್ಧ, ಅವರ ದೌರ್ಜನ್ಯದ ವಿರುದ್ಧ ನೇರಾನೇರ ಕಾದಾಟಕ್ಕಿಳಿದದ್ದಲ್ಲ. ಆದರೆ ಯಾವ ಜಾತಿ/ವರ್ಣ ವ್ಯವಸ್ಥೆಯಲ್ಲಿ ಶಸ್ತ್ರಹಿಡಿಯುವುದು ಇಂತಹ ಜಾತಿಗೆ/ವರ್ಣಕ್ಕೆ ಎಂದು ಮೀಸಲಾಗಿತ್ತೋ ಅಂತಹ ಶ್ರೇಣೀಕೃತ ಜಾತಿ ವ್ಯವಸ್ಥೆಯ ಸಮಯದಲ್ಲಿ ಬ್ರಿಟಿಷರ ಪರವಾಗಿ, ಅವರ ಸೇನೆಯಲ್ಲಿ ಸೈನಿಕರಾಗಿಯಷ್ಟೆ ಅಸ್ಪೃಶ್ಯ ಮಹಾರರು ಕಾದಾಡಿದ್ದು.

ಅಂಬೇಡ್ಕರರ 'ಬರಹಗಳು ಮತ್ತು ಭಾಷಣಗಳು, ಸಂಪುಟ 17, ಭಾಗ 3 (ಇಂಗ್ಲಿಷ್ ಆವೃತ್ತಿ)' ಪುಟ 4ರ ಪ್ರಕಾರ ಹೇಳುವುದಾದರೆ "ಭೀಮಾ ನದಿಯ ತೀರದಲ್ಲಿದ್ದ ಆ ಕೋರೇಗಾಂವ್ ರಣಾಂಗಣದಲ್ಲಿ ಬಾಂಬೆ ರೆಜಿಮೆಂಟ್‌ನ ಕೇವಲ 500 ಜನ ಮಹಾರ್ ಕಾಲ್ದಳದ ಸೈನಿಕರು ಪೂನಾದ 250 ಅಶ್ವದಳದವರ ನೆರವಿನೊಂದಿಗೆ, ಜೊತೆಗೆ ಮದ್ರಾಸ್‌ನ 24 ಗನ್‌ಮೆನ್‌ಗಳ ಸಹಾಯದಿಂದ 20000 ಅಶ್ವದಳವಿದ್ದ 8000ದಷ್ಟು ಕಾಲ್ದಳವಿದ್ದ ಪೇಶ್ವೆಯ ಬೃಹತ್ ಸೇನೆಯ ವಿರುದ್ಧ 1818 ಜನವರಿ 1ರಂದು ಬೆಳಗ್ಗೆ 9 ರಿಂದ ರಾತ್ರಿ 9 ಗಂಟೆಯ ತನಕ ಸತತ 12 ಗಂಟೆಗಳು ಯಾವುದೇ ವಿಶ್ರಾಂತಿ-ಆಯಾಸವಿಲ್ಲದೆ, ಆಹಾರ-ನೀರಿನ ಪರಿವಿಲ್ಲದೆ ಕ್ಯಾಪ್ಟನ್ ಎಫ್.ಎಫ್.ಸ್ಟಾಂಟನ್‌ನ ನೇತೃತ್ವದಲ್ಲಿ ಜಯಿಸುತ್ತಾರೆ"!

ಸವಿಸ್ತಾರವಾಗಿ ಹೇಳುವುದಾದರೆ ಕ್ಯಾಪ್ಟನ್ ಸ್ಟಾಂಟನ್‌ನ ನೇತೃತ್ವದಲ್ಲಿ ಸಿರೂರ್‌ನಿಂದ 1818 ಡಿಸೆಂಬರ್ 31ರ ರಾತ್ರಿ ಹೊರಟ ಮಹಾರ್ ಸೇನೆ ಸತತ 27 ಕಿ.ಮೀ.ಗಳು ನಡೆದು ಮಾರನೇ ದಿನ 1ನೇ ತಾರೀಖು ಬೆಳಗ್ಗೆ ಕೋರೇಗಾಂವ್ ರಣಾಂಗಣವನ್ನು ತಲುಪುತ್ತದೆ. ಅದೇ ಸಮಯದಲ್ಲಿ ಮೂರೂ ದಿಕ್ಕುಗಳಿಂದ ತಲಾ 600ರಷ್ಟಿದ್ದ ಪೇಶ್ವೆಯ ಕಾಲ್ದಳದ ಮೂರು ತುಕಡಿಗಳು ಕ್ಯಾಪ್ಟನ್ ಸ್ಟಾಂಟನ್‌ನ ಪಡೆಯನ್ನು ಸುತ್ತುವರೆಯುತ್ತವೆ. ಅಲ್ಲದೆ ಪೇಶ್ವೆಯ ಈ ಸೈನ್ಯದ ಬೆಂಬಲಕ್ಕೆ ಬೃಹತ್ ಅಶ್ವದಳ, ರಾಕೆಟ್‌ದಳ ಬೇರೆ! ಒಟ್ಟಾರೆ ಸಂದಿಗ್ಧ ಸ್ಥಿತಿಯಲ್ಲಿ ಬ್ರಿಟಿಷ್ ಸೇನೆಯು ಪೇಶ್ವೆಗಳ ಕಾಲ್ದಳ ಮತ್ತು ಫಿರಂಗಿದಳಗಳಿಂದ ಸಂಪೂರ್ಣ ವೃತ್ತಾಕಾರ ಮಾದರಿಯಲ್ಲಿ ಸುತ್ತುವರಿಯಲ್ಪಡುತ್ತದೆ. ಹೇಗೆಂದರೆ ಪಕ್ಕದಲ್ಲೇ ಇದ್ದ ಭೀಮಾ ನದಿಗೆ ಹೋಗುವ ದಾರಿಗಳೆಲ್ಲ ಬಂದ್ ಆಗುವ ಮಟ್ಟಿಗೆ! ಕಡೆಗೆ ವಿಧಿಯಿಲ್ಲದೆ ಎರಡೂ ದಳಗಳೂ ಕೋರೇಗಾಂವ್ ಗ್ರಾಮವನ್ನು ಪ್ರವೇಶಿಸುತ್ತವೆ. ಕೋರೇಗಾಂವ್ ಗ್ರಾಮವನ್ನು ಪ್ರವೇಶಿಸಿದ್ದೇ ತಡ, ಎರಡೂ ಪಡೆಗಳು ಬೀದಿಬೀದಿಗಳಲ್ಲಿ, ಮನೆ-ಗುಡಿಸಲುಗಳ ಮುಂದೆ ಕೈಕೈ ಮಿಲಾಯಿಸುತ್ತಾ ನೇರಾ-ನೇರ ಕಾದಾಟಕ್ಕಿಳಿಯುತ್ತವೆ. ಆದರಲ್ಲೂ ಬಹುತೇಕ ಮಹಾರರೇ ತುಂಬಿದ್ದ ಬ್ರಿಟಿಷ್ ಸೈನ್ಯಕ್ಕೆ ಬಹಳ ಹಾನಿಯಾಗುತ್ತದೆ. ಆದರೂ ಎದೆಗುಂದದ ಮಹಾರ್ ಸೈನಿಕರು ಅತ್ಯುತ್ಕೃಷ್ಟ ಧೈರ್ಯದಿಂದ ಮುನ್ನುಗ್ಗುತ್ತಲೇ ಹೋಗುತ್ತಾರೆ. ಪಡೆಯ ನೇತೃತ್ವ ವಹಿಸಿದ್ದ ಕ್ಯಾಪ್ಟನ್ ಸ್ಟಾಂಟನ್‌ನಂತೂ "ಕಡೆಯ ಸೈನಿಕನಿರುವ ತನಕ, ಕಡೆಯ ಬುಲೆಟ್ ಇರುವತನಕ ಹೋರಾಡುತ್ತಲೇ ಇರಿ" ಎಂದು ಹುರಿದುಂಬಿಸುತ್ತಲೇ ಇರುತ್ತಾನೆ. ಪರಿಣಾಮವಾಗಿ ಮಹಾರ್ ಸೈನಿಕರು ಅತ್ಯಮೋಘ ಧೈರ್ಯದಿಂದ, ಎಲ್ಲಾ ದುರಾದೃಷ್ಟಗಳ ನಡುವೆ ಹೋರಾಡುತ್ತ ವೀರಾವೇಶದಿಂದ ಮುನ್ನುಗ್ಗುತ್ತಾರೆ.

ಅಂದಹಾಗೆ ಮಹಾರ್ ಸೈನಿಕರ ಅಂತಹ ಮುನ್ನುಗ್ಗುವಿಕೆಯಲ್ಲಿ ಅದೆಂತಹ, ಅದೆಷ್ಟು ಶತಮಾನಗಳ ನೋವಿನ ಆಕ್ರೋಶವಿತ್ತು? ತತ್ಫಲವಾಗಿ ಬಹುಸಂಖ್ಯೆಯಲ್ಲಿದ್ದರೂ ಕೂಡ ಪೇಶ್ವೆಯ ಸೈನ್ಯ ಹಿಮ್ಮೆಟ್ಟಿ ಸೋತು ರಾತ್ರಿ 9 ಗಂಟೆಗೆ ಗುಂಡಿನ ದಾಳಿಯನ್ನು ನಿಲ್ಲಿಸುತ್ತದೆ ಹಾಗೂ ವಿಧಿಯಿಲ್ಲದೆ ಕೋರೇಗಾಂವ್‌ನಿಂದ ರಾತ್ರೋರಾತ್ರಿ ಕಾಲ್ಕೀಳುತ್ತದೆ!

ಒಟ್ಟಾರೆ ಅತ್ಯಮೋಘ ಧೈರ್ಯ ಮತ್ತು ಶಿಸ್ತುಬದ್ಧ ಶೌರ್ಯವನ್ನು ಪ್ರದರ್ಶಿಸಿದ ಮಹಾರ್ ಸೈನಿಕರು ಶೋಷಕ ಪೇಶ್ವೆಗಳ ವಿರುದ್ಧ ಅಭೂತಪೂರ್ವ ಜಯ ದಾಖಲಿಸುತ್ತಾರೆ. ಅಂದಹಾಗೆ ಈ ಯುದ್ಧದ ನಂತರ ಮಹಾರಾಷ್ಟ್ರದಲ್ಲಿ ಪೇಶ್ವೆಗಳ ಆಡಳಿತ ಕೊನೆಗೊಳ್ಳುತ್ತದೆ. ಹಾಗೆಯೇ ಅಸ್ಪೃಶ್ಯರ ದಯನೀಯ ಸ್ಥಿತಿ ಕೂಡ ಸುಧಾರಣೆ ಕಾಣಲು ಆರಂಭಿಸುತ್ತದೆ. ಈ ಯುದ್ಧದಲ್ಲಿ ಜಯ ತಂದುಕೊಟ್ಟು ಮಡಿದ 22 ಮಹಾರ್ ಸೈನಿಕರ ಸ್ಮರಣಾರ್ಥ ಕೋರೇಗಾಂವ್‌ನಲ್ಲಿ ಮಹಾರ್ ಸೈನಿಕರು ಪ್ರಥಮ ಗುಂಡು ಸಿಡಿಸಿದ್ದ ಸ್ಥಳದಲ್ಲೇ 65 ಅಡಿ ಎತ್ತರದ ಒಂದು ಶಿಲಾಸ್ಮಾರಕ ಕೂಡ 1821 ಮಾರ್ಚ್ 26ರಂದು ನಿರ್ಮಾಣಗೊಳ್ಳುತ್ತದೆ. ಆ ಸ್ಮಾರಕದಲ್ಲಿ ಯುದ್ಧದಲ್ಲಿ ಮಡಿದ 22 ಸೈನಿಕರ ಜೊತೆಗೆ ಗಾಯಗೊಂಡವರ ಹೆಸರನ್ನೂ ಕೆತ್ತಿಸಲಾಗುತ್ತದೆ.

ಒಂದು ವಾಸ್ತವ, ಅದೆಂದರೆ "ಇತಿಹಾಸ ಮರೆತವರು ಇತಿಹಾಸ ಸೃಷ್ಟಿಸಲಾರರು" ಎಂದು ಹೇಳಿದ ಬಾಬಾಸಾಹೇಬ್ ಅಂಬೇಡ್ಕರರಿಗೆ ತನ್ನ ಜನರ ಇಂತಹ ಅದ್ಭುತ ಐತಿಹಾಸಿಕ ಜಯದ ಬಗ್ಗೆ ಬಹಳ ಹೆಮ್ಮೆ ಇತ್ತು, ಆ ಕಾರಣಕ್ಕಾಗಿ ಕೋರೇಗಾಂವ್‌ನಲ್ಲಿನ ಮಹಾರ್ ಸೈನಿಕರ ಈ ಸ್ಮಾರಕಕ್ಕೆ ಅಂಬೇಡ್ಕರರು ಪ್ರತೀ ವರ್ಷ ಸಕುಟುಂಬ ಸಮೇತರಾಗಿ ಭೇಟಿ ನೀಡುತ್ತಿದ್ದರು. ಅಲ್ಲದೆ ಅಗಲಿದ ಯೋಧರಿಗೆ ಬಾಬಾಸಾಹೇಬರು ತಮ್ಮ ಅಭೂತಪೂರ್ವ ನಮನ ಸಲ್ಲಿಸುತ್ತಿದ್ದರು. ಯಾಕೆಂದರೆ ಅಂಬೇಡ್ಕರರಿಗೆ ತಿಳಿದಿತ್ತು ಕೋರೇಗಾಂವ್‌ನಲ್ಲಿ ಮಹಾರ್ ಸೈನಿಕರು ಹೋರಾಡಿದ್ದು ಒಂದು ಸಾಮ್ರಾಜ್ಯದ ವಿರುದ್ಧವಲ್ಲ, ವ್ಯವಸ್ಥೆಯ ವಿರುದ್ಧ. ಯಾವ ವ್ಯವಸ್ಥೆ ತಮ್ಮನ್ನು ಕೀಳಾಗಿ ಕಾಣುತ್ತಿತ್ತೋ, ಪ್ರಾಣಿಗಳಿಗಿಂತ ಹೀನಾಯವಾಗಿ ನಡೆಸಿಕೊಳ್ಳುತ್ತಿತ್ತೋ ಅಂತಹ ದೌರ್ಜನ್ಯಕೋರ ಸಂಸ್ಕೃತಿಯ ವಿರುದ್ಧ ಎಂಬುದು.

ಒಂದು ವೇಳೆ ಕೋರೇಗಾಂವ್ ಯುದ್ಧ ನಡೆಯದಿದ್ದರೆ ಪೇಶ್ವೆಗಳ ಅಟ್ಟಹಾಸ ಮತ್ತೂ ಮುಂದುವರಿದಿರುತ್ತಿತ್ತು, ಅಂದಹಾಗೆ ಅಂತಹ ಅಟ್ಟಹಾಸದ ವಾತಾವರಣದಲ್ಲಿ ಆ ಯುದ್ಧ ನಡೆದು 73 ವರ್ಷಗಳ ನಂತರ (1891) ಹುಟ್ಟಿದ ಅಂಬೇಡ್ಕರರು ಶಿಕ್ಷಣ ಪಡೆಯಲಾಗುತ್ತಿತ್ತೇ? ವಿದೇಶಿ ವ್ಯಾಸಂಗಕ್ಕೆ ತೆರಳಲಾಗುತ್ತಿತ್ತೆ? ಸಂವಿಧಾನಶಿಲ್ಪಿಯಾಗಲು ಸಾಧ್ಯವಿತ್ತೆ? ಈ ನಿಟ್ಟಿನಲ್ಲಿ ಕೋರೇಗಾಂವ್ ಯುದ್ಧ ಅಸ್ಪೃಶ್ಯರ ಹೋರಾಟದ ಇತಿಹಾಸದಲ್ಲಿ ಒಂದು ಅಪರೂಪದ ಮೈಲುಗಲ್ಲಾಗಿ ಉಳಿಯುತ್ತದೆ. ಹಾಗೆಯೇ ಸ್ಫೂರ್ತಿಯ ಸಂಕೇತವೂ ಅದಾಗುತ್ತದೆಯೆಂದರೆ ಅತಿಶಯೋಕ್ತಿಯೇನಲ್ಲ.

■ ರಘೋತ್ತಮ ಹೊ.ಬ, ಮೈಸೂರು

---


02 ◀◀ ಅಂಚಿನಿಂದ....

02 ◀◀ ಅಂಚಿನಿಂದ....

ಮಾಡಿಕೊಡುತ್ತದೆ. ಇನ್ನೊಂದು, ರಾಜಕೀಯ ವ್ಯವಸ್ಥೆಯನ್ನು ಗುರಿಯನ್ನಾಗಿಸಿಕೊಂಡು ಇತರ ಸಾಮಾಜಿಕ, ಆರ್ಥಿಕ ಅಸಮಾನತೆಯ ಇಶ್ಯೂಗಳನ್ನು ಗಮನಿಸದೇ ಇರುವುದು. ಎಎಪಿಯ ದೌರ್ಬಲ್ಯವಿರುವುದು, ಅದು ರಾಜಕೀಯ ವ್ಯವಸ್ಥೆಯನ್ನೂ ಗುರಿ ಮಾಡುತ್ತಿಲ್ಲ, ಅದರ ಪ್ರಧಾನ ಗುರಿ ರಾಜಕಾರಣಿಗಳು ಮಾತ್ರವೇ ಆಗಿದ್ದಾರೆ. ಇದು ಭ್ರಷ್ಟಾಚಾರದ ವಿರುದ್ಧದ ಆಂದೋಲನದಲ್ಲೇ ವ್ಯಕ್ತವಾಯಿತು. 2 ಜಿ ಹಗರಣದಂತಹ ಭಾರೀ ಭ್ರಷ್ಟಾಚಾರದ ಪ್ರಕರಣಗಳಲ್ಲೂ ಕೆಲವು ಸಾವಿರ ಕೋಟಿಗಳನ್ನು ತಿಂದ ರಾಜಕಾರಣಿಗಳು ಮಾತ್ರ ಜೈಲಿಗೆ ಹೋದರು. ಒಂದೂವರೆ ಲಕ್ಷ ಕೋಟಿಗೂ ಹೆಚ್ಚು ನುಂಗಿದ ಕೈಗಾರಿಕೋದ್ಯಮಿಗಳಲ್ಲಿ ಒಬ್ಬರೂ ಜೈಲಿಗೆ ಹೋಗಲಿಲ್ಲ, ಅಂತಹ ಕೈಗಾರಿಕೋದ್ಯಮಿಗಳಲ್ಲೇ ಕೆಲವರು ಅಣ್ಣಾ ಹಜಾರೆ-ಕೇಜ್ರಿವಾಲ್ ಆಂದೋಲನಕ್ಕೆ ದೇಣಿಗೆ ನೀಡಿದ್ದನ್ನು ತಮ್ಮ ಪಾರದರ್ಶಕತೆಯ ಭಾಗವಾಗಿ ಬಹಿರಂಗವಾಗಿ ತಿಳಿಸಿದ್ದರು!

ಉದ್ದಿಮೆಪತಿಗಳಿಗೂ ವಿಪರೀತ ಭ್ರಷ್ಟಾಚಾರವು ತೊಂದರೆ ಕೊಡುತ್ತದೆ. ಅದಿಲ್ಲದೇ ಸರ್ಕಾರದ ಅಧಿಕೃತ ನೀತಿಯ ಭಾಗವಾಗಿಯೇ ಅವರಿಗೆ ಸಿಗಬೇಕಾದ್ದೆಲ್ಲವೂ ಸಿಕ್ಕರೆ ಅವರಿಗೆ ಒಳ್ಳೆಯದು. ಅಂತಹ 'ಅಧಿಕೃತ ಮತ್ತು ಸಾಮಾಜಿಕ' ಹಾಗೂ ಹೆಚ್ಚೆಂದರೆ 'ಕಾರ್ಪೋರೇಟ್ ಸಾಮಾಜಿಕ ಜವಾಬ್ದಾರಿ'ಯನ್ನು ಹೊಂದಿರುವ ಬಂಡವಾಳಶಾಹಿ ವ್ಯವಸ್ಥೆಯನ್ನು ತರಬೇಕೆಂದೇ ವಿಶ್ವಬ್ಯಾಂಕ್, ಫೋರ್ಡ್ ಫೌಂಡೇಶನ್‌ಗಳೂ ಬಯಸುತ್ತವೆ. ವಿಶ್ವಬ್ಯಾಂಕ್‌ನ ಅಜೆಂಡಾ ಮತ್ತು ಕೇಜ್ರಿವಾಲ್-ಸಿಸೋದಿಯಾ ಅವರ ಎನ್‌ಜಿಒಗೆ ಹಣ ನೀಡುತ್ತಿದ್ದ ಫೋರ್ಡ್ ಫೌಂಡೇಷನ್‌ನ ಅಜೆಂಡಾ ಎಲ್ಲವೂ ಹೆಚ್ಚುಕಡಿಮೆ ಒಂದೇ ಆಗಿರುವುದು ಕಾಕತಾಳೀಯವಲ್ಲ. ಆದ್ದರಿಂದಲೇ ಮುಂಬರುವ ದಿನಗಳಲ್ಲಿ ಅವರ ಆರ್ಥಿಕ ನೀತಿ ಏನಾಗಿರಬಹುದು ಎಂಬ ಪ್ರಶ್ನೆ ಹುಟ್ಟುತ್ತದೆ.


ಇದರಾಚೆಗೆ ಇನ್ನೂ ಕೆಲವು ಪ್ರಶ್ನೆಗಳು ಈ ಸಂದರ್ಭದಲ್ಲಿ ಕೇಳಿಕೊಳ್ಳಬೇಕಾದ್ದು ಅಗತ್ಯವಿದೆ. ಕಾಂಗ್ರೆಸ್, ಬಿಜೆಪಿ ಇತ್ಯಾದಿ ಪಕ್ಷಗಳ ಮೇಲೆ ಜನರು ಸಿಟ್ಟಿನಿಂದ ಕುದಿಯುತ್ತಿದ್ದಾರೆ. ಸೂಕ್ತವಾದ ಪರ್ಯಾಯ ಸಿಕ್ಕರೆ ಅಂತಹದನ್ನು ಆಯ್ದುಕೊಳ್ಳಲು ಅವರು ಸಿದ್ಧರಾಗಿದ್ದಾರೆ ಎಂಬುದನ್ನು ಆಮ್ ಆದ್ಮಿಯ ಪ್ರಯೋಗ ತೋರಿಸಿದೆ. ಆದರೆ ಆ ಸ್ಪೇಸನ್ನು ಎಲ್ಲಾ ಬ್ರಾಂಡ್‌ಗಳ ಎಡಪಂಥೀಯರು ತುಂಬಲಿಕ್ಕೆ ಯಾಕೆ ಆಗಲಿಲ್ಲ? ಇದು ಕೇವಲ ವಿಧಾನದ ಸಮಸ್ಯೆಯಾ ಅಥವಾ ರಾಜಕೀಯದ ಸಮಸ್ಯೆಯಾ? ನವ ಉದಾರವಾದೀ ಆರ್ಥಿಕತೆ, ಸಂಸ್ಕೃತಿ ರೂಪಿಸುತ್ತಿರುವ ರಾಜಕಾರಣದಲ್ಲಿ ಮೋದಿ ಒಂದು ಮಾದರಿಯಾದರೆ, ಎಎಪಿ ಇನ್ನೊಂದು ಮಾದರಿಯಾಗಿದೆ. ಇದರಲ್ಲಿ ಎಎಪಿ ಮೋದಿಗೆ ವಿರುದ್ಧವಾದ ವಾತಾವರಣ ನಿರ್ಮಿಸುತ್ತದೆಯಾ ಅಥವಾ ಪೂರಕವಾದ ವಾತಾವರಣ ರೂಪಿಸುತ್ತದೆಯಾ? (ಎಎಪಿಯೇ ಮಾಡಿದ ಸರ್ವೇಯಲ್ಲಿ ವ್ಯಕ್ತವಾದ ಒಂದು ಅಂಶ: ವಿಧಾನಸಭೆಗೆ ಎಎಪಿಗೆ ಮತ ನೀಡಿದವರ ಲೋಕಸಭೆಯ ಆಯ್ಕೆ ಮೋದಿ!) ಜಾಗತೀಕರಣವು ಹುಟ್ಟು ಹಾಕಿರುವ ಹೊಸ ವರ್ಗವೊಂದಿದೆ, ಅದು ಮೇಲ್ಮಧ್ಯಮ ವರ್ಗ. ಇದರ ಜೊತೆಗೆ, ಇದನ್ನು ಅನುಕರಿಸುವ, ಆ ಮಟ್ಟವನ್ನು ತಲುಪುವ ತವಕ ಹೊಂದಿರುವ ಮಧ್ಯಮವರ್ಗ ಸೇರಿದರೆ ಅದು ಇವತ್ತಿನ ಭಾರತದ ಜನಸಂಖ್ಯೆಯ ಒಂದು ಗಣನೀಯ ಸಮುದಾಯ. ಈ ಹೊಸ ವರ್ಗದ ಯಾಜಮಾನ್ಯದಡಿಯಲ್ಲಿ ಉಳಿದ ದಮನಿತ ಸಮುದಾಯವು ಬರುವಂತಹ ಹೊಸ ಸಂದರ್ಭ ಸೃಷ್ಟಿಯಾಗುತ್ತಿದೆಯಾ?



ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಸಿಗಲು ಬಹಳ ಕಾಯಬೇಕಿಲ್ಲ. ಶೀಘ್ರವಾಗಿ ಬದಲಾಗುತ್ತಿರುವ ಪ್ರಸ್ತುತ ಕಾಲಘಟ್ಟದಲ್ಲಿ ಹೆಚ್ಚೆಂದರೆ ಎರಡು ವರ್ಷಗಳು ನಮಗೆ ಉತ್ತರವನ್ನೂ, ದಾರಿಯನ್ನೂ ತೋರಿಸಲಿವೆ.

ಕೊನೆಯದಾಗಿ, ಎಲ್ಲಾ ಮಾತುಗಳು ಆಮ್ ಆದ್ಮಿ ಪಕ್ಷದ ಕುರಿತಾಯಿತು. ದೆಹಲಿಯ ಆಮ್ ಆದ್ಮಿ ಮತದಾರರ ಬಗ್ಗೆ ಮಾತಾಡಲೇಬೇಕು. ಅವರು ಮೆಚ್ಚುಗೆಗೆ ಅರ್ಹರು. ದೊಡ್ಡ ರಾಜಕೀಯ ಪಕ್ಷಗಳನ್ನು ಅವರು ತಿರಸ್ಕರಿಸಿದ್ದಾರೆ. ಬಿಜೆಪಿಯೇ ದೊಡ್ಡ ಪಕ್ಷವಾಗಿ ಆರಿಸಿ ಬಂದಿದ್ದರೂ ಇಡೀ ದೇಶವನ್ನೇ ಆಳಲು ಹೊರಟಿರುವ ಅದಕ್ಕೆ ಗದ್ದುಗೆ ಹಿಡಿಯಲು ಬೇಕಾದಷ್ಟು ಸೀಟುಗಳನ್ನು ದೆಹಲಿಯ ಮತದಾರರು ನೀಡಿಲ್ಲ. ಇವತ್ತಿನ ರಾಜಕೀಯ ಪಕ್ಷಗಳ ಬಗ್ಗೆ ಸಾಮಾನ್ಯ ಮತದಾರರಿಗಿರುವ ಸಿಟ್ಟು ಈ ಚುನಾವಣೆಯಲ್ಲಿ ವ್ಯಕ್ತವಾಗಿದೆ. ಕಾಂಗ್ರೆಸ್‌ಗೆ ವಿರುದ್ಧವಾಗಿ, ಒಂದು 'ಸೂಕ್ತವಾದ' ಪರ್ಯಾಯವನ್ನು ನೀಡಿದರೆ ಜನರು ಬಿಜೆಪಿಯವರನ್ನು ಆಯ್ಕೆ ಮಾಡಿಕೊಳ್ಳುವುದಿಲ್ಲ ಎಂಬುದು ಇಲ್ಲಿ ನಿಚ್ಚಳವಾಗಿ ಕಂಡು ಬಂದಿದೆ. ಅದೇ ಸಂದರ್ಭದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಅದೇ ಮಾದರಿಯ ಪರ್ಯಾಯ ಪಕ್ಷಗಳಾಗಿ ಮಾತ್ರ ಇತರ ಪ್ರಾದೇಶಿಕ ಹಾಗೂ ರಾಷ್ಟ್ರೀಯ ಪಕ್ಷಗಳು ಇದ್ದು, ಆಮ್ ಆದ್ಮಿ ಪಕ್ಷವು ಈ ಎಲ್ಲಾ ಪಕ್ಷಗಳಿಗಿಂತ ಭಿನ್ನವಾದುದೆಂದು ತೋರಿಸಿಕೊಂಡಿದ್ದೂ ಅದರ ಯಶಸ್ಸಿಗೆ ಕಾರಣವಾಗಿದೆ.

ಹಣ, ತೋಳ್ಬಲ, ಮತೋನ್ಮಾದದ ಆಚೆಗೆ ಮತ ಹಾಕಲು ಸಿದ್ಧರಾಗಿರುವುದಕ್ಕೆ ಆಮ್ ಆದ್ಮಿಯನ್ನು ನಾವು ಅಭಿನಂದಿಸಲೇಬೇಕು.



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಮಂಗಳಗೌರಿಯ ಅಮಂಗಳದ ಕಥೆ!

ಸಟೀಕಾ ವ್ರತರತ್ನಂ

...ತಗಳನ್ನು ಹೇಗೆ ಆಚರಿಸಬೇಕೆಂದೂ, ವ್ರತಾಚರಣೆಗಳ ಫಲವನ್ನೂ ...ವ ಸಟೀಕಾ ವ್ರತರತ್ನಂನಂತಹ ಅನೇಕ ಧಾರ್ಮಿಕ ಗ್ರಂಥಗಳಿವೆ. ... ನಿರ್ದಿಷ್ಟವಾದ ಉದ್ದೇಶದಿಂದ ಆಚರಿಸುವಂತಹದ್ದು ಹಾಗೂ ಆ ಆಚರಣೆಯಿಂದ ನಿರ್ದಿಷ್ಟ ಫಲಗಳನ್ನು ವ್ರತ ಮಾಡುವವರು ...ವರು ಎಂಬ ಭರವಸೆ. ಬಳೇಪೇಟೆಯ ಕೃಷ್ಣಯ್ಯಶೆಟ್ಟಿ ಅಂಡ್ ಸನ್ಸ್‌ನಂತಹ ...ಗಳು ಬೆಳೆದಿದ್ದೇ, ಸಿರಿವಂತರಾಗಿದ್ದೇ ಅಧ್ಯಾತ್ಮ ಪುಸ್ತಕಗಳ ಜೊತೆಗೆ, ... ವ್ರತರತ್ನಂನಂತಹ ಅವಿಚಾರ ಮತ್ತು ಮೌಢ್ಯ ತುಂಬಿದ ಧಾರ್ಮಿಕ ... ಮಾರಾಟದಿಂದ. ಅಧ್ಯಾತ್ಮವನ್ನೂ, ಧಾರ್ಮಿಕತೆಯನ್ನೂ, ಮೌಢ್ಯವನ್ನೂ ... ಚಾಣಾಕ್ಷ ಬ್ರಾಹ್ಮಣ ಪಂಡಿತರು ಇವರ ಸಂಪನ್ಮೂಲ ವ್ಯಕ್ತಿಗಳು. ...ಪುರಾಣಿಕರು ಸೂತರೆಂದು ಹೇಳಲಾಗುವ ಅನೇಕ ವ್ರತದ ಕಥೆಗಳ ...ರ ಮೇಲೆ ಇಂದಿನ ಕುತಂತ್ರಿ ಪುರೋಹಿತರ ಹೊಟ್ಟೆಪಾಡು.

...ಲಿ, ಸುಮಂಗಲೆಯರಾದ ಸ್ತ್ರೀ ಪ್ರಧಾನವಾದ ವ್ರತಗಳಲ್ಲಿ ಮಂಗಳಗೌರಿ ...ನ್ನು ಆಚರಿಸಿರುವ ಮುಖ್ಯವಾದ ಉದ್ದೇಶವೆಂದರೆ, ವಿವಾಹಿತೆಯ ...ವನ್ನು ಭದ್ರ ಪಡಿಸುವುದು, ಅಂದರೆ ಅವಳ ಗಂಡ ಬೀದಿ ಬಸವನಾಗಿದ್ದು ... ಏನೇ ಗಬ್ಬೆಬ್ಬಿಸಿಕೊಂಡರೂ, ಇವಳ ಸುಮಂಗಲಿಯ ಶಕ್ತಿ ಅವನನ್ನು ...ವುದು ಮತ್ತು ಆ ಪತಿದೇವರನ್ನು ಸುರಕ್ಷಿತವಾಗಿ ಮನೆಗೇ ಕರೆದುಕೊಂಡು ...ತೆ ಮಾಡುವುದು. ಹಾಗಾಗಿ, ಈ ಮಂಗಳ ಗೌರಿ ವ್ರತವನ್ನು ...ಯಾದ ಕೂಡಲೇ ನವ ವಧುವಿಗೆ ವಿಧಿಸುತ್ತಾರೆ.

...ದೂ ಸಂಪ್ರದಾಯದ ಮದುವೆಗಳಲ್ಲಿ ನೀವು ಗಮನಿಸಿರಬಹುದು. ...ಧಾರಣೆಗೆ ಮುನ್ನ ವಧುವು ಗೌರಿ ಪೂಜೆಯನ್ನು ಮಾಡುವಳು. ...ಕಾಶೀಯಾತ್ರೆಗೆ ಹೋಗುವನು. ಈ ವಧು ಮಾಡುವ ಗೌರಿಪೂಜೆಯನ್ನು ... ರೀತಿಗಳಲ್ಲಿ ವಿವರಿಸಲು ಸಾಧ್ಯ. ಹೆಣ್ಣು ಕೃಷಿ ಮಾಡುವವಳಾದ್ದರಿಂದ, ... ಬೆಳೆಯನ್ನು ಒಟ್ಟಾಗಿಸುವವಳಾದ್ದರಿಂದ ಅವಳಿದ್ದಲ್ಲಿಯೇ ಇರುತ್ತಾಳೆ. ... ಸಂಪ್ರದಾಯಗಳಲ್ಲಿ ವಧುವಿನ ಕೈಯಿಂದ ಬಾಗಿನ ಕೊಡಿಸುವುದು ...ರೂ, ಕೆಲವು ಸಂಪ್ರದಾಯಗಳಲ್ಲಿ ಕುಂಭಗಳಲ್ಲಿ ಮೊಳಕೆ ತರಿಸಿ ಅವನ್ನು ...ತ್ತಾರೆ. ನಂತರ ಹೊರಗೆ ಕಾಶೀಯಾತ್ರೆಗೆ ಹೋಗಿರುವ ವರನನ್ನು ... ಕಡೆಯವರು ಕರೆದುಕೊಂಡು ಬರುತ್ತಾರೆ. ಕಾಶೀಯಾತ್ರೆ ವೈದಿಕ ...ಯದ ಅಥವಾ ಬ್ರಾಹ್ಮಣರು ಸೇರಿಸಿರುವ ಪದ್ಧತಿ. ಬ್ರಾಹ್ಮಣ ...ರಿಗಳು ವಿದ್ಯಾರ್ಜನೆಗೆಂದು ಕಾಶೀ ಪೀಠಗಳಂತಹ ವಿದ್ಯಾಕೇಂದ್ರಗಳಿಗೆ ...ದ್ದು ನಂತರ ಬ್ರಹ್ಮಚಾರಿಯ ನಂತರ ಗೃಹಸ್ಥನಾಗಲು ಅವನನ್ನು ಒಪ್ಪಿಸಿ, ...ಗೃಹನಿರ್ವಹಣೆಗೆ ಅಗತ್ಯವಿರುವ ವಸ್ತುಗಳನ್ನು ಮತ್ತು ವಸ್ತ್ರಗಳನ್ನು ...ಹಿಂದಕ್ಕೆ ಕರೆದುಕೊಂಡು ಬರುವುದು. ಆದರೆ, ಅಬ್ರಾಹ್ಮಣರ ಕೆಲವು ...ಯುಗಗಳಲ್ಲಿ ನಿಂಬೆಹಣ್ಣು ಚುಚ್ಚಿದ ಕತ್ತಿಯನ್ನು ಹಿಡಿದುಕೊಂಡಿದ್ದು



... ಬೇಟೆಗೆ ಹೋಗುವ ವ್ಯವಸ್ಥೆಯಲ್ಲಿದ್ದ ಆಗಿನ ಪುರುಷರನ್ನು ...ಸುತ್ತೇನೆ. ಬ್ರಾಹ್ಮಣರಲ್ಲಿ ವಿದ್ಯಾಭ್ಯಾಸಕ್ಕಾಗಿ ಹೊರಕ್ಕೋದವನು ಹಿಂದಕ್ಕೆ ... ಅಬ್ರಾಹ್ಮಣರಲ್ಲಿ ಬೇಟೆ ಇತ್ಯಾದಿ ಕಸುಬುಗಳಿಗೆ ಹೊರಕ್ಕೋದವನು ...ಬರುತ್ತಾನೆ. ಎರಡೂ ಸಂಪ್ರದಾಯಗಳಲ್ಲಿ ಹೆಣ್ಣು ಕೃಷಿ ಮಾಡಿಕೊಂಡು ...ಇರುವವಳೇ. ಗಂಡು ಹೊರಗಿನಿಂದ ಬರುವವನೇ.

...ನ್ನು ನೋಡಲು ಹೋಗುವ ವಿಷಯದಲ್ಲೂ ಇದು ಸೂಚ್ಯವಾಗಿದೆ. ...ನೋಡಲು ಗಂಡೂ ಮತ್ತು ಅವರ ಮನೆಯವರೇ ಹೋಗುತ್ತಾರೆ. ...ಸುಲಲ್ಲೂ ಸಾಂಕೇತಿಕವಾಗಿರುವ ತಾಯಿ ಹಕ್ಕಿನ ವಿಷಯವನ್ನು ಗಮನಿಸಿ. ...ನ್ನು ಕರೆತರುವುದಾಗಲಿ, ಅವಳನ್ನು ಹಸೆಮಣೆಗೆ ಒಪ್ಪಿಸುವುದಾಗಲಿ ...ತಂದೆಯ ಕಡೆಯವರದಲ್ಲ ಅಧಿಕಾರ. ತಾಯಿಯ ಸೋದರನದು. ...ಸೋದರಮಾವನದು. ಅವನಿಗೆ ಆಕೆಯನ್ನು ವರಿಸುವ ಅಧಿಕಾರವೂ ...ರುವುದು.

...ಲಿ, ಹೀಗೆ ಗಂಡೆಂಬುದ ಸಂಗಾತಿ ಹೊರಗಿನಿಂದ ಬರುವವನು ಮಾತ್ರವಲ್ಲ, ...ೕ, ಯುದ್ಧವೋ, ವಿದ್ಯಾಭ್ಯಾಸವೋ, ವಾಣಿಜ್ಯವೋ; ಯಾವುದೇ ...ದ ಸಂಗಾತಿಯಾದ ಮೇಲೂ ಹೊರಗೆ ಹೋಗುವ ಸಾಧ್ಯತೆಗಳಿದ್ದು ...ಸುರಕ್ಷಿತವಾಗಿ ಹಿಂದಕ್ಕೆ ಸೆಳೆಯುವಂತಹ ಶಕ್ತಿಯು ಮನೆಯಲ್ಲಿರಬೇಕು. ... ಅವನು ಎದುರಿಸುವಂತಹ ಅಪಾಯಗಳನ್ನು ಸಮರ್ಥವಾಗಿ ...ಕೊಂಡು ತನ್ನ ಹೆಂಡತಿಯ ಬಳಿಗೆ ಮರಳಬೇಕು. ಆ ಶಕ್ತಿಯ ...ವೇ ಮಂಗಳಗೌರಿಯ ವ್ರತಮಹಾತ್ಮೆ.

ಸುಶೀಲೆಯ ಕಥೆ

...ಸ್ಕೋತ್ತರ ಪುರಾಣದಲ್ಲಿ ಬರುವ ಈ ವ್ರತದ ಪ್ರಕಾರ ಮದುವೆಯಾದವಳು ಶ್ರಾವಣ ಮಾಸದ ಮಂಗಳವಾರಗಳಲ್ಲಿ ಮೊದಲೈದು ವರ್ಷ ಮಾಡುವುದು. ನಂತರ ಐದನೆಯ ವರ್ಷದಲ್ಲಿ ಉದ್ಯಾಪನೆಯನ್ನು ಕೊಟ್ಟು ತನ್ನ ತಾಯಿಗೆ ಅಥವಾ ಇತರ ಸುಮಂಗಲಿಯರಿಗೆ ಬಾಗಿನ(ಮಂಗಳ ದ್ರವ್ಯ)ಗಳನ್ನು ಕೊಟ್ಟು ಮುಗಿಸುವುದು. ಕರ್ನಾಟಕ, ಆಂಧ್ರ ಮತ್ತು ಮಹಾರಾಷ್ಟ್ರದ ಕೆಲವು ಭಾಗಗಳಲ್ಲಿ ಚಾಲ್ತಿಯಲ್ಲಿರುವ ಈ ವ್ರತದ ವಿಧಾನ ಸ್ಥಳದಿಂದ ಸ್ಥಳಕ್ಕೆ ಬದಲಾಗುತ್ತದೆ.

ವರವ ಕೊಡೆ ತಾಯಿ ವರವ ಕೊಡೆ,
ಕಟ್ಟಿದ ಮಾಂಗಲ್ಯ ಕರಿಮಣಿ ಗಾಜಿನ ಬಳೆ
ಸ್ಥಿರವಾಗಿ ಇರುವಂತೆ ವರವ ಕೊಡೆ.
ಅರಿಸಿನ ಕುಂಕುಮ ಅರಳು ಮಲ್ಲಿಗೆ ದವನ
ಸ್ಥಿರವಾಗಿ ಮುಡಿವಂತ ವರವ ಕೊಡೆ.
ಮಹಡಿ ಮನೆಯ ಮೇಲೆ ಜೋಡು ತೊಟ್ಟಿಲ ಕಟ್ಟಿ
ಜೋಗುಳವ ಹಾಡುವಂತ ವರವ ಕೊಡೆ
ಗೋದಾನ, ಭೂದಾನ, ಗೃಹದಾನ, ಕನ್ಯಾದಾನ
ಮಾಡುವಂತ ವರವ ಕೊಡೆ

ಎನ್ನುವ ಆಶಯ ಮಾತ್ರ ಎಲ್ಲಾ ಪ್ರಾಂತ್ಯಗಳಲ್ಲೂ ಸಾಮಾನ್ಯವಾದುದು. ವ್ರತಾಚರಣೆಯಲ್ಲಿ ಮುತ್ತೈದೆಯರನ್ನು ಮನೆಗೆ ಕರೆಯಿಸಿ, ಅವರಿಗೆ ಮಂಗಳದ್ರವ್ಯ ಮತ್ತು ತಂಬಿಟ್ಟು ಇತ್ಯಾದಿಗಳನ್ನು ಕೊಟ್ಟು ನಮಸ್ಕರಿಸಿ ಆಶೀರ್ವಾದವನ್ನು ಪಡೆಯುವುದು.

ಈ ವ್ರತದ ಕಥೆ ಕೇಳಿ. ಮಕ್ಕಳಿಲ್ಲದ ವ್ಯಾಪಾರಿ ದಂಪತಿಗಳು ದೇವರಿಗೆ ಬೇಡಿಕೊಳ್ಳುತ್ತಿದ್ದರು. ವೇಷ ಮರೆಸಿಕೊಂಡು ಬಂದ ಶಿವ ಭಿಕ್ಷೆ ಕೇಳಿದ. ಗೃಹಿಣಿಯು ಭಿಕ್ಷೆ ಕೊಡಲು ಹೋದಾಗ ಶಿವ ಅದನ್ನು ನಿರಾಕರಿಸಿ ಪಕ್ಕದ ಮನೆಯ ಬಾಗಿಲಿಗೆ ಹೋದ. ಕಾರಣ ಕೇಳಿದರೆ, ಮಕ್ಕಳಿಲ್ಲದ ಮನೆಯಲ್ಲಿ ಭಿಕ್ಷೆ ಪಡೆಯುವುದಿಲ್ಲ ಎಂದ. ದುಃಖಿತರಾದ ದಂಪತಿಗಳು ಏನು ಮಾಡಬೇಕೆಂದು



ಕೇಳಲಾಗಿ, ಮಂಗಳ ಗೌರಿ ವ್ರತವನ್ನು ಮಾಡಿ ಅಂದ.

ಅವರು ಮಂಗಳಗೌರಿಯ ವ್ರತವನ್ನು ಮಾಡಿದರು. ಮಂಗಳ ಗೌರಿ ಪ್ರತ್ಯಕ್ಷಳಾಗಿ ದಡ್ಡನಾಗಿ ನೂರು ವರ್ಷ ಬಾಳುವ ಮಗ ಬೇಕೋ ಅಥವಾ ಬುದ್ಧಿವಂತನಾಗಿ ಬಾಳುವ 16 ವರ್ಷದ ಅಲ್ಪಾಯುವುಳ್ಳ ಮಗ ಬೇಕೋ ಎಂದು ಕೇಳುವರು. (ಈ ಬಗೆಯ ಆಫರ್ ಅಂತೂ ಬಹುತೇಕ ಕಥೆಗಳಲ್ಲಿ ಸಾಮಾನ್ಯ ವೈದಿಕರು ತಮ್ಮ ತಂತ್ರಗಳನ್ನು ಉಪಯೋಗಿಸಲು ಬುದ್ಧಿವಂತಿಕೆಯನ್ನು ಅಪೇಕ್ಷಿಸುತ್ತಿದ್ದರು ಎಂಬುದನ್ನು ಗಮನಿಸಿ. ಸಾಮಾನ್ಯವಾಗಿ ಅಬ್ರಾಹ್ಮಣರಲ್ಲೂ ನಾವು ಸರ್ವೇ ಸಾಧಾರಣವಾಗಿ ಕೇಳುತ್ತಿದ್ದದ್ದು ಏನೆಂದರೆ 'ಬ್ರಾಹ್ಮಣರು ಬಿಡು ಬುದ್ಧಿವಂತರು' ಎಂದು. ಇಲ್ಲಿ ಬುದ್ಧಿವಂತಿಕೆಯ ಲಭ್ಯತೆ ವಿದ್ಯಾಭ್ಯಾಸದಿಂದಲೋ ಅಥವಾ ಶಾಸ್ತ್ರಾಭ್ಯಾಸದಿಂದಲೋ ಅಂತಲ್ಲ, ಅನುವಂಶೀಯವಾಗಿ ಅಥವಾ ಕುಲಾನುಗತವಾಗಿ ಬಂದಿರುವ ಕಿಲಾಡಿತನದ್ದು ಎಂಬ ಧೋರಣೆ.) ದಂಪತಿಗಳು ಎಂದಿನಂತೆ ಬುದ್ಧಿವಂತನನ್ನೇ ಕೇಳಿಕೊಂಡರು.

ಹುಟ್ಟಿದ ಮಗನಿಗೆ ಶಿವ ಎಂದು ಹೆಸರಿಟ್ಟರು. ನಂತರ ಅವನು 16 ತುಂಬಿದಾಗ ಅವನ ಸೋದರಮಾವನ ಜೊತೆ ಕಾಶಿಗೆ ಕಳುಹಿಸಿದರು. ಹಾಗೆ ಹೋಗುವಾಗ ಮಾರ್ಗಮಧ್ಯದಲ್ಲಿ ಸಂಧಿಸಿದ ಕುಟುಂಬವೊಂದರಿಂದ ಸುಶೀಲ ಎಂಬ ಕನ್ಯೆಯೊಡನೆ ಅವನ ಮದುವೆಯಾಯಿತು.

ಮದುವೆಯಾದ ರಾತ್ರಿಯೇ ಸುಶೀಲೆಯ ಕನಸಿನಲ್ಲಿ ಬಂದ ಮಂಗಳಗೌರಿಯು ನಿನ್ನ ಗಂಡನು ಹಾವು ಚಚ್ಚಿ ಸಾಯುವನೆಂದು ಹೇಳುವಳು. ಅದಕ್ಕೆ ಏನು ಮಾಡಬೇಕೆಂದೂ ಅವಳೇ ಹೇಳುವಳು. ಬರುವ ಹಾವಿಗೆ ಪೂಜಿಸಿ, ಹಾಲನ್ನು ಕುಡಿಯಲು ಕೊಟ್ಟು, ಪಕ್ಕದಲ್ಲೇ ಖಾಲೀಕೊಡವನ್ನೂ ಇಡಬೇಕು. ಹಾಲು ಕುಡಿದ ಹಾವು ಖಾಲಿ ಕೊಡವನ್ನು ಸೇರಿದ ಮೇಲೆ ಅದರ ಬಾಯನ್ನು ಬಟ್ಟೆಯಿಂದ ಕಟ್ಟಿ ತನ್ನ ತಾಯಿಗೆ ಕೊಡಬೇಕು. ನಂತರ ಅವಳು ಅದನ್ನು ತೆಗೆದರೆ, ಅದರಲ್ಲಿ ಹೊಳೆಯುವ ರತ್ನದ ಹಾರವಿರುವುದು.

ಅವಳ ಗಂಡ ಕಾಶಿಗೆ ಪ್ರಯಾಣ ಮುಂದುವರಿಸಿ ವಿದ್ಯಾಭ್ಯಾಸಕ್ಕೆಂದು ಹೋಗುವನು. ಹಾಗೆ ಎಷ್ಟೋ ವರ್ಷಗಳಾಗುವವು. ಅವನು ಮತ್ತೆ ಸುಶೀಲೆಯ ಮೇಲೆಯೇ ಮನಸಿಟ್ಟುಕೊಂಡು ಅವನು ಬರುತ್ತಾನೆಂದು ಏನು ಖಾತರಿ? ಸುಶೀಲೆಯು ತನ್ನ ಊರಿನಲ್ಲಿ ಅರವಟ್ಟಿಗೆಯೊಂದನ್ನು ತೆರೆದು ಯಾತ್ರಾರ್ಥಿಗಳಿಗೆ ಉಣಬಡಿಸುತ್ತಿದ್ದಳು. ವಿದ್ಯಾಭ್ಯಾಸ ಮುಗಿಸಿಕೊಂಡು ಮರಳಿದ ಶಿವ ತನ್ನ ಹೆಂಡತಿಯ ಊರಿನಲ್ಲಿ ಮರಳುವಾಗ ಇತರ ಯಾತ್ರಾರ್ಥಿಗಳಂತೆ ಉಣ್ಣಲು ಬಂದ ಗಂಡನನ್ನು ಗುರುತಿಸಿ ಅವನನ್ನು ಕೂಡಿದಳು. ಇದು ಮಂಗಳಗೌರಿಯ ಮಹಾತ್ಮೆ.

ಶಾಂತಕುಮಾರಿಯ ಕಥೆ

ಮಂಗಳಗೌರಿ ವ್ರತವನ್ನು ಮಾಡಿ ತನ್ನ ಗಂಡನನ್ನು ಉಳಿಸಿಕೊಂಡ ಪತಿವ್ರತೆ ಸುಶೀಲೆಯ ಕಥೆ ಓದಿದಿರಿ. ಈಗ, ಕಲಿಯುಗದಲ್ಲಿ ಸೂತ ಪುರಾಣಿಕರು ಸೂತ ಕಥೆಯಲ್ಲ, ನಿಜವಾದ ಮಂಗಳಗೌರಿ ವ್ರತಮಹಾತ್ಮೆಯ ಕಥೆ ನಾನು ಹೇಳುತ್ತೇನೆ. ಶಾಂತಕುಮಾರಿ ನನ್ನ ಚಿಕ್ಕಮ್ಮ. ನನ್ನ ತಾಯಿಯ ತಂಗಿ. ತನ್ನ ಗಂಡನ ಧೋರಣೆ ಮತ್ತು ವಾಸ್ತವ್ಯದ ಬಗ್ಗೆ ಅತೀ ಅಸುರಕ್ಷತೆಯನ್ನು ಹೊಂದಿದ್ದವರು. ಹಾಗಾಗಿ ಕೃಷ್ಣಯ್ಯಶೆಟ್ಟಿ ಅಂಡ್ ಸನ್ಸ್‌ನಿಂದ ತಂದ ಸಟೀಕಾ ವ್ರತರತ್ನಂನಿಂದಾಯ್ದ ಮಂಗಳಗೌರಿ ವ್ರತವನ್ನು ಬಹು ಭಯಭಕ್ತಿಯಿಂದ ಮಾಡುತ್ತಿದ್ದರು. ಆ ವ್ರತದ ಬಗ್ಗೆ ಎಷ್ಟು ಭಾವನಾತ್ಮಕ ಸಂಬಂಧವನ್ನು ಹೊಂದಿದ್ದರು ಎಂದು ಈಗ ನೆನೆಸಿಕೊಂಡರೆ ಅರ್ಥವಾಗುತ್ತದೆ. ಆಗ ನಾವು ಸಣ್ಣವರು; ಆ ದಿನ ಮಾಡುತ್ತಿದ್ದ ಅಂಬೊಡೆ, ಪಾಯಸ, ಚಿತ್ರಾನ್ನ, ಕೋಸಂಬರಿಯಷ್ಟೇ ನಮ್ಮ ಗಮನವಾಗಿತ್ತು,

ಶ್ರದ್ಧಾಭಕ್ತಿಯಿಂದ ಮಾಡುತ್ತಿದ್ದ ಆ ವ್ರತದ ಸಮಯದಲ್ಲಿ ಅವರನ್ನು ನೋಡುವುದೇ ಒಂದು ದಿವ್ಯವಾದ ಅನುಭವ. ಕಾಸಿನಗಲ ಕುಂಕುಮ, ಕೆನ್ನೆಗಂಟಿದ



ಅರಿಸಿನ, ಮುಡಿ ತುಂಬ ಹೂವು, ಇತ್ಯಾದಿ ಮುತ್ತೈದೆಯ ವೈಭವ! ನೆರೆ ಹೊರೆಯವರೂ ಅವರನ್ನು ಸಾಕ್ಷಾತ್ ಲಕ್ಷ್ಮೀದೇವಿಯಂತಿರುವ ಮುತ್ತೈದೆ ಎಂದು ಬಹು ಗೌರವದಿಂದ ಪ್ರತಿ ಶುಕ್ರವಾರ ಮತ್ತು ಮಂಗಳವಾರದಂದು ಮರೆಯದೇ ಕರೆದು ಕುಂಕುಮ, ತಾಂಬೂಲ ಕೊಡುತ್ತಿದ್ದರು. ಈ ಲಕ್ಷ್ಮೀದೇವಿಯು ತನ್ನ ಮುತ್ತೈದೆತನವನ್ನು ಉಳಿಸಿಕೊಳ್ಳುವುದಕ್ಕಾಗಿ ಐದು ವರ್ಷಗಳ ನಂತರ ಮಂಗಳಗೌರಿ ವ್ರತವು ಮುಗಿದು ಉದ್ಯಾಪನೆ ಕೊಟ್ಟ ಮೇಲೂ ಮತ್ತೆ ತನ್ನ ಮಂಗಳಗೌರಿ ವ್ರತವನ್ನು ಮುಂದುವರಿಸಿದರು.

ಅಂತಹದ್ದೊಂದು ಶ್ರಾವಣ ಮಾಸದ ಮಂಗಳವಾರ ಅವರು ಮಂಗಳಗೌರಿಯ ವ್ರತ ಮಾಡುವ ದಿನದ ಬೆಳಗಿನ ಜಾವದಲ್ಲಿಯೇ ಅವರ ಪತಿ ಸತ್ತ ಸುದ್ದಿ ತಲುಪಿತು. ಅವರಿಗೆ ಬಹಳ ಹೊತ್ತು ಅದನ್ನು ನಂಬಲು ಸಾಧ್ಯವೇ ಆಗಲಿಲ್ಲ. ತನ್ನಂತಹ ವ್ರತಾಚರಣೆ ಮಾಡುವವರಿಗೆ ವೈಧವ್ಯ ಪ್ರಾಪ್ತಿಯೇ? ಸಾಧ್ಯವೇ ಇಲ್ಲ! ಅವರು ಹೆಣವನ್ನು ನೋಡುವಾಗಲೂ ನನ್ನನ್ನು ಕರೆದು ಮೆಲ್ಲನೆ ಪಿಸುಗುಟ್ಟಿದ್ದು ನನಗೆ ಈಗಲೂ ನೆನಪಿದೆ. "ಶಾಂತೂ ಸತ್ತಿಲ್ಲ. (ಅವರ ಗಂಡನ ಹೆಸರು ಶಾಂತಕುಮಾರ್) ನೋಡು ಉಸಿರಾಡುತ್ತಿದ್ದಾರೆ. ಇವರೆಲ್ಲಾ ಸೇರಿ ಏನೋ ಸಂಚು ಮಾಡಿದ್ದಾರೆ. ಶಾಂತೂ ಸಾಯಲು ಸಾಧ್ಯವೇ ಇಲ್ಲ. ನೋಡು, ಏನಾದರೂ ಮಾಡು..."

ವೈಧವ್ಯ ಬಂದಾಯ್ತು. ಸಾಕ್ಷಾತ್ ಲಕ್ಷ್ಮೀದೇವಿ ಎಂದು ಕರೆಯುತ್ತಿದ್ದ ಸುಮಂಗಲಿಯರು ಕುಂಕುಮ ಮತ್ತು ತಾಂಬೂಲ ಕೊಡುವುದಕ್ಕೆ ಕರೆಯಲು ನಿಲ್ಲಿಸಿದರು. ಅವರು ಕೊಟ್ಟಿದ್ದ ಕೀರ್ತಿ ಮತ್ತು ಪ್ರಶಂಸೆಗಳನ್ನು ಹಿಂಪಡೆಯಲಾಯ್ತು. ಮಂಗಳಗೌರಿ ಮತ್ತು ಸ್ವರ್ಣಗೌರಿ ಹಬ್ಬಗಳ ನೆಪದಲ್ಲಿ ಬಾಗಿನಾದಿಗಳನ್ನು ಕೊಡುತ್ತಾ ಸಂಭ್ರಮಿಸುತ್ತಿದ್ದ ದಿನಗಳಿಲ್ಲ. ಮಂಗಳಗೌರಿಯು ಅವರ ಶ್ರದ್ಧಾ ಭಕ್ತಿಗೆ ಮೆಚ್ಚಿ ಬುದ್ಧಿವಂತನಾದ ಅಲ್ಪಾಯು ಮಗುವನ್ನಾಗಲಿ, ದಡ್ಡನಾದ ದೀರ್ಘಾಯು ಮಗುವನ್ನಾಗಲಿ ಕೊಡಲಿಲ್ಲ. ತಾನಿಷ್ಟು ವರ್ಷ ಇಟ್ಟಿದ್ದ ಶ್ರದ್ಧಾ ನಂಬುಗೆಗಳು ಏನೂ ಪ್ರತಿಫಲಕೊಡದೇ ಪಟ್ಟನೆ ಒಂದೇ ಸಲಕ್ಕೆ ಸೋಪಿನ ಗುಳ್ಳೆಯಂತೆ ಒಡೆದುಹೋದ ರೀತಿಗೆ ಅವರ ಹೃದಯವೂ ಒಡೆಯಿತು ಎಂದು ನಾನು ಬಲ್ಲೆ. ಅವರು ಮಾನಸಿಕ ಆಘಾತಕ್ಕೆ ಬಲಿಯಾಗಿ ಸೂರು ದಿಟ್ಟಿಸುತ್ತಾ ಕುಳಿತುಕೊಳ್ಳುವಂತಾಯ್ತು. ಆಹಾರ ಪಾನೀಯಗಳನ್ನು ತೊರೆದು ಕೃಶವಾದರು. ತಮ್ಮ ಪಾಡಿಗೆ ತಾವು ತಮ್ಮ ಗಂಡನ ಬಗ್ಗೆ ಮಾತಾಡಿಕೊಂಡು ಕುಳಿತುಕೊಳ್ಳುತ್ತಿದ್ದರು. ಸಾಕ್ಷಾತ್ ಲಕ್ಷ್ಮೀ ಕಳೆಯ ಹೆಂಗಸು ಸ್ನಾನಗಳಿಲ್ಲದೇ, ಇದ್ದಲ್ಲಿಯೇ ಮಲಮೂತ್ರಗಳನ್ನು ಮಾಡಿಕೊಂಡು, ಇಡೀ ಮನೆಯನ್ನೇ ಹೊಲಸು ವಾಸನೆಯಿಂದ ತುಂಬಿ, ಹುಟ್ಟದಿರುವ ಮಕ್ಕಳ ಬಗ್ಗೆ ಗೊಣಗುತ್ತಿದ್ದರು. ತಮ್ಮೆಲ್ಲಾ ಮುತ್ತೈದೆತನದ ವೈಫಲ್ಯದ ಬಗ್ಗೆ ಹತಾಶಭಾವವಿತ್ತು. ಒಟ್ಟಾರೆ ಎಲ್ಲವನ್ನೂ ಕಳೆದುಕೊಂಡಂತಹ ಭಾವದಲ್ಲಿ ಎಲ್ಲರನ್ನೂ ತಮ್ಮ ಶತ್ರುಗಳಂತೆ ಕಾಣತೊಡಗಿದರು. ನರ ಮನುಷ್ಯರಾಗಲಿ, ದೇವರಾಗಲಿ ತನ್ನ ಗಂಡನನ್ನು ತನಗೆ ದಕ್ಕಿಸಿಕೊಡುವುದಕ್ಕಾಗಲಿ, ತನ್ನ ಬಂಜೆತನದಿಂದ ಬಿಡುಗಡೆಗೊಳಿಸುವುದಾಗಲಿ, ತನ್ನ ಬದುಕನ್ನು ಸರಿಮಾಡುವುದಕ್ಕಾಗಲಿ ಸಹಕರಿಸಲಿಲ್ಲವೆಂದು ಕ್ರೋಧತಪ್ತರಾಗಿಯೇ ವ್ಯಗ್ರರಾಗಿ ವರ್ತಿಸತೊಡಗಿದರು. ಅವರನ್ನು ಸುಮ್ಮನಿರಿಸಲು ನಾವು ಪಟ್ಟ ಪಾಡುಗಳು ಅಷ್ಟಿಷ್ಟಲ್ಲ. ಹೀಗೆ ಮನೋರೋಗಿಯಾಗಿ ಆಸ್ಪತ್ರೆಗಳಲ್ಲಿ, ಮನೆಯ ಕೋಣೆಯಲ್ಲಿ ಒಬ್ಬರೇ ಏಕಾಂಗಿಯಾಗಿ ನರಳಿ ಒಂದು ದಿನ ಚಿರಮೌನ ಧರಿಸಿದರು.

ಇಲ್ಲಿ ಅವರ ತಪ್ಪಿದ್ದದ್ದು ವ್ರತವನ್ನು ಮಾಡುವಲ್ಲಿಯೋ ಅಥವಾ ಮಾಡದಿರುವಲ್ಲಿಯೋ ಅಲ್ಲ. ಮದುವೆಯಾಗಿದ್ದ ವ್ಯಕ್ತಿಗೇ ಎರಡನೆ ಹೆಂಡತಿಯಾಗಿ ಹೋಗಿದ್ದಲ್ಲದೇ, ಮೊದಲನೆಯ ಹೆಂಡತಿಯೊಂದಿಗೆ ನಿತ್ಯ ಸಂಘರ್ಷವಿತ್ತು. ಭಾವನಾತ್ಮಕವಾಗಿ ಒಬ್ಬರಿಗೊಬ್ಬರು ಆಗ ಎಂತಹ ಸಂಬಂಧ ನಿರ್ಮಿಸಿಕೊಂಡು ಮದುವೆಯಾದರೆಂದು ನಾನೀಗ ಅರ್ಥೈಸಲು ಆಗುವುದಿಲ್ಲ. ಆದರೆ ನಾನು ನೇರ ಸಾಕ್ಷಿಯಾಗಿದ್ದ ಮಂಗಳಗೌರಿಯ ಅಮಂಗಳದ ಕಥೆಯನ್ನು ಹಂಚಿಕೊಳ್ಳುವುದು ವ್ರತ ಮಹಾತ್ಮೆಗಳನ್ನು ನಂಬಿದವರೊಡನೆ ಹೇಳಬೇಕಾದ ಸಂಕಟವಿದು.

ಮೌಢ್ಯ ಮತ್ತು ವಾಸ್ತವ ಮುಖಾಮುಖಿಯಾದಾಗ

ಮುಖ್ಯಮಂತ್ರಿ ಸಿದ್ಧರಾಮಯ್ಯನವರ ಅತ್ಯಂತ ಮಹತ್ವದ ಯೋಜನೆಗಳಲ್ಲೊಂದಾದ 'ಮೌಢ್ಯ ವಿರೋಧಿ ಕಾಯಿದೆ' ಸದ್ಯಕ್ಕೆ ನನೆಗುದಿಗೆ ಬಿದ್ದಿದೆ. ಅದಕ್ಕೆ ವಿರೋಧ ಪಕ್ಷಗಳಷ್ಟೇ ಕಾಂಗ್ರೆಸಿಗರೂ ಕಂಟಕರಾಗಿ ಪರಿಣಮಿಸಿದ್ದು ದುರದೃಷ್ಟ. ಮಹಾರಾಷ್ಟ್ರದ ಹಿರಿಯ ವಿಚಾರವಾದಿ ಡಾ.ನರೇಂದ್ರ ದಾಬೋಲ್ಕರ್ ಹುತಾತ್ಮರಾದುದೇ ದೇಶದ ವಿವಿಧ ರಾಜ್ಯಗಳಲ್ಲಿ ಇಂತಹದ್ದೊಂದು ಕಾಯಿದೆ ಜಾರಿಗೆ ತರುವ ನಿಟ್ಟಿನಲ್ಲಿ ಚರ್ಚೆ ನಡೆಯಲು ಕಾರಣವಾಯಿತು. ಮಹಾರಾಷ್ಟ್ರದಲ್ಲಿ ಇಂತಹ ಒಂದು ಕಾಯಿದೆ ಜಾರಿಗೆ ಬರಲು ಓರ್ವ ವಿಚಾರವಾದಿ ಬಲಿಯಾಗಬೇಕಾಗಿ ಬಂದಿದ್ದು ಈ ದೇಶದ ದುರಾದೃಷ್ಟ. ಹಾಗೆ ನೋಡಹೋದರೆ ನಮ್ಮ ಸಂವಿಧಾನವನ್ನೇ ಸಮರ್ಪಕವಾಗಿ ಜಾರಿಗೆ ತಂದರೆ ಮೌಢ್ಯವನ್ನು ನಿಯಂತ್ರಿಸಲು ಪ್ರತ್ಯೇಕವಾದುದೊಂದು ಕಾಯಿದೆಯನ್ನು ರೂಪಿಸುವ ಅಗತ್ಯವೇ ಇಲ್ಲ. ನಮ್ಮ ಸಂವಿಧಾನವು ಧಾರ್ಮಿಕ ಸ್ವಾತಂತ್ರ್ಯದ ಹಕ್ಕು ನೀಡುವುದರೊಂದಿಗೆ ದೇಶದ ಪ್ರಜೆಗಳಲ್ಲಿ ವೈಜ್ಞಾನಿಕ, ವೈಚಾರಿಕ ಪ್ರಜ್ಞೆಯನ್ನು ಬೆಳೆಸುವ ಬಗ್ಗೆಯೂ ಒತ್ತಿ ಹೇಳುತ್ತದೆ.

ಓರ್ವ ಅರೆವೈದ್ಯಕೀಯ ವೃತ್ತಿಪರನಾಗಿ ನನ್ನ ವೃತ್ತಿಬದುಕಿನಲ್ಲಿ ಮೌಢ್ಯ ಮತ್ತು ವಾಸ್ತವಗಳು ಮುಖಾಮುಖಿಯಾಗುವುದಕ್ಕೆ ನಾನು ಸಾಕ್ಷಿಯಾದ ಒಂದೆರಡು ಘಟನೆಗಳನ್ನು ಓದುಗರ ಮುಂದಿಡ ಬಯಸುತ್ತೇನೆ.

ಸಂತಾನ ಯೋಗವಿಲ್ಲದ ಜ್ಯೋತಿಷಿಗೆ ಸಂತಾನ ಪ್ರಾಪ್ತಿಯಾದಾಗ

ಸುಮಾರು ಐದಾರು ವರ್ಷಗಳ ಹಿಂದಿನ ಘಟನೆ. ಒಮ್ಮೆ ನನ್ನ ವೈದ್ಯಕೀಯ ಪ್ರಯೋಗಾಲಯಕ್ಕೆ ವೃತ್ತಿಯಲ್ಲಿ ಜ್ಯೋತಿಷಿಯಾಗಿರುವ ವ್ಯಕ್ತಿಯೋರ್ವರು **SEMEN ANALYSIS** ಎಂಬ ವೀರ್ಯಾಣು ಪರೀಕ್ಷೆಗೆ ಬಂದರು. ಅವರ ವೀರ್ಯದಲ್ಲಿ ಅಣುಗಳ ಸಂಖ್ಯೆ ತೀರಾ ವಿರಳವಾಗಿತ್ತು. ಪರೀಕ್ಷಾ ವರದಿ ನೀಡುವಾಗ ಅವರು ಫಲಿತಾಂಶ ಹೇಗಿದೆ ಎಂದು ಪ್ರಶ್ನಿಸಿದರು. ನಾನು ಪರೀಕ್ಷಾ ಫಲಿತಾಂಶದ ಬಗ್ಗೆ ತಿಳಿಸಿದಾಗ ಸ್ವಲ್ಪವೂ ವಿಚಲಿತರಾಗದ ಅವರು "ನನ್ನ ಜಾತಕದ ಪ್ರಕಾರ ನನಗೆ ಸಂತಾನ ಯೋಗ್ಯವಿಲ್ಲ" ಎಂದರು. "ಅದೇನೇ ಇರಲಿ, ನೀವು ಚಿಕಿತ್ಸೆ ಪಡೆಯಿರಿ, ಉತ್ತಮ ಫಲಿತಾಂಶ ಬರಬಹುದು" ಎಂದೆ.

ಸುಮಾರು ಎರಡು ತಿಂಗಳು ಚಿಕಿತ್ಸೆ ಪಡೆದ ಬಳಿಕ ಅವರು ಪುನಃ ವೀರ್ಯ ಪರೀಕ್ಷೆಗೆ ಬಂದರು. ವೀರ್ಯಾಣುಗಳ ಸಂಖ್ಯೆಯಲ್ಲಿ ಒಳ್ಳೆಯ ಬೆಳವಣಿಗೆ ಕಂಡು ನನಗೂ ಸಂತಸವಾಯಿತು. ಹೀಗೆ ಆ ಜ್ಯೋತಿಷಿ ಸುಮಾರು ಎರಡು ವರ್ಷಗಳ ಕಾಲ 15ಕ್ಕೂ ಹೆಚ್ಚು ಬಾರಿ ನನ್ನ ಪ್ರಯೋಗಾಲಯದಲ್ಲಿ ವೀರ್ಯ ಪರೀಕ್ಷೆ ಮಾಡಿಸಿದ್ದರು. ಪ್ರತಿ ಬಾರಿಯೂ ಹಿಂದಿನ ಬಾರಿಗಿಂತ ವೀರ್ಯಾಣುಗಳ ಸಂಖ್ಯೆಯಲ್ಲಿ ಹೆಚ್ಚಳ ಕಂಡುಬಂದಿದ್ದರಿಂದ ಅವರು ಅದೇ ವೈದ್ಯರಿಂದ ಚಿಕಿತ್ಸೆ ಪಡೆಯುತ್ತಾ ವೈದ್ಯರ ಸಲಹೆಯ ಮೇರೆಗೆ ವೀರ್ಯ ಪರೀಕ್ಷೆ ಮಾಡಿಸುತ್ತಿದ್ದರು. ನನಗಿನ್ನೂ ನಿಖರವಾಗಿ ನೆನಪಿದೆ. ಕೊನೆಯ ಬಾರಿ ಅವರ ವೀರ್ಯಾಣುಗಳ ಸಂಖ್ಯೆ **54 million/ml** ಇತ್ತು. (ನಾರ್ಮಲ್ ಪ್ರಕರಣಗಳಲ್ಲಿ ವೀರ್ಯಾಣುಗಳ ಸಂಖ್ಯೆ ಕನಿಷ್ಠ **40 million/ml** ಗಿಂತ ಹೆಚ್ಚಿರಬೇಕು).

ಕೊನೆಯ ಬಾರಿ ಪರೀಕ್ಷಿಸಿದ ಕೆಲವು ದಿನಗಳ ಬಳಿಕ ಒಂದು 'ಸುದಿನ'ದಲ್ಲಿ ಆ ಜ್ಯೋತಿಷಿಯವರು ಪರೀಕ್ಷೆಗೆ ವೀರ್ಯದ ಬದಲಾಗಿ ತನ್ನ ಪತ್ನಿಯ ಮೂತ್ರ ತಂದಿದ್ದರು. **Pregnancy Test Positive** ಎಂಬ ಫಲಿತಾಂಶ ತೋರಿಸಿತು. ಫಲಿತಾಂಶ ತಿಳಿಸಿದಾಗ ಆ ಜ್ಯೋತಿಷಿಯ ಆನಂದಕ್ಕೆ ಪಾರವೇ ಇರಲಿಲ್ಲ. ಸಹಜವಾಗಿಯೇ ನನಗೂ ಖುಷಿಯಾಗಿತ್ತು. ಜ್ಯೋತಿಷ್ಯ ಶಾಸ್ತ್ರ ಎಂದರೆ ಅಪ್ಪಟ ಸುಳ್ಳು ಎಂದು ಪ್ರತಿಪಾದಿಸುವ ನನಗೆ ಜ್ಯೋತಿಷಿಗಳನ್ನು ಕೆಣಕಲು ಒಳ್ಳೆಯ ಅಸ್ತ್ರವೂ ಸಿಕ್ಕಿತು. ಆದರೆ ನಾನೋರ್ವ ವೈದ್ಯಕೀಯ ವೃತ್ತಿಪರನೆಂಬ ಪ್ರಜ್ಞೆ ನನ್ನಲ್ಲಿದ್ದುದರಿಂದ ನಾನು ಸುಮ್ಮನಿದ್ದೆ. ಬಹುಶಃ ಆ ಜ್ಯೋತಿಷಿಯ ಮನಸ್ಸಿನಲ್ಲೂ ಅದೇನೋ ಕೊರೆಯುತ್ತಿತ್ತು, ನನ್ನ ಕಿವಿಯ ಪಕ್ಕ ಬಂದು "ಸಾರ್, ಸಂತಾನ ಯೋಗವಿಲ್ಲ ಎಂದಿದ್ದನ್ನು ಯಾರಲ್ಲೂ ಹೇಳಬೇಡಿ. ಇದು ನನ್ನ ಹೊಟ್ಟೆಪಾಡಿನ ಕಸುಬು" ಎಂದು ಉಸುರಿದರು. ನಾನು ನಕ್ಕು ಸುಮ್ಮನಾದೆ. ಇದೀಗ ಅವರು ಇಬ್ಬರು ಮುದ್ದಾದ ಮಕ್ಕಳ ತಂದೆ. ಈಗ ಅವರು ತಮ್ಮ ಸಂಸಾರ ಸಮೇತ ಸಿಗುವಾಗೆಲ್ಲಾ ನಾನವರಿಗೆ ಕಣ್ಣು ಹೊಡೆದು ಅಣಕಿಸುವುದಿದೆ. ಅವರು ಸುಮ್ಮನೆ ನಕ್ಕು ಮುಂದೆ ಸಾಗುತ್ತಾರೆ. ಹ್ಞಾಂ... ಅಂದಹಾಗೆ ಆ ಜ್ಯೋತಿಷಿ ಅವಿದ್ಯಾವಂತರೇನಲ್ಲ ಅವರೋರ್ವ ಪದವೀಧರ.

ಗೋಮೂತ್ರದ ಕತೆಗಳು


ಸುಮಾರು ಆರೇಳು ವರ್ಷಗಳ ಹಿಂದೆ ನನ್ನ ಪ್ರಯೋಗಾಲಯಕ್ಕೆ ಗೆಳೆಯರೊಬ್ಬರು ವೀರ್ಯ ಪರೀಕ್ಷೆಗೆ ಬಂದಿದ್ದರು. ಅವರ ವೀರ್ಯಾಣುಗಳ ಸಂಖ್ಯೆ, ಚಲಾವಣೆ ಇತ್ಯಾದಿಗಳೆಲ್ಲಾ ನಾರ್ಮಲ್ ಇತ್ತು, ಆದರೂ ಅವರ ಪತ್ನಿ ಗರ್ಭವತಿಯಾಗಿರಲಿಲ್ಲ, ಅವರ ಪತ್ನಿಯ ಎಲ್ಲಾ ಪರೀಕ್ಷಾ ವರದಿಗಳೂ ನಾರ್ಮಲ್ ಇತ್ತು, ಆದರೂ ಅವರ ಪತ್ನಿ ಗರ್ಬಿಣಿಯಾಗದಿರಲು ಅದೇನು ಕಾರಣವೋ ನನಗೆ ತಿಳಿದಿರಲಿಲ್ಲ.

ಇದಾಗಿ ಕೆಲವು ತಿಂಗಳ ಬಳಿಕ ಅವರು ತಮ್ಮ ಗರ್ಭಿಣಿ ಪತ್ನಿಯನ್ನು ಕೆಲವು ಪರೀಕ್ಷೆಗಳಿಗಾಗಿ ಕರೆದುಕೊಂಡು ಬಂದರು. ಅದೂ ಇದೂ ಮಾತನಾಡುತ್ತಾ "ಅದೇನೋ ಸಮಸ್ಯೆಯಿತ್ತಲ್ವಾ, ಏನು ಟ್ರೀಟ್‌ಮೆಂಟ್ ಮಾಡಿದಿರಿ?" ಎಂದು ಪ್ರಶ್ನಿಸಿದೆ. ಇಂಜಿನಿಯರಿಂಗ್ ಪದವೀಧರನಾದ ಆ ವ್ಯಕ್ತಿ ಹೀಗಂದರು:

"ಅದೇನೋ ನನ್ನ ವೀರ್ಯದ **PH value** ಜಾಸ್ತಿ ಅಂತೆ. ಅದರಿಂದಾಗಿ ಅಂಡಾಣುಗಳ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತಿತ್ತಂತೆ. ಆದುದರಿಂದ ವೈದ್ಯರು ಒಂದು ಶಸ್ತ್ರಚಿಕಿತ್ಸೆಗೆ ಸೂಚಿಸಿದ್ದರು. ಶಸ್ತ್ರಚಿಕಿತ್ಸೆ ಆದಕೂಡಲೇ ಸಮಸ್ಯೆ ಪರಿಹಾರವಾಗಿದೆ" ಎಂದರು. ಆ ಬಳಿಕ ಅವರಿಗೊಂದು ಮುದ್ದಾದ ಗಂಡು ಮಗುವೂ ಆಯಿತು.

ಒಮ್ಮೆ ಮಂಗಳೂರಿನ ಪ್ರಸಿದ್ಧ ವಿಚಾರವಾದಿ ಡಾ. ನರೇಂದ್ರ ನಾಯಕರು ದಿನಪತ್ರಿಕೆಯೊಂದರಲ್ಲಿ "ಗೋಮೂತ್ರಕ್ಕೂ ನಾಯಿ ಮೂತ್ರಕ್ಕೂ ವ್ಯತ್ಯಾಸವಿಲ್ಲ" ಎಂಬ ಶೀರ್ಷಿಕೆಯಡಿ ಲೇಖನವೊಂದನ್ನು ಬರೆದಿದ್ದರು. ಇದರ ಕುರಿತಂತೆ ನನ್ನ ಹಿರಿಯ ಹಿಂದೂ ಗೆಳೆಯರೊಬ್ಬರ ಜೊತೆ ಚರ್ಚಿಸುತ್ತಿದ್ದೆ. ಪ್ರಗತಿಪರರಾಗಿದ್ದ ಆ ಗೆಳೆಯರ ಅಂಗಡಿಗೆ ಶಸ್ತ್ರಚಿಕಿತ್ಸೆಯ ಬಳಿಕ ಸಂತಾನಭಾಗ್ಯ ಪಡೆದ ವ್ಯಕ್ತಿಯೂ ಬಂದು ನಮ್ಮ ಚರ್ಚೆಗೆ ಸೇರಿಕೊಂಡು "ನರೇಂದ್ರ ನಾಯಕನಿಗೆ ಮಂಡೆ ಸಮ ಇಲ್ಲ, ಅವನಿಗೆಂತ ಗೊತ್ತು ಗೋ ಅರ್ಕ(ಮೂತ್ರ)ದ್ದು ಔಷಧೀಯ ಗುಣ. ಗೋಮೂತ್ರ ಕ್ಯಾನ್ಸರ್‌ಗೆ ರಾಮಬಾಣ, ಮಕ್ಕಳಿಲ್ಲದವರಿಗೆ ಮಕ್ಕಳಾಗ್ತದೆ....." ಇನ್ನೂ ಏನೇನೋ ಅಂದರು. ನಾನು ತಕ್ಷಣ ಮಾತು ಬದಲಿಸಿ "ಅವತ್ತು ನಿಮ್ಮ ಆ ಸರ್ಜರಿ ಯಾವ ಡಾಕ್ಟರು ಮಾಡಿದ್ದು?" ಎಂದು ಪ್ರಶ್ನಿಸಿದೆ. ನನ್ನ ಪ್ರಶ್ನೆಗೆ ಉತ್ತರ ಕೊಟ್ಟವರೇ ತಕ್ಷಣ ಅಲ್ಲಿಂದ ಜಾಗ ಖಾಲಿ ಮಾಡಿದರು.

ನನ್ನ ಬಳಿ ಅನೇಕ ವರ್ಷಗಳಿಂದ ಮಧುಮೇಹದ ರಕ್ತ ಪರೀಕ್ಷೆ ಮಾಡಿಸುತ್ತಿದ್ದ ನನ್ನ ಆತ್ಮೀಯರೇ ಆಗಿರುವ ಹಿರಿಯ ಮಹಿಳೆಯೋರ್ವರು ಒಮ್ಮೆ ಮಂಗಳೂರಿನ ಗೋಮೂತ್ರ ಚಿಕಿತ್ಸಾಲಯವೊಂದರ ಗುಣಗಾನ ಮಾಡಿದರು.



ಮಧುಮೇಹಕ್ಕೆ ಗೋ ಅರ್ಕ ರಾಮಬಾಣ, ಅದೂ ಇದು ಎಂದು ಏನೇನೋ ಅಂದರು. ಅವರ ಮಾತುಗಳನ್ನೆಲ್ಲಾ ಆಲಿಸಿದ ನಾನು ಕೊನೆಗೆ "ಅಕ್ಕಾ ಎಲ್ಲಾ ಸರಿ, ನೀವು ಮಧುಮೇಹಕ್ಕೆ ಪ್ರತಿದಿನ ಸೇವಿಸುವ **Glycephage** ಮಾತ್ರೆಯನ್ನು ಇವತ್ತಿನಿಂದ ಬಿಟ್ಟುಬಿಡಿ. ಒಂದು ತಿಂಗ[ಳು] ಬರೀ ಗೋ ಅರ್ಕ ಕುಡಿದು ಆ ಬಳಿಕ ರಕ್ತ ಪರೀ[ಕ್ಷೆ] ನೋಡೋಣ. ಒಂದು ವೇಳೆ ನಿಮ್ಮ ಮಧುಮೇ[ಹ] ನಿಯಂತ್ರಣದಲ್ಲಿದ್ದರೆ ಗೋ ಅರ್ಕದ ಪ್ರತಾಪವನ್ನು ನಾನು ಒಪ್ಪುತ್ತೇನೆ" ಎಂದೆ. ಅದಕ್ಕವರು "ಅದು ಹಾಗಲ್ಲ, ಇಂಗ್ಲಿ[ಷ್] ಮಾತ್ರೆಗಳ ಜೊತೆಜೊತೆಗೇ ಗೋ ಅರ್ಕ ಸೇವಿಸಬೇ[ಕು] ಎಂದು ಅಲ್ಲಿನ ಪಂಡಿತರು ಹೇಳಿದ್ದಾರೆ" ಅಂದರು. [...] ಕುರಿತಂತೆ ಎಷ್ಟೇ ತಿಳಿ ಹೇಳಲು ಪ್ರಯತ್ನಿಸಿ ದರೂ ಅವರು ಕೇಳುವ ಸ್ಥಿತಿಯಲ್ಲಿರಲಿಲ್ಲ. ಈ ಘಟ[ನೆ] ನಡೆದು ಕೆಲವು ತಿಂಗಳ ಬಳಿಕ ಅದೇ ಮಹಿ[ಳೆ] ನನ್ನಲ್ಲಿ "ಗೋ ಅರ್ಕದಲ್ಲೇ ಮಧುಮೇ[ಹ] ನಿಯಂತ್ರಣಕ್ಕೆ ಬರುತ್ತದಾದ್ರೆ ಪುನಃ ಇಂಗ್ಲಿ[ಷ್] ಮಾತ್ರೆ ಸೇವಿಸಲು ಹೇಳುವುದೇಕೆ? ಎ[...] ಮೋಸ ಸಾರ್" ಅಂದರು. ಅವರೀಗ ಗೋ ಅರ್ಕ ಸೇವನೆ ಬಿಟ್ಟುಬಿಟ್ಟಿದ್ದಾರೆ.

ವೈದ್ಯಕೀಯ ವಿಜ್ಞಾನದ ಪ್ರಕಾರ ಮೂ[ತ್ರ] ಅಂದರೆ ಯಾವುದೇ ಪ್ರಾಣಿಯ ದೇಹ[...] ಹೊರಹಾಕುವ ದ್ರವ ರೂಪದ ಕಲ್ಮಶ. ಅದರ[ಲ್ಲಿ] ಪ್ರೋಟೀನ್, ಪೊಟ್ಯಾಶಿಯಂ, ಸೋಡಿಯ[ಂ] ಮುಂತಾದವುಗಳು ಒಂದು ಮಿತಿಯಲ್ಲಿ ಹೊ[ರ] ಹೋಗುತ್ತವೆ. ಅಂದಮಾತ್ರಕ್ಕೆ ಅದು ಕುಡಿಯಲು ಯೋಗ್ಯವೆಂದಲ್ಲ.


ಹಾಗೆ ನೋಡಹೋದರೆ ಮಲ ಎಂದ[ರೆ] ಯಾವುದೇ ಪ್ರಾಣಿಗಳು (ಮನುಷ್ಯನೂ ಒಂದು ಪ್ರಾಣಿ) ಸೇವಿಸಿದ ಆಹಾರಗಳು ಜೀರ್ಣಗೊಂಡು ಶಕ್ತಿ ಉತ್ಪಾದನೆಗೆ ಬಳಕೆಯಾಗಿ ಉಳಿದುದ[...] ದೇಹವು ಮಲ ರೂಪದಲ್ಲಿ ಹೊರಹಾಕುತ್ತ[ದೆ]. ಒಟ್ಟಿನಲ್ಲಿ ಮಲ ಎಂದರೆ ಘನ ಅಥವಾ ಅರೆಘ[ನ] ರೂಪದ ಕಲ್ಮಶ. ಅದರಲ್ಲೂ ಸ್ವಲ್ಪಮಟ್ಟಿಗೆ ಮೇ[ಲೆ] ಹೇಳಿದಂತಹದ್ದೇ ಅಂಶಗಳಿರುತ್ತವೆ. ಅಂದಮಾತ್ರಕ್ಕೆ ಅದು ತಿನ್ನಲು ಯೋಗ್ಯವೇ ಗೋಮೂತ್ರ ಚಿಕಿತ್ಸಾ ಪರಿಣತ[ರು] ಉತ್ತರಿಸುವರೇ?

■ ಇಸ್ಮತ್ ಫಜೀರ್

ಅನಂತಮೂರ್ತಿ ಜನಪರ ಸಿದ್ಧಾಂತದ ಬಹುದೊಡ್ಡ ಆಸ್ತಿ

ಯು.ಆರ್.ಅನಂತಮೂರ್ತಿಯವರನ್ನು ಕುರಿತ 'ಲಂಕೇಶ್' ವಿಶೇಷಾಂಕ ಚೆನ್ನಾಗಿತ್ತು. ಸಾಮಾಜಿಕ ಸ್ವಾಸ್ಥ್ಯದ ಬಗ್ಗೆ ತೀವ್ರವಾಗಿ ಒಂದು ಪೀಳಿಗೆಯನ್ನು ಪ್ರಭಾವಿಸಿದ ಪಿ.ಲಂಕೇಶ್, ತೇಜಸ್ವಿ, ನಂಜುಂಡಸ್ವಾಮಿ, ರಾಮದಾಸ್‌ರಂತಹ ಅನೇಕರು ದುರದೃಷ್ಟವಶಾತ್ ಈಗ ನಮ್ಮೊಂದಿಗಿಲ್ಲವಾದರೂ ಅನಂತಮೂರ್ತಿಯಂತಹ ಹಿರಿಯರಾದರೂ ಇದೀಗ ನಮ್ಮೊಂದಿಗಿದ್ದಾರೆ ಎನ್ನುವುದೇ ಸಮಾಧಾನಕರ ವಿಷಯ.

ಅವರ ಕುರಿತು ಭಿನ್ನಾಭಿಪ್ರಾಯಗಳೇನೇ ಇದ್ದರೂ ಸೂಕ್ತ ಸಂದರ್ಭಗಳಲ್ಲಿ ಅವರ ಬೆನ್ನಹಿಂದೆ ನಿಲ್ಲದಿರುವಂತಹ ತಪ್ಪುಗಳು ಇನ್ನಾದರೂ ಆಗಬಾರದು. ಈ ಮಾತು ಹೇಳಲು ಕಾರಣವೂ ಇದೆ. ಇಂತಹ ಕಾರಣಗಳಿಂದಲೇ ಅನಂತಮೂರ್ತಿಯವರ ಬಗ್ಗೆ ತುಚ್ಛವಾಗಿ ಮಾತನಾಡುವ ಗುಂಪೊಂದು ಹುಟ್ಟಿ ಬೆಳೆಯಲು ನಾವೇ ಪರೋಕ್ಷವಾಗಿ ಕಾರಣರಾಗಿದ್ದೇವೆ ಎನ್ನುವುದನ್ನು ಮರೆಯಬಾರದು. ಜ್ಞಾನಪೀಠಿ, ಬುದ್ಧಿಜೀವಿ ಎಂದು ಲೇವಡಿ ಧ್ವನಿಯಲ್ಲಿ ಹೀಯಾಳಿಸುವುದು, ಅನಂತಮೂರ್ತಿಯವರ ಕಾಲುಭಾಗಕ್ಕೂ ಸಮಾನ ಬಾರದ ಪ್ರತಾಪ ಸಿಂಹ, ಸೂಲಿಬೆಲೆಯಂತಹ ಅನೇಕ ಚಿಲ್ಲರೆ ಮತಾಂಧ ಮನಸ್ಸುಗಳು ಅವರನ್ನು ಕಂಡಕಂಡಲ್ಲಿ ತೆಗಳುವುದು, ಕೀಳು





ಕಾರ್ಯಾಚರಣೆಗೆ ಕುಮ್ಮಕ್ಕು ನೀಡುವುದು (ಮೋದಿ ಕುರಿತ ಅನಂತಮೂರ್ತಿ ಹೇಳಿಕೆಗೆ ಚಿಲ್ಲರೆ ಪೈಸೆ ಒಟ್ಟು ಮಾಡಿ ಕಳಿಸಿದ್ದವು) ಇವಕ್ಕೆಲ್ಲ ನಾವೇ ಕಾರಣರು.

ಮಂಗಳೂರಿನ ಬಿ.ವಿ.ಕಕ್ಕಿಲ್ಲಾಯರವರು ನಿಧನರಾದಾಗ ಅವರ ಬಗ್ಗೆ ಗೌರಿಯವರು ಬರೆದಿದ್ದನ್ನು ನೋಡಿ ಅಚ್ಚರಿಯಾಗಿತ್ತು, ವೃದ್ಧಾಪ್ಯದಲ್ಲಿ ಕಣ್ಣು ಸರಿಯಾಗಿ ಕಾಣಿಸದಿದ್ದರೂ ಯಾರಿಂದಲೋ ಅವರು ಪತ್ರಿಕೆಗೆ ಬರೆಸುತ್ತಿದ್ದರಂತೆ. ಇದು ಸಾಮಾಜಿಕ ಸ್ವಾಸ್ಥ್ಯದ ಕುರಿತಾದ ಅವರಿಗಿರುವ ಕಾಳಜಿಯನ್ನು ತೋರಿಸುತಿತ್ತು. ಅನಂತಮೂರ್ತಿಯವರದ್ದೂ ಕೂಡ ಎಂಭತ್ತರ ವೃದ್ಧಾಪ್ಯದ ವಯಸ್ಸು. ಜೊತೆಗೆ ಅನಾರೋಗ್ಯ ಬೇರೆ. ಆದರೂ ಮೋದಿಯಿಂದ ಹಿಡಿದು ಗೋಧಿ (ಕೃಷಿ-ಕೃಷಿಕ)ಯವರೆಗೂ ಅವರು ಚಿಂತಿಸಬಲ್ಲರು.

ಅನಂತಮೂರ್ತಿಯವರು ದೇಶದ ಅತ್ಯುನ್ನತ ಗೌರವಗಳು, ಉನ್ನತ ಹುದ್ದೆಗಳನ್ನೆಲ್ಲ ಅನುಭವಿಸಿಯಾಗಿದೆ. ಆರೆಸ್ಸೆಸ್, ಮೋದಿ, ಹಿಂದುತ್ವದಂತಹ ಕೊಳಕುಮಂಡಲದ ಹುತ್ತಕ್ಕೆ ನಾನ್ಯಾಕೆ ಸುಖಾಸುಮ್ಮನೆ ಕೈ ಹಾಕಿ ಇದ್ದಬದ್ದ ಹೆಸರನ್ನು ಅನವಶ್ಯಕವಾಗಿ ಕೆಡಿಸಿಕೊಳ್ಳಬೇಕು? ಎಂದು ಅವರೆಂದೂ ಚಿಂತಿಸಿದವರಲ್ಲ. ಅವರು ನೂರು ವರ್ಷ ಕಾಲ ನಮ್ಮೊಂದಿಗಿರಬೇಕು.


- ಶಶಿ ಪುತ್ತೂರು, ದ.ಕ.

ನಮೋ ಪೆಪ್ಪರ್ ಸ್ಪ್ರೇ ಮೊದಲೇ ಬರಬೇಕಿತ್ತು


ಉಡುಪಿಯ 'ನಮೋ ಬ್ರಿಗೇಡ್' ಸಂಘಟನೆಯವರು ಮಹಿಳೆಯರಿಗೆ ದುರುಳರಿಂದ ರಕ್ಷಣೆ ಕೊಡುವ (ಮಹಿಳಾ ಪರ ಎಂದು ಬಿಂಬಿಸಿಕೊಳ್ಳಲು) ಸಲುವಾಗಿ 'ಮೋ[ದಿ] ಬ್ರಾಂಡ್'ನ ಮೆಣಸಿನ ಸಾರದ ಪೆಪ್ಪರ್ ಸ್ಪ್ರೇಯನ್ನು ಹೊಸದಾ[ಗಿ] ಹೊರತಂದಿದೆಯಂತೆ. ಇದು ನಿಜಕ್ಕೂ ಸ್ವಾಗತಾರ್ಹ ಸಂಗತಿಯೇನೋ ಹೌದು. ಆದರೆ ಈ ಪ್ರಾಡಕ್ಟ್ ಸ್ವ[...] ಮೊದಲೇ ಬಂದಿದ್ದರೆ ತುಂಬಾ ಚೆನ್ನಾಗಿತ್ತು.

ಬಿಜೆಪಿಯ ಹಾಲಪ್ಪನ ಸ್ನೇಹಿತನ ಪತ್ನಿಯ ಕೈಯಲ್ಲಿ ಹೊನ್ನಾಳಿ ಹೋರಿಕರ, ಸದನದಲ್ಲಿ ಬ್ಲೂಫಿಲಮ್ ನೋ[ಡಿ] ಟೆಂಪ್ಟ್ ಆದ ಬಿಜೆಪಿಯ ಪಾಲೇಮರಾದಿ ಶಾಸಕರುಗ[ಳ] ಬಳಿ ಕಾರ್ಯನಿಮಿತ್ತ ಬರಬೇಕಿರುವ ಮಹಿಳೆಯರ ಕೈಯಲ್ಲಿ (ಮುಂಜಾಗ್ರತೆಗೋಸ್ಕರ) ಇದನ್ನು ಹಂಚಬಹುದಿತ್ತು. ಸಾವ[...] ಸಾಕೆಂದು ಆರಾಮವಾಗಿ ತನ್ನ ಪಾಡಿಗೆ ಡೆಲ್ಲಿಗೆ ಹೋ[...] ಕೂತ ಪದ್ಮಪ್ರಿಯಾರನ್ನು ಬ್ಲಾಕ್ ಮೇಲ್ ಮಾಡಿ ಹೆದರಿಸಲು ಬಂದ ಕರಾವಳಿಯ ಮಾಜಿ ಮತ್ತು ಹಾಲಿ ಶಾಸಕರನ್ನು ಏಕಾಂಗಿಯಾಗಿ ಧೈರ್ಯದಿಂದ ಬೆದರಿಸಲಿ ಕ್ಕಾದರೂ ಇದು ಪದ್ಮಪ್ರಿಯಾರ ನೆರವು ಬರುತ್ತಿತ್ತಲ್ಲದೇ ಇದಿದ್ದಿದ್ದರೆ ಅವರು ಬಂದವರನ್ನು ಓಡಿಸಿ ಆತ್ಮಹತ್ಯೆಗೂ ಗುರಿಯಾಗದ[ೆ] ಬದುಕಿರುತ್ತಿದ್ದರು (ಆತ್ಮಹತ್ಯೆ ಮಾಡುವುದೇ ಉದ್ದೇ[ಶ] ಇದ್ದಿದ್ದರೆ ಉಡುಪಿಯಲ್ಲೇ ಮಾಡಿಕೊಳ್ಳುತ್ತಿದ್ದರು; ಡೆಲ್ಲಿ[ಗೆ] ಹೋಗಬೇಕಿತ್ತೇ? ಅಂತಹ ವಾತಾವರಣ ಅಲ್ಲಿ ನಿರ್ಮಿಸಿದವರು ಯಾರು?)

ಬಿಜೆಪಿಯ ಪ್ರಧಾನಿ ಅಭ್ಯರ್ಥಿ ಮೋದಿಗಿಂತಲೂ ಹೆ[ಚ್ಚು] ಚರಿಷ್ಮಾ ಹೊಂದಿದ್ದ ಯುವ ನಾಯಕ ಪ್ರಮೋದ್ ಮಹಾಜನ್ ಸಹೋದರನ ಪತ್ನಿಯ ಕೈಯಲ್ಲಿದ್ದಿದ್ದರೆ, ಭಯ[...] ಕಾರಣಕ್ಕೆ ಮಹಾಜನ್ ಸೋದರನ ಕೋಪಕ್ಕೆ ಗುರಿಯಾಗದ[...]



...ಗೆಳೆಯರಿಗೆ ಲವ್‌ಲೆಟರ್ ಬರೆದು ಕೊಡುತ್ತಿದ್ದೆ



ರೈಟ್ ಆದ್ರೆ ಚಿತ್ರದ 'ಕುಡ್ಕೊಂಡು ತೂರಾಡ್ಕೊಂಡು', ಮರುಜನ್ಮ ಚಿತ್ರದ 'ನನ್ನ ಒಲವಿನ ಕಾವೇರಿ', ಹನಿಹನಿ ಚಿತ್ರದ 'ಧಿನಕ ಧಿನಕ ಧಿನ್ನ', ಮಸ್ತ್ ಮಜಾ ಮಾಡಿ ಚಿತ್ರದ 'ಓಟ ಓಟ ಓಟಾನೋ', ಜಾಜಿ ಮಲ್ಲಿಗೆ ಚಿತ್ರದ 'ಚಿಟ್ಟೆ ಚಿಟ್ಟೆ', ಮನಸಿನ ಮಾತು ಚಿತ್ರದ 'ನಾನಿರಲು ನನ್ನವಳೆದುರು' ಸೇರಿದಂತೆ ಬಿಡುಗಡೆಯಾಗಬೇಕಿರುವ ಇನ್ನೂ ಕೆಲವೊಂದು ಚಿತ್ರಗಳಿಗೆ ಹಾಡು ಬರೆದಿರುವ ಚಿತ್ರಸಾಹಿತಿ ಶ್ಯಾಮ್ ಶಿವಮೊಗ್ಗ ತಮ್ಮ ಮನಸಿನ ಮಾತುಗಳನ್ನು ಇಲ್ಲಿ ಬಿಚ್ಚಿಟ್ಟಿದ್ದಾರೆ.

ಸಂದರ್ಶನ

ನಿಮ್ಮೂರು, ಹೆತ್ತವರು, ಶಿಕ್ಷಣದ ಬಗ್ಗೆ ಹೇಳ್ತೀರಾ?

...ನಾನು ಮೂಲತಃ ಶಿವಮೊಗ್ಗದವನು. ಹುಟ್ಟಿದ್ದು ...ನಗರ ತಾಲೂಕಿನ ನೇಗಿಲೋಣಿಯಲ್ಲಿ, ಅಪ್ಪ ಭಾಸ್ಕರ್ ... ಭದ್ರಾವತಿಯಲ್ಲಿ ಹೋಟೆಲ್ ಇಟ್ಟಿದ್ದರು. ಈಗ ...ದು ವಿಶ್ರಾಂತ ಜೀವನ. ಅಮ್ಮ ಲಕ್ಷ್ಮೀದೇವಿ ...ಿ. ಭದ್ರಾವತಿಯಲ್ಲಿ ಪಿಯುಸಿ ಮುಗಿಸಿ, ಶಿವಮೊಗ್ಗದಲ್ಲಿ ... ಮಾಡಿದೆ.

** ಸಾಹಿತ್ಯದೆಡೆಗಿನ ಆಸಕ್ತಿ ಯಾವ ವಯಸ್ಸಿನಲ್ಲಿ ...ವಾಯಿತು?*

...ಳು, ಎಂಟನೇ ತರಗತಿಯಲ್ಲಿದ್ದಾಗಲೇ ಸಾಹಿತ್ಯದ ಆಸಕ್ತಿ ಹುಟ್ಟಿಕೊಂಡಿತು. ಆ ದಿನಗಳಲ್ಲಿ ಸಿನಿಮಾ ಹಾಡುಗಳ ರಾಗಕ್ಕೆ ಪರ್ಯಾಯ ಸಾಲುಗಳನ್ನು ಕಟ್ಟುವ ಹವ್ಯಾಸವಿತ್ತು. ಉದಾಹರಣೆಗೆ 'ಪ್ರೀತಿ ಮಾಡಬಾರದು... ಮಾಡಿದರೆ ಜಗಕೆ ಹೆದರಬಾರದು' ಸಾಲಿಗೆ ಪರ್ಯಾಯವಾಗಿ 'ಗಲಾಟೆ ಮಾಡಬಾರದು... ಮಾಡಿದರೆ ಮೇಷ್ಟ್ರಿಗೆ ಹೆದರಬಾರದು' ತರಹದ ಪ್ರಯತ್ನಗಳು. ಜೊತೆಗೆ, ಪತ್ರಲೇಖನ, ಹನಿಗವನ, ಚುಟುಕುಗಳನ್ನೂ ಬರೆಯುತ್ತಿದ್ದೆ.

** ಸಿನಿಮಾ ರಂಗಕ್ಕೆ ಬರಬೇಕು ಅಂತ ಯಾವಾಗ ಅನ್ನಿಸಿದ್ದು? ಯಾಕೆ?*

ಪತ್ರಲೇಖನ ಕೂಡಾ ನನಗೆ ಇಷ್ಟವಾಗಿತ್ತು. ಗೆಳೆಯರಿಗೆ ಲವ್ ಲೆಟರ್ ಬರೆದುಕೊಡುತ್ತಿದ್ದೆ. ಅದನ್ನವರು ಅವರ ಪ್ರೇಯಸಿಯರಿಗೆ ಕೊಟ್ಟು ಪಟಾಯಿಸುತ್ತಿದ್ದರು. ಆ ಮೂಲಕ ನನ್ನ ಲವ್ ಲೆಟರ್‌ಗಳು ಆ ಕಾಲಕ್ಕೆ ಕ್ಲಿಕ್ ಆಗಿದ್ದವು ಅನ್ನಿ! ಅದನ್ನು ಗಮನಿಸಿದ ಫ್ರೆಂಡ್ಸ್ 'ನೀನ್ಯಾಕೋ ಸಿನಿಮಾಗೆ ಬರೆಯಬಾರದು?' ಅಂತ ತಲೆಗೆ ಹುಳ ಬಿಟ್ಟರು. 'ಹೌದಲ್ವಾ... ಪ್ರಯತ್ನಿಸೋಣ' ಅಂತ ತೀರ್ಮಾನಿಸಿ ಬೆಂಗಳೂರಿಗೆ ಬಂದು ಒಂದೆರಡು ಕಡೆ ಅವಕಾಶಗಳಿಗಾಗಿ ಪ್ರಯತ್ನಿಸಿದೆ.

** ನೀವು ಬರೆದ ಮೊದಲ ಚಿತ್ರಗೀತೆ ಯಾವುದು? ಆ ಅನುಭವ ಹೇಗಿತ್ತು?*

ರೈಟ್ ಆದ್ರೆ ಚಿತ್ರದ 'ಕುಡ್ಕೊಂಡು ತೂರಾಡ್ಕೊಂಡು... ತಂಗಾಳೀಲಿ ತೇಲಾಡ್ಕೊಂಡು... ನಮ್ ಊರಿಗೆ ನಾವ್ ಬರ್ತಾ ಇದ್ರೆ... ನಮ್ ಊರೋರ್ಗೆಲ್ಲೇ ಸೊಂಪು ನಿದ್ರೆ' ಅನ್ನುವ ಗೀತೆ ನಾನು ಬರೆದ ಮೊದಲ ಗೀತೆ. ಆ ಅನುಭವ ಚೆನ್ನಾಗಿತ್ತು ಬಿಡಿ. ಎಣ್ಣೆ ಸಾಂಗ್ ಬರೆಯೋದರಲ್ಲಿ ಒಂಥರಾ ಕಿಕ್ಕಿರುತ್ತೆ!

** ಬೇರೆ ಯಾವ್ಯಾವ ಚಿತ್ರಗಳಿಗೆ ಸಾಹಿತ್ಯ ರಚನೆ ಮಾಡಿದ್ದೀರಾ?*

ರೈಟ್ ಆದ್ರೆ ಜೊತೆಗೆ, ಮರುಜನ್ಮ ಚಿತ್ರದ 'ನನ್ನ ಒಲವಿನ ಕಾವೇರಿ', ಹನಿಹನಿ ಚಿತ್ರದ 'ಧಿನಕ ಧಿನಕ ಧಿನ್ನ', ಮಸ್ತ್ ಮಜಾ ಮಾಡಿ ಚಿತ್ರದ 'ಓಟ ಓಟ ಓಟಾನೋ', ಜಾಜಿ ಮಲ್ಲಿಗೆ ಚಿತ್ರದ 'ಚಿಟ್ಟೆ ಚಿಟ್ಟೆ', ಮನಸಿನ ಮಾತು ಚಿತ್ರದ 'ನಾನಿರಲು ನನ್ನವಳೆದುರು' ಸೇರಿದಂತೆ ಬಿಡುಗಡೆಯಾಗಬೇಕಿರುವ ಕೆಲವೊಂದು ಚಿತ್ರಗಳಿಗೆ ಹಾಡು ಬರೆದಿದ್ದೇನೆ. 'ನಾನಿರಲು ನನ್ನವಳೆದುರು' ಹಾಡು ನಾನು ಬರೆದಿರುವ ಹಾಡುಗಳಲ್ಲೇ ತುಂಬಾ ಇಷ್ಟವಾದ ಹಾಡು.

** ನೀವು ಸಂಭಾಷಣೆ ಬರೆದ ಚಿತ್ರಗಳನ್ನು ಹೆಸರಿಸುತ್ತೀರಾ?*

'ಸ್ನೇಹಿತರು' ಚಿತ್ರಕ್ಕೆ ಕೆ.ರಾಮನಾರಾಯಣ್ ಅವರ ಜೊತೆ ಚಿತ್ರಕತೆ ಬರೆದೆ. ಉಳಿದಂತೆ 'ಶಬ್ದಮಣಿ', 'ಸ್ವಯಂವರ' ಹಾಗೂ ಇನ್ನಷ್ಟೇ ಬಿಡುಗಡೆಯಾಗಬೇಕಿರುವ 'ಮೊದಮೊದಲ ಮಾತು ಚೆಂದ' ಮತ್ತು 'ಮನವಿ' ಚಿತ್ರಗಳಿಗೆ ಸಂಭಾಷಣೆ ಬರೆದಿದ್ದೇನೆ.

** ನಿಮ್ಮ ಇಷ್ಟದ ಸಾಹಿತಿಗಳು ಯಾರ್‍ಯಾರು?*

ದ.ರಾ.ಬೇಂದ್ರೆ, ಬಿ.ಆರ್.ಲಕ್ಷ್ಮಣ ರಾವ್, ಲಕ್ಷ್ಮಿನಾರಾಯಣ ಭಟ್ಟ ಹಾಗೂ ಹಂಸಲೇಖಾ. ಆಡು ಭಾಷೆಯನ್ನು ಹಾಡುಭಾಷೆ ಮಾಡಿ ನಮ್ಮಂಥವರೆಲ್ಲ ಚಿತ್ರರಂಗದ ಕಡೆ ತಿರುಗಿ ನೋಡುವಂತೆ ಮಾಡಿದ ಗೌರವ ಹಂಸಲೇಖಾರಿಗೆ ಸಲ್ಲಬೇಕು.

** ನಿಮ್ಮ ಮುಂದಿನ ಗುರಿಯೇನು?*

ನಾನು ಮೂಲತಃ ಬರಹಗಾರನಾಗಿದ್ದರೂ ಒಳ್ಳೆಯ ನಿರ್ದೇಶಕನಾಗುವ ಕನಸು ಹೊತ್ತಿದ್ದೇನೆ. ಈ ನಿಟ್ಟಿನಲ್ಲಿ 'ಸ್ನೇಹಿತರು', 'ಮೊದಮೊದಲ ಮಾತು ಚೆಂದ' ಚಿತ್ರಗಳಿಗೆ ಅಸೋಸಿಯೇಟ್ ಡೈರೆಕ್ಟರಾಗಿ ಕೆಲಸ ಮಾಡಿದ್ದೇನೆ.

** ನೀವು ಸಿನಿಮೇತರ ಕವಿತೆಗಳನ್ನೂ ಬರೆಯುತ್ತೀರಾ?*

ಹೌದು. ಆಗಾಗ ಕವಿತೆಗಳನ್ನೂ ಬರೆಯುತ್ತೇನೆ. ಇಲ್ಲಿ ಕೆಲವು ಸಾಲುಗಳಿವೆ ನೋಡಿ:

ಹೇಳದೇ ಬಂದು ಕುಳಿತೆ ನನ್ನ ಬಾಳಿನಲ್ಲಿ
ನನಗೇನು ಕೇಳಲಿಲ್ಲ
ಕೇಳದೇ ಹೊರಟು ನಿಂತೆ ನಿನ್ನ ದಾರಿಯಲ್ಲಿ
ನನಗೇಕೆ ಹೇಳಲಿಲ್ಲ

* * *

ಸುಖಿ ಸಂಸಾರಕ್ಕೆ
ಹನ್ನೆರಡು ಸೂತ್ರಗಳು
ಸುಖವಿಲ್ಲದ ಸಂಸಾರಕ್ಕೆ
ಹನ್ನೆರಡು
ನಿದ್ದೆ ಮಾತ್ರಗಳು

ಸಂದರ್ಶಕ: ಹೃದಯಶಿವ



ಹೊಗಳಿಕೆ ತೆಗಳಿಕೆ

...ಕುಳಿಯುತ್ತಿದ್ದರು. ದೂರದ ಗುಜರಾತಿನಿಂದ ತಿಂಗಳು ... ಬೆಂಗಳೂರಿನಲ್ಲಿ ಮಾನಸಿ ಎಂಬ ಯುವತಿಯ ... ಅನುಮಾನಾಸ್ಪದವಾಗಿ ಹೋದಹೋದಲ್ಲಿ ಸುತ್ತುತ್ತಿದ್ದ ...ಂಗಾರರನ್ನು ಎದುರಿಸುವ ಧೈರ್ಯಕ್ಕಾದರೂ ಈ ...ಸ್ ಖಂಡಿತಾ ಮಾನಸಿಯ ಉಪಯೋಗಕ್ಕೆ ಬರುತ್ತಿತ್ತು. ...ಜ್ಯ ಹಾಗು ದೇಶಾದ್ಯಂತ ಅವತ್ತೇ ಬಿಜೆಪಿ ಪಡೆಯಲ್ಲಿ ... ಬಹಳ ಡಿಮಾಂಡ್ ಇರುತ್ತಿತ್ತು, ಆದರೂ ಪರವಾಗಿಲ್ಲ, ...ದರೂ ಮಹಿಳೆಯರಿಗೆ ಮುಂಜಾಗ್ರತೆಯ ಸಲುವಾಗಿ ... ರಿಯಾಯತಿ ದರದಲ್ಲಿ ಹಂಚುವ ಪ್ರಯತ್ನ ...ಿದೆ.

- ಅವಿನಾಶ್ ಎಂ ಎಸ್, ಈ ಮೇಲ್ ಮೂಲಕ

ನೂರ್ ಮತ್ತು ನಾಗರಾಜ್ ... ಮುಖ್ಯವಾಹಿನಿಗೆ ಬರಬೇಕಿದೆ

...ರಿಜಂಸೆ ನಾಗರಾಜ್ ಹಾಗೂ ನೂರ ...ರ್‌ರಂತಹವರು ಸರಕಾರದ ವಿರುದ್ಧ ನಿಲ್ಲಲು ಸರ್ಕಾರ ...ರಿಸಿಕೊಂಡ ಮಾರ್ಗವೇ ಕಾರಣ. ಈಗ ಸರಕಾರವೇ ...ನ್ನು ಕರೆದು ಮಾತನಾಡುವ ಸಂದರ್ಭ ಎದುರಾಗಿದೆ. ...ರು ಈ ಕುರಿತು ಸರಕಾರಕ್ಕೆ ಮನವಿ ...ಕೊಂಡಿದ್ದಾರೆ. ಸರಕಾರದಿಂದಲೂ ಸಕಾರಾತ್ಮಕ ...ಯೆಯನ್ನು ನಿರೀಕ್ಷಿಸಲಾಗುತ್ತಿದೆ.

...ಗ ನಕ್ಸಲ್ ಹೋರಾಟ ಕವಲೊಡೆದು ಹೊರ ...ುವ ನಾಗರಾಜ್ ಮತ್ತು ನೂರ್ ...ರ್ ಉತ್ತಮ ಸಮಾಜ ಕಟ್ಟುವ ...ವರು. ಅದು ಅವರ ಮಾತುಗಳಲ್ಲಿ ...ಗಿದೆ. ಇಂತಹದೊಂದು ಬೇಡಿಕೆಗೆ ... ನಾಗರಿಕ ಸಮಾಜ ಎದುರು ...ತ್ತಿತ್ತು ಸಮಾಜ ಹಾಗೂ ನಾಗರಿಕ ... ಇಂದು ಎಷ್ಟು ಕಟ್ಟುಹೋಗಿದೆ ... ಸರಕಾರವೇ (ಅಧಿಕಾರಶಾಹಿ) ... ನಾಗರಿಕರಿಗೆ ಇಲ್ಲದ ...ದಾದರೂ ದೇಶವಿದ್ದರೆ ಒಡ...



ಹೋಗಬೇಕೆಂದು ಅನಿಸುತ್ತಿದೆ. ಕೃಷಿಕನಾಗುವುದು ಪಾಪದ ಕೆಲಸವಾಗಿದೆ. ಅಧಿಕಾರಿಗಳು ಕೊಬ್ಬಿ ಹೋಗಿದ್ದಾರೆ. ಜನರನ್ನು ಓಟಿಗಾಗಿ ನೋಟು ನೀಡಿ, ಆಯ್ಕೆಯಾಗಿ ಅದೇ ಜನರನ್ನು ರಾಜಕಾರಣಿಗಳು ಹುರಿದು ಮುಕ್ಕುತ್ತಿದ್ದಾರೆ. ಜಾತಿಯ ಅವಾಂತರಗಳು, ದೌರ್ಜನ್ಯಗಳು ಹಾಡುಹಗಲೇ ಸಂಭವಿಸುತ್ತಿವೆ. ಸರಕಾರವನ್ನು ಮುಂದಿಟ್ಟುಕೊಂಡು ಬದಲಿ ಪರ್ಯಾಯ ಸರಕಾರಗಳದೇ ಕಾರುಬಾರು.

ಈ ವ್ಯವಸ್ಥೆ ಪ್ರಾಮಾಣಿಕರು ಹಾಗೂ ಸಮಾಜದ ಹಿತಕ್ಕೆ ಶ್ರಮಿಸುವವರನ್ನು ಸದೆ ಬಡಿದುಬಿಡುತ್ತದೆ. ತನ್ನ ವಿರುದ್ಧ ಹೊರಟವರನ್ನು ಪೊಲೀಸು, ಅಧಿಕಾರ, ಕಾಯ್ದೆಗಳಿಂದ ಸದ್ದಡಗಿಸಿಬಿಡುತ್ತದೆ. ಇದು ಲಾಗಾಯ್ತಿನಿಂದ ನಡೆದುಬಂದಿದೆ. ನೂರ್ ಮತ್ತು ನಾಗರಾಜ್ ಪ್ರಜಾಪ್ರಭುತ್ವದ ಮಾದರಿಯಲ್ಲಿಯೇ ಗಟ್ಟಿಯಾಗಿ ಉಳಿದು ಈ ವ್ಯವಸ್ಥೆಯನ್ನು ಸರಿಪಡಿಸಹೊರಡ ಬೇಕಿದೆ. ಇದು ತುರ್ತಾಗಿ ಆಗಬೇಕಿದೆ.

ಈ ಸರಕಾರ ನಿಮಗೆ ಆಗಿರುವ ಅನ್ಯಾಯವನ್ನು ಸರಿಪಡಿಸಿ ಮುಖ್ಯ ವಾಹಿನಿಗೆ ಕರೆತರುವ ಮಾನವೀಯ ಕಾರ್ಯವನ್ನು ಮಾಡುವದೆಂದು ನಂಬಿದ್ದೇನೆ. ಬನ್ನಿ ನಿಮಗೆ ಸ್ವಾಗತವಿದೆ. ನಿಮ್ಮೊಂದಿಗೆ ನಾವಿದ್ದೇವೆ.

- ಶಿವಕುಮಾರ ಕಟ್ಟೀಮನಿ, ಘಟಪ್ರಭಾ

ಕಪಟ ಜ್ಯೋತಿಷಿಗಳಿಗೆ ಕಡಿವಾಣ ಬೀಳುವುದೆಂದು?

ನಮ್ಮ ದೇಶದಲ್ಲಿ ಅಥವಾ ನಮ್ಮ ರಾಜ್ಯದಲ್ಲಿ ಏನೇ ಒಂದು ವಿಶೇಷ ಘಟನೆ ನಡೆಯಲಿ - ಅದು ದುಃಖದ ವಿಷಯವೇ ಆಗಿರಲಿ ಅಥವಾ ಖುಷಿಯ ವಿಷಯವೇ ಆಗಿರಲಿ - ಕನ್ನಡ ಟಿವಿ ಚಾನ್ನೆಲ್ಲಿನವರು ಯಾವುದಾದರೂ ಒಬ್ಬ ಹಳೆಯ ವಿಚಾರದ ಜ್ಯೋತಿಷಿಯನ್ನು ಕರೆದು ತಂದು ಅವನಿಂದ ಎಲ್ಲ ತರಹದ ಮೂರ್ಖ ಮಾತುಗಳನ್ನು ಹೇಳಿಸಿ ಪ್ರೇಕ್ಷಕರಲ್ಲಿ ಮೌಢ್ಯ ಬಿತ್ತುವ ಅವಕಾಶ ಎಂದೂ ತಪ್ಪಿಸಿಕೊಳ್ಳುವುದಿಲ್ಲ. ಮೂಢನಂಬಿಕೆಗಳನ್ನು ಹರಡುವುದರಲ್ಲಿ ಕಸ್ತೂರಿ ಚಾನಲ್ ಮೊದಲನೆಯ ಸ್ಥಾನ ಪಡೆಯುತ್ತದೆ. ಇತ್ತೀಚಗೆ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ತೀರಿಕೊಂಡಾಗಲೂ ಕನ್ನಡ ಚಾನೆಲ್ಲುಗಳು ತಮ್ಮ ಈ ಕೊಳಕು ಚಾಳಿ ಬಿಡಲಿಲ್ಲ.

ಒಂದು ಚಾನೆಲ್ಲಿನಲ್ಲಿ ಚಂದಾ ಪಾಂಡೆ ಎಂಬ ಬೆಡಗಿ - ಕ್ಷೌರಿಸಿ ಮುದುಕಿ - ಮೈಸೂರು ದಸರೆಯಲ್ಲಿ ಆನೆಯ ಮೇಲಿನ



ಅಂಬಾರಿ ಎಡಕ್ಕೆ ವಾಲಿತ್ತು, ಅರಮನೆಯ ಮಾಡಿನಲ್ಲಿ ಗಿಡುಗಗಳು ಗೂಡು ಕಟ್ಟಿದ್ದವು, ಒಡೆಯರ್ ದಸರೆಯಂದು ಬನ್ನಿ ಮುಡಿಯಲು ಬೆಳ್ಳಿ ಪಲ್ಲಕ್ಕಿಯ ಬದಲು ಕಾರಿನಲ್ಲಿ ಹೋಗಿದ್ದರು, ಬನ್ನಿ ಮರದ ಪೂಜೆಯಲ್ಲಿ ತಪ್ಪುಗಳಾದವು ಎಂದೆಲ್ಲಾ ಬೂಸಿ ಬಿಟ್ಟಳು. ಒಡೆಯರ್ ತೀರಿಕೊಂಡ ಮೇಲೆ ಟಿವಿ ಕ್ಯಾಮರಾದ ಮುಂದೆ ಕುಳಿತು ಇದನ್ನೆಲ್ಲ ಹೇಳುವ ಬದಲು ಅವಳು ದಸರೆಯಂದೇ ನೇರವಾಗಿ ಒಡೆಯರ್‌ರಿಗೆ ಹೇಳಿ ಅವರ ಮರಣ ತಪ್ಪಿಸಲಿಲ್ಲವೇಕೆ? ಯಾವುದೇ ಘಟನೆ ಘಟಿಸಿದ ಮೇಲೆ ಅದರ ಮುನ್ಸೂಚನೆ ಸಿಕ್ಕಿತ್ತು ಎಂದು ಬೊಗಳೆ ಬಿಡುವ ಬದಲು ಮುನ್ಸೂಚನೆ ಸಿಕ್ಕ ಕೂಡಲೇ ಅದನ್ನು ಕಡೇ ಪಕ್ಷ ಟಿವಿಯಲ್ಲಿಯಾದರೂ ಯಾಕೆ ಮೊದಲೇ ಹೇಳಲಿಲ್ಲ? ಮೇಲೆ ಹೇಳಿದ ಕಾಲ್ಪನಿಕ ಮುನ್ಸೂಚನೆಗಳೆಲ್ಲ ಹಿಂದಿನ ಹಲವಾರು ವರ್ಷಗಳಿಂದ ಆಗುತ್ತಲೇ ಇದ್ದರೂ ಆಗೆಲ್ಲ ಯಾಕೆ ಒಡೆಯರರಿಗೆ ಏನೂ ಆಗಲಿಲ್ಲ? ಪ್ರತಿ ವರ್ಷ ಆನೆಯ ಮೇಲಿನ ಅಂಬಾರಿ ವಾಲಿರುತ್ತದೆ, ಹಲವಾರು ದಶಕಗಳಿಂದ ಅರಮನೆಯ ಮಾಡಿನಲ್ಲಿ ಗಿಡುಗಗಳು ಗೂಡು ಕಟ್ಟಿಕೊಂಡಿವೆ, ಹಲವಾರು ವರ್ಷಗಳಿಂದ ಒಡೆಯರ್ ಬನ್ನಿಮಂಟಪಕ್ಕೆ ಕಾರಿನಲ್ಲಿಯೇ ಹೋಗಿದ್ದಾರೆ, ಕಾರಣ ಪಾಳೆಗಾರಿಕೆಯ ಸಂಕೇತವಾದ ಪಲ್ಲಕ್ಕಿ ಸವಾರಿ ನಿಂತು ವರ್ಷಗಳೇ ಕಳೆದಿವೆ. ಹಾಗಿರುವಾಗ ಒಡೆಯರ್ ತೀರಿಕೊಂಡ ಮೇಲೆ ಮಾತ್ರ ಆ ಲೇಟ್ ಲತೀಫ್ ಜ್ಯೋತಿಷಿಗೆ ಇವೆಲ್ಲ ಅಪಶಕುನವೆಂದು ಹೇಗೆ ಜ್ಞಾನೋದಯವಾಗಿದ್ದು?

ಈ ತರ್ಕದಿಂದ ಸಾಬೀತಾಗುವುದೇನೆಂದರೆ ಈ ಟಿವಿ ಜ್ಯೋತಿಷಿಗಳೆಲ್ಲಾ ಪಕ್ಕಾ ಫ್ರಾಡ್ ಎಂಬುದು. ಯಾವುದೇ ಘಟನೆ ಘಟಿಸುವುದಕ್ಕೆ ಮುಂಚೆ ಇವರಿಂದ ಅದನ್ನು ಊಹಿಸುವುದಕ್ಕೆ ಆಗುವುದೇ ಇಲ್ಲ, ಆದರೆ ಅದು ಘಟಿಸಿದ ಮೇಲೆ ಮಾತ್ರ ಏನೇನೋ ಕಾಲ್ಪನಿಕ ಕಥೆ ಕಟ್ಟಿ ತಮ್ಮ ಒಣ (ಅ) ಜ್ಞಾನ ಪ್ರದರ್ಶಿಸುತ್ತಾರೆ. ಹಿಂದೂ ವೈದಿಕ ಸಂಪ್ರದಾಯಗಳ ಬಗೆಗೆ ಉದ್ದುದ್ದ ಭಾಷಣ ಬಿಗಿಯುವ ಈ ಮಿಲಿಟರಿ-ಕಟ್ ಜ್ಯೋತಿಷಿ ಚಂದಾಪಾಂಡೆ ಅದನ್ನು ತನ್ನ ಸ್ವಂತಕ್ಕೆ ಯಾಕೆ ಅನ್ವಯಿಸಿಕೊಳ್ಳುತಿಲ್ಲ? ಹಿಂದೂ ವೈದಿಕ ಹೆಂಗಸರು ಮುತ್ತೈದೆಯರಾಗಿರುವಾಗ ತಮ್ಮ ತಲೆ ಕೂದಲನ್ನು ಹುಡುಗರಂತೆ ಸಣ್ಣಗೆ ಕತ್ತರಿಸಿಕೊಳ್ಳುವುದು ಹಿಂದೂ ಸಂಪ್ರದಾಯಕ್ಕೆ ವಿರುದ್ಧವಾದುದು ಎಂಬುದು ಅವಳಿಗೆ ಗೊತ್ತಿಲ್ಲವೇ? ತಾವು ತುಂಬಾ ಕಲಿತವರು ಎಂದು ತೋರಿಸಿಕೊಳ್ಳಲು ಲ್ಯಾಪ್-ಟಾಪ್ ಇಟ್ಟುಕೊಂಡು ಜ್ಯೋತಿಷ್ಯವನ್ನು ಸ್ವಲ್ಪ ಇಂಗ್ಲಿಷಿನಲ್ಲಿಯೂ ಹೇಳಿ ಈ ಅರೆ-ಸಾಕ್ಷರ ಜ್ಯೋತಿಷಿಗಳು ಬೀಗುತ್ತಾರೆ. ಲ್ಯಾಪ್-ಟಾಪ್ ಮತ್ತು ಇಂಗ್ಲಿಷ್ ಭಾಷೆಯಿಂದ ಮಹಿಳಾ ಪ್ರೇಕ್ಷಕರನ್ನು ಹೆಚ್ಚು ಪ್ರಭಾವಗೊಳಿಸಬಹುದು ಎಂಬ ಲೆಕ್ಕಾಚಾರ ಇರಬಹುದು.

ಹಾಗಾಗಿ ಆದಷ್ಟು ಬೇಗ ಮೌಢ್ಯ ನಿಷೇಧ ಕಾಯ್ದೆ ಜಾರಿಗೊಳಿಸಿ ಈ ಮೂರ್ಖ ಟಿವಿ ಜ್ಯೋತಿಷಿಗಳಿಂದ ಜನರಿಗೆ ಬಿಡುಗಡೆ ಕೊಡಿಸಿದರೆ ಒಳಿತು.

- ಹರೀಶ್. ಎಂ. ರಾವ್, ಉಡುಪಿ

(ಅ) ಧರ್ಮಸ್ಥಳದ ಮೋದಿಯನ್ನು ಮುಂದಿಟ್ಟುಕೊಂಡು 'ನುಡಿಸಿರಿ' ಎಂಬ ಆತ್ಮ ವಂಚಕ ಕಿರಿಕಿರಿಯನ್ನು ನಡೆಸುತ್ತಿರುವ ಮೋಹನ್ ಆಳ್ವಾ ಮಡೆಸ್ನಾನವನ್ನು ಒಂದು ಸ್ತಬ್ಧ ಚಿತ್ರ ಮಾಡಿ ಜಿಲ್ಲೆ ಜಿಲ್ಲೆಯಲ್ಲೂ ಪ್ರದರ್ಶಿಸಬಹುದಲ್ಲಾ. ಅವರು ಹಾಗೆ ಮಾಡಿದರೆ ಹಿಂದೂ ಸಂಸ್ಕೃತಿ ಪುನೀತವಾದೀತು!

- ರವಿ ಕುಮಾರ್, ಹಾಸನ

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ ವ್ಯಕ್ತಿತ್ವವನ್ನು ಕುರಿತ ಗೌರಿ ಲಂಕೇಶ್ ಲೇಖನ ಚೆನ್ನಾಗಿತ್ತು.

- ಅನಿಲ್, ಶಿವಮೊಗ್ಗ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರಿಗೂ ಚಿಕ್ಕದಾಗಿ ಮತ್ತು ಚೊಕ್ಕವಾಗಿ SMS ಕಳುಹಿಸಬಹುದು.

Registered No.RNP/KA/BGS/2036/2014-16 Posted at : GPO, Bangalore-01. Friday



ಬ್ರಹ್ಮ ವಿತ್ ಬಿಜೆಪಿ ಲೀಡರ್ಸ್

ಉಪೇಂದ್ರ ಅಭಿನಯದ 'ಬ್ರಹ್ಮ' ಚಿತ್ರದ ಆಡಿಯೋ ಬಿಡುಗಡೆ ಕಾರ್ಯಕ್ರಮ ಹುಬ್ಬಳ್ಳಿಯ ನೆಹರು ಮೈದಾನದಲ್ಲಿ ಸಾವಿರಾರು ಜನರ ಸಮ್ಮುಖದಲ್ಲಿ ಅದ್ದೂರಿಯಾಗಿ ನಡೆದಿದೆ. 'ಬ್ರಹ್ಮ' ಚಿತ್ರದ ಸಂಗೀತ ನಿರ್ದೇಶಕ ಗುರುಕಿರಣ್ ಅವರು ನಡೆಸಿಕೊಟ್ಟ ಸಂಗೀತ ರಸಮಂಜರಿ ಕಾರ್ಯಕ್ರಮಕ್ಕೆ ಉತ್ತಮ ಪ್ರತಿಕ್ರಿಯೆ ದೊರೆಯುವುದರ ಜೊತೆಗೆ, ಚೇತನ್, ಚೈತ್ರಾ, ಅನುರಾಧಾ ಭಟ್ ಹಾಡುಗಾರಿಕೆ ಹಾಗೂ ಸಾಧು ಕೋಕಿಲ ಅವರ ಹಾಸ್ಯದ ಝಲಕ್ಕಿಗೆ ಜನ ಥ್ರಿಲ್ ಆಗಿದ್ದಾರೆ. ನೆಹರು ಮೈದಾನದ 'ಸಂಗೊಳ್ಳಿ ರಾಯಣ್ಣ' ವೇದಿಕೆಯಲ್ಲಿ ಆಯೋಜಿಸಿದ್ದ ಈ ಕಾರ್ಯಕ್ರಮಕ್ಕೆ ಬಿಜೆಪಿ ಮುಖಂಡರಾದ ಮನೋಹರ್ ಜೋಷಿ ಹಾಗೂ ಜಗದೀಶ ಶೆಟ್ಟರ್ ಆಗಮಿಸಿ ಉಪೇಂದ್ರರಿಗೆ ಶುಭಾಷಯ ಹೇಳಿರುವುದು ವಿಶೇಷ. ಮುಂಬರುವ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಉಪ್ಪಿಯ ಸುತ್ತ ಸಂಭವಿಸಬಹುದಾದ ರಾಜಕೀಯ ವಿದ್ಯಮಾನಗಳು ಈ ಮೂಲಕ ಆಸಕ್ತಿ ಕೆರಳಿಸಿವೆ ಎಂದೇ ಹೇಳಬಹುದು. ಇದೇ ವೇಳೆ ಉಪೇಂದ್ರ ಅವರು ಶಿವರಾಜ್‌ಕುಮಾರ್ ಅವರ ಚಿತ್ರ 'ಬಾದ್ ಷಹ'ದ ಟೈಟಲ್ ಬಿಡುಗಡೆ ಮಾಡಿ ತಮ್ಮದೇ ಅಭಿನಯದ 'ಕುಟುಂಬ' ಚಿತ್ರದ ನೆನಪಿಗೆ ಜಾರಿದರು. ಹಾಗೇನೆ, ಉತ್ತರ ಕರ್ನಾಟಕವನ್ನು ಹೊಗಳುವ ಪ್ರಯತ್ನಕ್ಕೆ ಮುಂದಾಗಿ ಆಧ್ಯಾತ್ಮ, ಅನುಭವ ಮಂಟಪ ಅಂತೆಲ್ಲಾ ಹೇಳುವುದನ್ನು ಮರೆಯಲಿಲ್ಲ. ಅಂದಹಾಗೆ ಕಾರ್ಯಕ್ರಮದಲ್ಲಿ ವಿಶೇಷವಾಗಿ ಎಲ್ಲರ ಗಮನ ಸೆಳೆದಿದ್ದು ಬಲೂನ್ ಡಾನ್ಸ್, ರೋಬೋಟ್ ಗಣಪ ಹಾಗೂ ನಿರ್ದೇಶಕ ಆರ್. ಚಂದ್ರು ಅವರಿಗೆ ಮಾಡಿದ ಸನ್ಮಾನ ಹಾಗೂ ಬಿರುದುಗಳು!

ನರ್ಸ್ ಜಯಲಕ್ಷ್ಮಿ ಈಗ ಡಾಕ್ಟರ್



ಮಾಜಿ ಮಂತ್ರಿ ರೇಣುಕಾಚಾರ್ಯರೊಡನೆ ತೆಗೆಸಿಕೊಂಡಿದ್ದ ಕಿಸ್ಸಿಂಗ್ ಫೋಟೋಗಳ ಮೂಲಕ ರಾತ್ರೋರಾತ್ರಿ ಫೇಮಸ್ಸಾದ ನರ್ಸ್ ಜಯಲಕ್ಷ್ಮಿಯವರು ನಂತರ 'ಬಿಗ್ ಬಾಸ್' ಕಾರ್ಯಕ್ರಮದಲ್ಲಿ ವಿವಾದಗಳ ಮೇಲೆ ವಿವಾದ ಹುಟ್ಟು ಹಾಕಿ ಮತ್ತಷ್ಟು ಫೇಮಸ್ಸಾದ ಸ್ಟೋರಿ ನಿಮಗೆಲ್ಲ ಗೊತ್ತಿದೆ. ಇಂಥ ಜಯಲಕ್ಷ್ಮಿ ಈಗ ಇನ್ನಷ್ಟು ಫೇಮಸ್ಸಾಗುವ ಆಸೆಯಿಂದ ಒಂದು ಸಿನಿಮಾದಲ್ಲಿ ನಟಿಸಲು ಮುಂದಾಗಿದ್ದಾರೆ. ಅದೂ ಡಾಕ್ಟರ್ ಪಾತ್ರದಲ್ಲಿ. ಚಿತ್ರದ ಹೆಸರು 'ಜಾಲಿ ಬಾರಿನಲ್ಲಿ ಪೋಲಿ ಹುಡುಗರು'. ಈ ಚಿತ್ರದ ನಿರ್ದೇಶಕರ ಹೆಸರು ಕಾರಂಜಿ ಶ್ರೀಧರ್ ಅಂತ. ಜಯಲಕ್ಷ್ಮಿಯವರು ಮಾಡುತ್ತಿರುವ ಪಾತ್ರ ಚಿಕ್ಕದಾದರೂ ವಿಶಿಷ್ಟವಾದದ್ದು ಎಂಬುದು ನಿರ್ದೇಶಕರು ನೀಡುವ ಭರವಸೆ. ಇಷ್ಟಕ್ಕೂ 'ಜಾಲಿ ಬಾರಿನಲ್ಲಿ ಪೋಲಿ ಹುಡುಗರು' ಎನ್ನುವ ರಸಮಯ ಟೈಟಲ್ ಇರುವ ಚಿತ್ರದಲ್ಲಿ ವಿವಾದಪ್ರಿಯೆ ಜಯಲಕ್ಷ್ಮಿಯವರು ಅದ್ಯಾವ ಹೊಸ ವಿವಾದ ಸೃಷ್ಟಿಸುತ್ತಾರೋ ಕಾದುನೋಡಬೇಕಿದೆ.

ಪುನೀತ್ ಮತ್ತೆ ಅಖಾಡಕ್ಕೆ



2013ರಲ್ಲಿ ತಮ್ಮ ಅಭಿನಯದ ಒಂದೇ ಒಂದು ಸಿನಿಮಾ ಕೂಡ ಬಿಡುಗಡೆಯಾಗದಿರುವ ಬಗ್ಗೆ ಪುನೀತ್ ರಾಜಕುಮಾರ್ ಅವರಿಗೆ ತುಸು ಬೇಸರವಿದೆಯಂತೆ. ಈ ಕುರಿತು ತಮ್ಮ 'ನಿನ್ನಿಂದಲೇ' ಚಿತ್ರದ ಹಾಡುಗಳ ಧ್ವನಿಸುರುಳಿ ಬಿಡುಗಡೆಯ ನಂತರ ಮಾತನಾಡಿದ ಪುನೀತ್ "ಕಳೆದ 2012 ರಲ್ಲಿ ತೆರೆ ಕಂಡ 'ಯಾರೇ ಕೂಗಾಡಲಿ' ನಂತರ ಇದುವರೆಗೂ ನಾನು ನಟಿಸಿರುವ ಯಾವೊಂದು ಚಿತ್ರವೂ ಬಿಡುಗಡೆಯಾಗಲಿಲ್ಲ. ಹಾಗಾಗಿ 2013 ರಲ್ಲಿ ನವ ಚಿತ್ರಗಳೂ ತೆರೆಕಾಣದ ವರ್ಷ. ಹೀಗಾಗುವುದು ಸರಿಯಲ್ಲವೆಂದು ನಾನು ಬಲ್ಲೆ. ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳುತ್ತೇನೆ" ಎಂದು ಹೇಳುವುದರ ಜೊತೆಗೆ, 2014 ರಲ್ಲಿ 'ನಿನ್ನಿಂದಲೇ' ಸೇರಿದಂತೆ, ತೆಲುಗಿನ 'ದೂಕುಡು' ಚಿತ್ರದ ಕನ್ನಡ ಅವತರಣಿಕೆ ಹಾಗೂ ಅದರ ನಂತರ ನಿರ್ದೇಶಕ ಪವನ್ ಒಡೆಯರ್ ಜೊತೆ ಮಾಡಲಿರುವ 'ರಾಜಾ ವಿಕ್ರಮ' ಚಿತ್ರಗಳು ಬಿಡುಗಡೆಯಾಗಲಿರುವ ಸೂಚನೆಗಳನ್ನು ನೀಡಿದ್ದಾರೆ. ಹಾಗೇನೆ, 'ಜಾಕಿ', 'ಅಣ್ಣಾ ಬಾಂಡ್' ನಂತರ ನಿರ್ದೇಶಕ ಸೂರಿ ಜೊತೆ ಮತ್ತೊಮ್ಮೆ ಇನ್ನೊಂದು ಚಿತ್ರ ಮಾಡುವ ಸಾಧ್ಯತೆಗಳಿವೆಯೆಂದೂ ಹೇಳಿದ್ದಾರೆ. ಅಂದಹಾಗೆ ಮಣಿಶರ್ಮ ಸಂಗೀತದಲ್ಲಿ ಮೂಡಿಬಂದಿರುವ 'ನಿನ್ನಿಂದಲೇ' ಚಿತ್ರದ ಹಾಡುಗಳು ಚೆನ್ನಾಗಿವೆ ಎಂಬ ಮಾತುಗಳು ಕೇಳಿಬರುತ್ತಿವೆ.



ರವಿವರ್ಮನ್ ಕನ್ನಡಕ್ಕೆ



ಹಿಂದಿಯ 'ರಾವಣ್ ಲೀಲಾ', 'ಬರ್ಫಿ', 'ಫಿರ್ ಮಿಲೇಂಗೆ', 'ಅರ್ಮಾನ್', 'ರಾಮ್ ಜಿ ಲಂಡನ್ ವಾಲೆ', ತಮಿಳಿನ 'ದಶಾವತಾರವಮ್', 'ಅನ್ನಿಯನ್', 'ವೇಟ್ಟೈಯಾಡು ವೆಳಿಯಾಡು', 'ಆಟೋಗ್ರಾಫ್', ತೆಲುಗಿನ 'ಬದ್ರಿನಾಥ್', ಮಲಯಾಳಂನ 'ಕಂದಹಾರ್', 'ವಕ್ಕಲತ್ತು ನಾರಾಯಣ ಕುಟ್ಟಿ', 'ಸತ್ಯಂ ಶಿವಂ ಸುಂದರಂ' ಹಾಗೂ ಇಂಗ್ಲಿಷಿನ 'ಫೈವ್ ಬೈ ಫೋರ್' ಚಿತ್ರಗಳು ಸೇರಿದಂತೆ ಅನೇಕ ಸಿನಿಮಾಗಳಿಗೆ ಕ್ಯಾಮೆರಾ ಹಿಡಿದು ಹೆಸರು ಮಾಡಿರುವ ಖ್ಯಾತ ಛಾಯಾಗ್ರಾಹಕ ರವಿವರ್ಮನ್ ಈಗ ಕನ್ನಡ ಚಿತ್ರವೊಂದರ ಕ್ಯಾಮರಾಮ್ಯಾನ್. ಮುರಳಿ ನಟಿಸುತ್ತಿರುವ 'ಉಗ್ರಂ' ಚಿತ್ರದ ಮೂಲಕ ಕನ್ನಡಕ್ಕೆ ಬರುತ್ತಿರುವ ರವಿವರ್ಮನ್ ಮೂಲತಃ ತಮಿಳುನಾಡಿನ ತಂಜಾವೂರಿನವರು. ನಿರ್ಮಾಪಕ, ಬರಹಗಾರರೂ ಆಗಿರುವ ಇವರು 'ಮಾಸ್ಕೋವಿನ್ ಕಾವೇರಿ' ಎಂಬ ತಮಿಳು ಚಿತ್ರದ ನಿರ್ದೇಶಕರೂ ಕೂಡ. ತಮಿಳುನಾಡು ಸರ್ಕಾರ ಕೊಡಲ್ಪಡುವ ರಾಜ್ಯ ಪ್ರಶಸ್ತಿ, ಫಿಲಂ ಫೇರ್ ಅವಾರ್ಡ್‌ಗಳು ಸೇರಿದಂತೆ ಅನೇಕ ಪ್ರಶಸ್ತಿಗಳು ಇವರಿಗೆ ಸಂದಿವೆ.

ಅಂದಹಾಗೆ, 'ಉಗ್ರಂ' ಚಿತ್ರಕ್ಕೆ ಶೇಕಡ 60ರಷ್ಟು ಭಾಗ ಮಾತ್ರ ರವಿವರ್ಮನ್ ಅವರ ಕ್ಯಾಮೆರಾ ವರ್ಕ್ ಇರುತ್ತದೆ. ಅವರು ಕಾರಣಾಂತರಗಳಿಂದ ಮುಂಬೈಗೆ ಹೊರಟ ಮೇಲೆ ಚಿತ್ರದ ಉಳಿದ ಭಾಗವನ್ನು 'ಒಲವೇ ಮಂದಾರ' ಚಿತ್ರಕ್ಕೆ ಕ್ಯಾಮೆರಾ ಹಿಡಿದಿದ್ದ ರವಿಕುಮಾರ್ ಸನ್ ಪೂರ್ತಿಗೊಳಿಸಿದ್ದಾರೆ ಎಂಬ ಮಾತುಗಳೂ ಕೇಳಿಬರುತ್ತಿವೆ.

'ಮಾಣಿಕ್ಯ'ದಲ್ಲಿ ಶರಣ್



'ರಾಂಬೋ' ಹಾಗೂ 'ವಿಕ್ಟರಿ' ಚಿತ್ರಗಳು ಒಂದಿಷ್ಟು ಹೆಸರು ಹಾಗೂ ದುಡ್ಡು ಮಾಡಿದ ನಂತರ ಶರಣ್ ಕೂಡ ಒಂದು ರೇಂಜಿಗೆ ಸ್ಟಾರ್ ವ್ಯಾಲ್ಯೂ ಗಿಟ್ಟಿಸಿಕೊಂಡಂಥ ನಟ. ಈ ಸ್ಟಾರ್ ವ್ಯಾಲ್ಯೂಯಿಂದಾಗಿ ಶರಣ್ ಸಣ್ಣಪುಟ್ಟ ಪಾತ್ರಗಳಲ್ಲಿ ನಟಿಸುವುದನ್ನು ನಿಲ್ಲಿಸಿಬಿಟ್ಟಿದ್ದರು. ಜೊತೆಗೊಂದಿಷ್ಟು ಹೊಸ ಹೊಸ ಚಿತ್ರಗಳಲ್ಲಿ ಹೀರೋ ಆಗಿ ಮುಂದುವರಿಯಲು ಯೋಜಿಸಿದ್ದರು. ಇಂಥ ಶರಣ್ ಈಗ ಸುದೀಪರ 'ಮಾಣಿಕ್ಯ' ಚಿತ್ರದಲ್ಲಿ ಅತಿಥಿನಟನಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಈ ನಿಟ್ಟಿನಲ್ಲಿ ಇತ್ತೀಚೆಗಷ್ಟೇ ಕೆಂಗೇರಿ ಬಳಿಯ ಬಿ.ಜಿ.ಎಸ್ ಕಾಲೇಜಿನಲ್ಲಿ ಸುದೀಪ್ ಜೊತೆ ನಟಿಸಿ ಬಂದಿದ್ದಾರೆ. 'ಮಾಣಿಕ್ಯ'ದ ಈ ವಿಶಿಷ್ಟವಾದ ಪಾತ್ರದಲ್ಲಿ ಶರಣ್ ನಟಿಸಲೂ ಕಾರಣವುಂಟು. ಈ ಮೊದಲು ಸುದೀಪರ 'ಕೆಂಪೇಗೌಡ' ಚಿತ್ರದಲ್ಲಿ ಶರಣ್ ನಿರ್ವಹಿಸಿದ್ದ ಪಾತ್ರಕ್ಕೂ 'ಮಾಣಿಕ್ಯ'ದಲ್ಲಿ ಇದೇ ಶರಣ್ ನಿರ್ವಹಿಸುತ್ತಿರುವ ಪಾತ್ರಕ್ಕೂ ಸಂಬಂಧ ಇರೋದೇ ಆ ಬಲವಾದ ಕಾರಣವಂತೆ. ಆ ಸಂಬಂಧ ಏನಿರಬಹುದು ಅನ್ನೋದು ತಿಳಿಯಬೇಕಾದರೆ 'ಮಾಣಿಕ್ಯ' ಚಿತ್ರವನ್ನು ನೋಡಬೇಕಾಗುತ್ತದೆ. ಅದಕ್ಕೂ ಮೊದಲು 'ಕೆಂಪೇಗೌಡ' ಚಿತ್ರವನ್ನು ಕಡ್ಡಾಯವಾಗಿ ನೋಡಿರಬೇಕಾಗುತ್ತದೆ!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com